CC-O. In Public Domain. Digitized by eGangotri

ಪ್ರಜಾಸರ್ಕಾರ
ಲೋಕಾಯುಕ್ತರೆಂಬೊ ಪ್ರಚಂಡ ಮಾರುತ

ಎರಡು ಸತ್ಯ ಕಥೆಗಳು

ಬುಡುಬುಡಿಕೆ ಕವನ



ಲೇಖಕರು:

Sri Vidyabharathi Book Centre, Sringeri

ನಾದಚಿಂತಾಮಣಿ, ಸಂಗೀತವಿದ್ವಾನ್, ಸಾಹಿತಿ ಲಕ್ಷ್ಮೀಕಾಂತ್ ಕಡಬ

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಜಾಸರ್ಕಾರ - ಲೋಕಾಯುಕ್ತರೆಂಬೊ ಪ್ರಚಂಡ ಮಾರುತ - ಎರಡು ಸತ್ಯ ಕಥೆಗಳು ಮತ್ತು ಬುಡುಬುಡಿಕೆ ಕವನ

ಲೇಖಕರು:

ನಾದಚಿಂತಾಮಣಿ, ಸಂಗೀತವಿದ್ವಾನ್, ಸಾಹಿತಿ ಲಕ್ಷ್ಮೀಕಾಂತ್ ಕಡಬ

ಪ್ರಕಾಶಕರು:

ಲಕ್ಷ್ಮೀಕಾಂತ್ ಕಡಬ

ನಂ. 19/2, ಪೂರ್ವಪುಣ್ಯ, ಮಾಡಲ್ ಹೌಸ್ 4ನೇ ಮುಖ್ಯ ರಸ್ತೆ, ಬಸವನಗುಡಿ,

ಬೆಂಗಳೂರು - 560 004. ಫೋನ್: 080-26760396. ಮೊಬೈಲ್ : 9449262388

Sri Vidyabharathi Book Centre, Sringeri

CC-O. In Public Domain. Digitized by eGangotri

Praja Sarkara - Lokayuktarembo Prachanda Maruta - Eradu Satya Kathegalu mathhu budubudike Kavana

First Edition : 2010

© Author

Price : **Rs. 60/-**

Typeset By :
Tulasi Impressions, Mobile: 9886357443

Printed at:
SRIDHARA PRINTERS
Hanumanthanagar, Bangalore - 560 019.
Mobile : 9342885423

Sri Vidyabharathi Book Centre, Sringeri.

CC-O. In Public Domain. Digitized by eGangotri

ಪ್ರಸ್ತಾವನೆ - ಲೇಖಕನ ಬಿನ್ನಹ

ದಿನಾಂಕ : 12-05-2010

"ಪ್ರಜಾಸರ್ಕಾರ - ಲೋಕಾಯುಕ್ತರೆಂಬ ಚಂಡಮಾರುತ - ಎರಡು ಸತ್ಯ ಕಥೆಗಳು - ಬುಡುಬುಡಿಕೆ ಕವನ (ಜಾನಪದ ಲಾವಣಿ)"

ಈ ಸಂಕಲನ ಸಾಮಾಜಿಕ ಕೃತಿಯನ್ನು ಲೋಕಾರ್ಪಣೆ ಮಾಡಲು ಸಕಲ ಸಿದ್ಧತೆಗಳೂ ನಡೆದಿವೆ. ಎರಡು "ಸತ್ಯ ಕಥೆಗಳು" ನನ್ನ ಹಿರಿಯ ಮಿತ್ರರೂ, ಶ್ರೀರಾಮನ ಪರಮ ಭಕ್ತರೂ ಆದ, ನಿವೃತ್ತ ಗೆಜ಼ಿಟೆಡ್ ಆಫೀಸರರ ಜೀವನದಲ್ಲಾದ "ಸಿಹಿ-ಕಹಿ" ಸತ್ಯ ಪ್ರಸಂಗಗಳು, ಮಿಕ್ಕ ಮೂರೂ ಕಥೆಗಳು ಸ್ವಕಲ್ಪಿತ - ಹಾಗೂ ಇಂದಿನ ಸಮಾಜದ ಭ್ರಷ್ಟಾಚಾರದ ನೈಜ ಚಿತ್ರಣವನ್ನು ಚಿತ್ರಿಸುವ ವಿಚಾರಭರಿತ ಕಥೆಗಳು. ಈ ಕೃತಿಗಳ ಹಿನ್ನೆಲೆಗೆ ಪ್ರೇರಕ ಶಕ್ತಿ ಲೋಕಾಯುಕ್ತ ಶ್ರೀ ಸಂತೋಷ್ ಹೆಗ್ಡೆಯವರು. ಅವರು ನನಗೆ ನೇರ ಪರಿಚಯವಿಲ್ಲದಿದ್ದರೂ ಅವರನ್ನು ಸಂದರ್ಶಿಸಿ, ನನ್ನ ಕೃತಿಯ ನಕಲನ್ನು ಸಮರ್ಪಿಸಿ, ಅವರ ದೈನಂದಿನ ಕಾರ್ಯದ ಮಧ್ಯೆ ನನ್ನ ವಿಮರ್ಶೆಯನ್ನೂ ಪಡೆದೆ.

ಹಲವಾರು ಮಾಸಗಳಿಂದ ಪ್ರತಿನಿತ್ಯ ಕರ್ನಾಟಕದ ಹೆಸರಾಂತ ಕನ್ನಡ ದಿನಪತ್ರಿಕೆಗಳಲ್ಲಿ (ಸರ್ಕಾರದ ಹಲವಾರು ಇಲಾಖೆಗಳಲ್ಲಿ, ಶ್ರೀಸಂತೋಷ್ ಹೆಗ್ಡೆಯವರೂ, ಅವರ ಸಿಬ್ಬಂದಿ ವರ್ಗವೂ, ಪೂರ್ವ ಸಿದ್ಧತೆಯೊಂದಿಗೆ ಧಿಡೀರ್ ಧಾಳಿ ನಡೆಸಿದಾಗ) ಸಾಮಾನ್ಯನೌಕರನಿಂದ ಹಿಡಿದು ಅತ್ಯುನ್ನತ ಗೆಜ಼ಿಟೆಡ್ ಅಧಿಕಾರಿವರೆಗೂ, ಹಲವಾರು ವರ್ಷಗಳಿಂದ ಭ್ರಷ್ಟಾಚಾರದ ಸಂಪತ್ತನ್ನು ಕೂಡಿಟ್ಟು, ಅವರ ನೈಜ ಆದಾಯಕ್ಕೆ ಮೂರು ನಾಲ್ಕು ಪಟ್ಟು ಹೆಚ್ಚಿನ ಸಂಪತ್ತು ಕೂಡಿಟ್ಟಿರುವುದು ಸಾರ್ವಜನಿಕರ ಗಮನಕ್ಕೆ ಬರುತ್ತಲೇ ಇದೆ. ರಾಜಕೀಯ ಕಪಿ ಮುಷ್ಠಿಯಲ್ಲಿರುವ ಘನ ಸರ್ಕಾರದ ಅಸಹಾಯಕ ಪರಿಸ್ಥಿತಿಯೂ ವೇದ್ಯವಾಗುತ್ತಿದೆ.

ಹಿರಿಯ ನಾಗರೀಕನಾಗಿ, ಎಂಭತ್ತರ ವಯಸ್ಸಿಗೆ ಕಾಲಿಡುತ್ತಿರುವ ನಾ ಕಂಡ ಸತ್ಯ ಈ ರೀತಿ ಇದೆ. ಇದೇ ಇಲಾಖೆಗಳಲ್ಲಿನ ಮೂವತ್ತು ವರ್ಷಗಳ ಹಿಂದಿನ ಅಧಿಕಾರೀವರ್ಗವೂ ಎಷ್ಟು ನಿಸ್ಪೃಹರಾಗಿ, ಪ್ರಾಮಾಣಿಕರಾಗಿ, ಕರ್ತವ್ಯನಿಷ್ಠರಾಗಿ, ಸಮಾಜ ಚಿಂತಕರಾಗಿ, ಸತ್ಯ - ನ್ಯಾಯ, ಧರ್ಮ - ನೀತಿಗಳಿಗೆ, ಬದ್ಧರಾಗಿ ನಿವೃತ್ತರಾಗಿದ್ದು, ದೈವಿಕ ಚಿಂತನೆ ಮಾಡುತ್ತಿದ್ದುದನ್ನೂ, ಮಾಡುತ್ತಿರುವುದನ್ನೂ ಕಣ್ಣಾರೆ ಕಂಡವ. ಅದೇ ಈಗಿನ ಅಧಿಕಾರಿ ವರ್ಗವು, ವೃತ್ತಿಯನ್ನು ಕಾಯಕವೆಂದು ಭಾವಿಸದೇ ಹಣಕ್ಕಾಗಿ, ಸ್ವಾರ್ಥಕ್ಕಾಗಿ, ಜಾತೀಯ

Sri Vidyabharathi Book Centre, Sringeri

 CC-O. In Public Domain. Digitized by eGangotri

ಭಾವನೆಯಿಂದ ಕೆಲಸ ಮಾಡುತ್ತಿರುವುದು ನಿತ್ಯ ಸತ್ಯ. ವಿದ್ಯಾಭ್ಯಾಸದಿಂದ ಹಿಡಿದು ವೃತ್ತಿ ದೊರೆಯುವವರೆಗೆ - ಜಾತಿ, ಹಣ, ರಾಜಕೀಯ ವರ್ಚಸ್ಸು, ಶಿಫಾರಸ್ಸು ಪ್ರಧಾನ ವಾಗಿದ್ದು, ''ಹಣಚೆಲ್ಲಿದವನು ಹಣಮಾಡದಿರುವನೇ'' ಎಂಬ ಚಿಂತೆ ನನ್ನನ್ನು ಬಾಧಿಸುತ್ತಿದೆ. ಬಲೆ ಬೀಸಿದಾಗ, ಬೃಹತ್ ಮೀನುಗಳು ಹಾಗೂ ತಿಮಿಂಗಿಲಗಳು ಸಿಕ್ಕಿ ಬೀಳುವುವೆಂಬ ಖಚಿತ ಮಾಹಿತಿ ಲೋಕಾಯುಕ್ತರ ಜ್ಯೋತಿಷ್ಯದಲ್ಲಿದೆಯೇನೋ? ಯಾವುದೂ ಜೆಳ್ಳಿಲ್ಲ- ಒಬ್ಬನಾದರೂ ನಿಸ್ಪೃಹ ಅಧಿಕಾರಿ ಪತ್ತೆಯಾಗಲಿಲ್ಲ.

ಈ ಭ್ರಷ್ಟಾಚಾರಿಗಳ ಊರಾವುದೋ, ಜಾತಿಯಾವುದೋ, ಓದಿದ್ದೆಲ್ಲೋ, ಬೆಳೆದದ್ದೆಲ್ಲೋ, ಉದ್ಯೋಗವೆಲ್ಲೋ - ಧನ, ಕನಕ, ವಸ್ತು, ವಾಹನ, ಚರ ಆಸ್ತಿ, ಸ್ಥಿರ ಆಸ್ತಿ ಮಾಡಿದುದೆಲ್ಲೆಲ್ಲೋ? ಇವರ ಕುಟುಂಬಕ್ಕಿರುವುದೂ ಒಂದೋ, ಎರಡೋ, ಅಥವಾ ಮೂರು ಮಕ್ಕಳೋ ? ತೃಪ್ತಿಯೆಂಬ ಪದದ ಅರಿವಿಲ್ಲದೆ, ''ಪಾಪಿಯಾ ಧನಾ ಪ್ರಾಯಶ್ಚಿತ್ತಕೇ'' ಎಂಬಂತೆ ಬೇನಾಮಿ ಹೆಸರಲ್ಲೆಲ್ಲಾ ಆಸ್ತಿ, ಹಣ, ವಾಹನ ಹಾಗೂ ಬೆಲೆಬಾಳುವ ವಸ್ತುಗಳು.

ಇವರ ಹಿನ್ನೆಲೆ ನೋಡಿ! ಅತ್ಯಂತ ಬಡತನ, ಇಲ್ಲವೇ ಮಧ್ಯಮವರ್ಗ. ಕಷ್ಟತರದ ವಿದ್ಯಾಭ್ಯಾಸ, ವಾರಾನ್ನ, ಭಿಕ್ಷಾನ್ನ, ಉಪವಾಸ, ಸಾರ್ವಜನಿಕ ಇಲ್ಲವೇ ಸ್ವಜಾತೀಯ ಉಚಿತ ವಿದ್ಯಾನಿಲಯಗಳಲ್ಲಿ ಅಧ್ಯಯನ. ಆದರೂ ಇವರಿಗೆ ಉದ್ಯೋಗ ದೊರೆತ ಹಲ ಮಾಸಗಳಲ್ಲಿಯೇ ತಮ್ಮ ಹಿನ್ನೆಲೆಯನ್ನು ಮರೆತು, ''ಲಂಚವಿದ್ದರೆ ಕೆಲಸ'' ಕಾರ್ಯಕ್ರಮಕ್ಕೆ ಬದ್ಧರಾಗುವರು. ವೃತ್ತಿಯಲ್ಲಿ ಔನ್ನತ್ಯ ಪಡೆದಂತೆ, ರಾಜಕೀಯ ಪ್ರಭುಗಳ ಸಮಾಗಮ, ಸಹವಾಸ, ಪ್ರೇರಣೆ ಹಾಗೂ ಒತ್ತಡದಿಂದ ಮಹಾಭ್ರಷ್ಟಾಚಾರಿಗಳಾಗುವರು. ಸಲ್ಲದ ಹವ್ಯಾಸಗಳಿಗೂ ದಾಸರಾಗುವರು. ನಮ್ಮ ಭಾರತದ ರಾಜ್ಯಾಂಗ, ಶಾಸಕಾಂಗ, ನ್ಯಾಯಾಂಗಗಳೂ ಈ ಭ್ರಷ್ಟಾಚಾರಿಗಳ ರಕ್ಷಕರಾಗಿ, ವರ್ಷಗಟ್ಟಲೆ ಮೊಕ್ಕದ್ದಮೆಯ ತೀಪು ಹೊರಬೀಳದೆ, ಅಧಿಕಾರಿಗೆ ಕಾನೂನಿನ ಭಯವಿಲ್ಲದೆ, ಬಡವ ಅತ್ಯಂತ ಬಡವನಾಗಿ, ಹಣವಂತ ಮಹಾ ಸಿರಿವಂತನಾಗಿಯೇ ಬದುಕುವ. ಈ ಅನ್ಯಾಯಕ್ಕೆ ನಮಗೆ ಪ್ರಜಾಸರ್ಕಾರ ಸಾಕ್ಷಿಯಾಗಿದೆ.

ಹರಿದಾಸರ ಕೃತಿ ''ಆರು ಹಿತವರು ನಿಮಗೆ ಈ ಮೂವರೊಳಗೇ - ನಾರಿಯೋ - ಧಾರಿಣಿಯೋ - ಬಲುಧನದ ಸಿರಿಯೋ'' ಸ್ಮರಿಸುತ್ತಾ ಲೋಕಾಯುಕ್ತರಿಗೆ ಪರಮಾಧಿ ಕಾರ ನೀಡುವ ಸರ್ಕಾರವನ್ನು ನಿರೀಕ್ಷಿಸುತ್ತಾ, ನನ್ನ ಮಾತಿಗೆ ಮುಕ್ತಾಯ ಹಾಡುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನು ಉತ್ತಮ ಗಮಕಿ, ಅತ್ಯುತ್ತಮ ಕರ್ನಾಟಕ ಸಂಗೀತಗಾರ – ಸಂಗೀತ ಕಲಾ ನಿಧಿ ಡಾ॥ ಆರ್.ಕೆ. ಶ್ರೀಕಂಠನ್ ರವರ ಅತ್ಯಂತ ಹಿರಿಯ ಶಿಷ್ಯ. ನಾನು ಸಾಹಿತಿಯಾಗಲು ಕಾರಣ ಸೆಪ್ಟೆಂಬರ್ 11, 2001ರಂದು ಅಮೆರಿಕಾದ ನ್ಯೂಯಾರ್ಕಿನ ವಿಶ್ವವಿಖ್ಯಾತ ವ್ಯಾಪಾರೀ ಕಟ್ಟಡದ ದುರಂತದಲ್ಲಿ ನನ್ನ ಸುಂದರ ಕುವರ ಯುವ ತಂತ್ರಜ್ಞಾನಿಯ ಸಾವಿಗೆ ಕಾರಣರಾದ ವಿಶ್ವಕುಖ್ಯಾತ ಬಿನ್ ಲಾಡೆನ್ ಮತ್ತು ಸಹಚರರು. ''ನಿರೀಕ್ಷೆ'' ನನ್ನ ಚೊಚ್ಚಲ ಕೃತಿ. ಓದಿ ಜೀರ್ಣಿಸಿಕೊಳ್ಳಿ. ಉಗ್ರ ಸಮೂಹಕ್ಕೆ ಭಾರತೀಯನ ಸವಾಲ್.

ಲೋಕಾರ್ಪಣೆಯಾದ ನನ್ನ ಸ್ವಯಂ ಕೃತಿಗಳು – ನಿರೀಕ್ಷೆ; ಭಾರತದಿ ಬ್ರಾಹ್ಮಣರು (ವಿಚಾರ ಸಂಕಿರಣ – ಆತ್ಮಾವಲೋಕನ ಕಾವ್ಯ) ; ನಾಮಕುಸುಮ ಮಾಲಾ (ಶ್ರೀ ಶಂಕರಭಗವತ್ಪಾದರ ಸ್ತೋತ್ರ ಸಂಗ್ರಹ – ಸ್ವಯಂ ರಾಗ, ತಾಳ ಸಂಯೋಜನೆ ಮತ್ತು ಸದ್ವಿಮರ್ಶೆಯೊಡನೆ); ಭಾರತೀಯರಿಗೆ ದಾರಿದೀಪ – ಮುಖ್ಯ ನ್ಯಾಯಮೂರ್ತಿ ಶ್ರೀ ರಾಮಾಜೋಯ್ಸ್ ಮತ್ತು ಬೆಂಗಳೂರಿನ ಮಾಜಿ ಮೇಯರ್ ಶ್ರೀ ಜಿ. ನಾರಾಯಣ ರವರ ಮುನ್ನುಡಿಯೊಡನೆ (ಜೇಬಿನಲ್ಲಿಡಬಹುದಾದ, ಯುವ ಜನಾಂಗಕ್ಕೆ ಮಾರ್ಗದರ್ಶಕ ಪುಸ್ತಕ); ಸತ್ಯವಂತರಿಗಿದು ಕಾಲವಲ್ಲ ; (ಭಾರತದ ಹಿಂದಿನ ವೈಭವೋಪೇತ ಸಂಸ್ಕೃತಿ – ಇಂದಿನ ಅನೀತಿ, ಭ್ರಷ್ಟಾಚಾರ ಇತ್ಯಾದಿ).

ಲೋಕಾರ್ಪಣೆಗೆ ಈಗ ಸಿದ್ಧವಾಗಿರುವ ಕೃತಿಗಳು. ಮಾನವ ಹೃದಯ (ಜಾನಪದ ಲಾವಣಿ ; ಮೂಲ – ಹೃದ್ರೋಗ ತಜ್ಞ ಡಾ॥ ವಿ. ಪರಮೇಶ್ವರ ; ಶ್ರೀ ಗಾಯತ್ರೀ ನಾಮ ಮಹಿಮೆ (24 ಅಕ್ಷರಗಳ ಪದಗಳ ಸಮುಚ್ಚಯ) ; ನಿತ್ಯ ಪ್ರಾರ್ಥನಾ ಪುಟಾಣಿ ಪುಸ್ತಕ ''ಭಜಗೋವಿಂದಂ'' – (ಪದ್ಯ, ರಾಗತಾಳ ಸಂಯೋಜನೆ ಹಾಗೂ ತಾತ್ಪರ್ಯದೊಡನೆ) ; ''ಪರಿವರ್ತನಾ'' ಎಂಬ ಸ್ವಕಲ್ಪಿತ ನಾಟಕ ಇಂದಿನ ಸಮಾಜದ ಪರಿಸ್ಥಿತಿಗೆ ಅನುಗುಣವಾದ ನಾಟಕ ; ಕಟ್ಟಕಡೆಯದಾಗಿ (ಪ್ರಜಾಸರ್ಕಾರ, ಲೋಕಾಯುಕ್ತರೆಂಬ ಚಂಡಮಾರುತ, ಎರಡು ಸತ್ಯ ಕಥೆಗಳು, ಬುಡಬುಡಿಕೆ ಲಾವಣಿ.) ನನ್ನ ಕೃತಿಗಳಿಗೆ ಸಾಂದರ್ಭಿಕ ಮುನ್ನುಡಿ ಹಾಗೂ ಸದ್ವಿಮರ್ಶೆಗಳನ್ನು ನೀಡಿದ ಸಾಹಿತಿಗಳನ್ನೂ, ಸುಜ್ಞಾನಿಗಳನ್ನೂ, ಸ್ಮರಿಸಿ ಅಭಿನಂದಿಸುತ್ತೇನೆ.

ಪ್ರಪ್ರಥಮವಾಗಿ ತುಮಕೂರು ಶ್ರೀ ರಾಮಕೃಷ್ಣ ವಿವೇಕಾನಂದಾಶ್ರಮದ ರೂವಾರಿ – ಗುರೂಜೀ ಶ್ರೀ ವೀರೇಶಾನಂದರು ; ಅಭಿನಯ ಚತುರ ಡಾ॥ ಮಾಸ್ಟರ್ ಹಿರಣ್ಣಯ್ಯ, ಕಾನೂನು ಚತುರ – ಲೋಕಾಯುಕ್ತ ಶ್ರೀ ಸಂತೋಷ್ ಹೆಗ್ಡೆಯವರು ; ಕರ್ನಾಟಕ ನಾಟಕ ಅಕ್ಯಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣನವರು, ಕೊಳ್ಳೇಗಾಲದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಸರಾಂತ ವೈದ್ಯ, ಕಲಾವಿದ ಲಯನ್ಸ್ ಕ್ಲಬ್ ಅಧ್ಯಕ್ಷ ಡಾ।। ಶಿವರುದ್ರಸ್ವಾಮಿಯವರು ; ಹಿರಿಯ ಹಾಸ್ಯನಟರಾದ ಶ್ರೀ ಮುಖ್ಯಮಂತ್ರಿ ಚಂದ್ರುರವರು ; ಚಿಕ್ಕನಾಯಕನ ಹಳ್ಳಿ ಶೃಂಗಾರ ಪ್ರಕಾಶನದ ರೂವಾರಿಗಳೂ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರೂ, ನಿವೃತ್ತ ಪ್ರಾಚಾರ್ಯರೂ ಆದ ಶ್ರೀ ಎಂ.ವಿ. ನಾಗರಾಜರಾವ್‌ರವರು ; ಉಡುಪಿಯ ಮಹಾನ್ ಪ್ರವಚನಕಾರ ನಿವೃತ್ತ ಪ್ರಾಧ್ಯಾಪಕ ಡಾ।। ಡಿ. ಆರ್. ಪಾಂಡುರಂಗರವರು, ಉಡುಪಿಯ ಮತ್ತೊರ್ವ ಮಹಾನ್ ಸಾಹಿತಿ ನಿವೃತ್ತ ಪ್ರಾಧ್ಯಾಪಕ ಉಪ್ಪಂಗಳ ರಾಮಭಟ್ಟರು, ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರೂ, ಮಹಾ ಸಾಹಿತಿಗಳೂ ಆದ ಶ್ರೀ ಬೆ.ಗೊ. ರಮೇಶ್‌ರವರು, ಬೆಂಗಳೂರಿನ ಅತ್ಯಂತ ಹಿರಿಯ ಹೃದ್ರೋಗ ತಜ್ಞ ಡಾ।। ವಿ. ಪರಮೇಶ್ವರರವರು ; ನನ್ನ ಆತ್ಮೀಯ ಗೆಳೆಯ ಹಿರಿಯ ಕಾದಂಬರಿಕಾರ ಶ್ರೀ ಎಸ್.ವಿ. ಶ್ರೀನಿವಾಸರಾಯರು ; ಪ್ರವಚನ ಭೀಷ್ಮ, ಕರ್ನಾಟಕ ಸರ್ಕಾರದ ಗೃಹಸಚಿವರ ಆಪ್ತ ಕಾರ್ಯದರ್ಶಿ ಶ್ರೀ ಎಸ್.ವಿ. ಪ್ರಸನ್ನರವರು ; ಕನ್ನಡ ಧಾರವಾಹಿಗೆ ಯೋಗ್ಯವಾದಂತಹ ಕಾದಂಬರಿಗಳನ್ನು ತಮ್ಮದೇ ಆದ ಮಾತು ಮತ್ತು ಸಂಭಾಷಣೆಗಳಿಂದ ಕನ್ನಡ ಕುಲ ಕೋಟಿಗೆ ಅರ್ಪಿಸುತ್ತಿರುವ ''ಜ್ಞಾನಗಂಗಾ'' ನನ್ನ ಭಗಿನಿ ''ಉದಯಗೌರಿ''ರವರು ; ಈ ಮಹಾನ್ ವ್ಯಕ್ತಿಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮುಖಪುಟದ ಸುಂದರ ಬುಡಬುಡಿಕೆ ಚಿತ್ರವನ್ನು ಬರೆದು ಕೊಟ್ಟ ಕನ್ನಡ ಕಲಾವಿದ ಸನ್ಮಿತ್ರ ಶ್ರೀ ಮೋಹನ್‌ರವರನ್ನೂ, ಅತ್ಯುತ್ತಮ ಡಿ.ಟಿ.ಪಿ. ವ್ಯವಸ್ಥೆಗೆ ಕಾರಣರಾದ ಶ್ರೀಮತಿ ದೇವಿಕ ಹಾಗೂ ನನ್ನ ಕಿರಿಯ ಮಿತ್ರ ಆದಿತ್ಯ ಗ್ರಾಫಿಕ್ಸ್‌ನ ಮಾಲೀಕ ಶ್ರೀ ಎಚ್.ಆರ್. ಸತೀಶ್‌ರವರನ್ನೂ ಸ್ಮರಿಸುವುದು ಅತಿ ಮುಖ್ಯ.

''ಮಾನವ ಹೃದಯ'' ಹಾಗೂ ''ಪರಿವರ್ತನಾ'' ನಾಟಕದ ಬಿಡುಗಡೆಯ ಜವಾಬ್ದಾರಿ ಹೊತ್ತುಕೊಂಡ ಶ್ರೀ ಸಬ್ಬನಹಳ್ಳಿ ರಾಜು (ಅಂಕ ಸಾಹಿತ್ಯ, ಬೆಂಗಳೂರು) ರವರಿಗೆ ನಾನು ಚಿರಋಣಿ.

ಶ್ರೀ ಗಾಯತ್ರೀ ನಾಮಸ್ತೋತ್ರದ ತಪ್ಪು ಒಪ್ಪುಗಳನ್ನು ಪರಿಶೀಲಿಸಿ ಸೂಕ್ತ ಸಲಹೆಯನ್ನಿತ್ತ ನನ್ನ ಮಿತ್ರರಾದ ವೇ।।ಬ್ರ।।ಶ್ರೀ।। ಸುಬ್ರಾಯಶರ್ಮ ಹಾಗೂ ವೇ।।ಬ್ರ।।ಶ್ರೀ।। ನಾಗರಾಜ್‌ರವರಿಗೆ ನನ್ನ ಪ್ರಣಾಮಗಳು.

-ನಾದಚಿಂತಾಮಣಿ, ಸಂಗೀತವಿದ್ವಾನ್, ಸಾಹಿತಿ

ಲಕ್ಷ್ಮೀಕಾಂತ್ ಕಡಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಕನ್ನಡ ಪವಿತ್ರ ನೆಲದ ಖ್ಯಾತ ಸಂಗೀತಗಾರರಾದ ನಾದಚಿಂತಾಮಣಿ ಶ್ರೀ ಲಕ್ಷ್ಮೀಕಾಂತ್ ಕಡಬರವರು ಬದುಕಿನ ಎಂಬತ್ತು ವಸಂತಗಳನ್ನು ಪೂರೈಸುತ್ತಿರುವ ಹಿರಿಯ ಚೇತನರಾಗಿದ್ದಾರೆ. 'ಸಂಗೀತವೆಂಬುದು ಜನಪೀಳಿಗೆಗೆ ವಿಷಯಾಸಕ್ತಿಯನ್ನು ಉದ್ದೀಪನಗೊಳಿಸುವ ಕೂಗಾಟವಲ್ಲ! ಅದೊಂದು ದೈವಿಕ ಸಂಜೀವಿನಿ' ಎಂಬ ಸತ್ಯವನ್ನು ಸಮಾಜಕ್ಕೆ ಮನಗಾಣಿಸುತ್ತಾ ಬಂದ ಅನುಭಾವಿಗಳೇ ಶ್ರೀ ಲಕ್ಷ್ಮೀಕಾಂತರು.

ಸನ್ಮಾನ್ಯರು ಸ್ವಾತಂತ್ರ್ಯ ಪೂರ್ವದಲ್ಲಿ ಜನಿಸಿದವರು, ಜೀವನಾನುಭವದ ಹಿನ್ನೆಲೆಯುಳ್ಳವರು. ತಮ್ಮ ಬದುಕಿನಲ್ಲಿ ನೆರವಾದವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರಲ್ಲದೆ ಸಮಾಜದಲ್ಲಿ ಕಂಡು ಬರುವ ಲೋಪದೋಷಗಳನ್ನು ತಿದ್ದುವ ಬದ್ಧತೆಯುಳ್ಳವರೂ ಹೌದು.

ಅವರ ಜೀವನಾನುಭವವು ಲಿಖಿತರೂಪ ತಾಳಿ ಸಾವಿರಾರು ಜನರ ಕೈ ಸೇರಿದೆ, ಜನರು ಆಲೋಚಿಸುವಂತೆ ಮಾಡಿದೆ!

ಅವರ ಇತ್ತೀಚಿನ ಪುಸ್ತಕ, 'ಪ್ರಜಾಸರ್ಕಾರ ಲೋಕಾಯುಕ್ತರೆಂಬ ಪ್ರಚಂಡ ಮಾರುತ' ಎಂಬ ಕಿರುಹೊತ್ತಿಗೆಯನ್ನು ಅವಲೋಕಿಸಿದಾಗ ಶ್ರೀಯುತರ ಅಭಿಪ್ರಾಯವು, 'ಹೇಗಿದ್ದ ಸಮಾಜ ಹೀಗೇಕಾಯ್ತು?' ಎಂಬ ನೋವಿನ ಛಾಪನ್ನು ಸೂಚಿಸುತ್ತದೆ!

ಶ್ರೀಯುತರು ಸಮಗ್ರ ಸಮಾಜವನ್ನು ಕೂಲಂಕುಷವಾಗಿ ಪರಾಮರ್ಶಿಸಿ ತಮ್ಮ ಅಭಿಪ್ರಾಯದಲ್ಲಿ ಪ್ರಸ್ತುತ ಸನ್ನಿವೇಶವನ್ನು ಯಾವುದೇ ಉತ್ಪ್ರೇಕ್ಷೆಗೆ ಎಡೆಮಾಡದೆ ಚಿತ್ರಿಸಿದ್ದಾರೆ. ಮಾನವ ಬದುಕಿಗೆ ಸಂಬಂಧಿಸಿದ ಎಲ್ಲ ಕ್ಷೇತ್ರಗಳ ಬಗ್ಗೆಯೂ ಅಭಿಪ್ರಾಯಿಸಿದ್ದಾರೆ. ಪ್ರಾಚೀನ ಭಾರತವು ಪ್ರತಿಪಾದಿಸಿದ ಹತ್ತು ಹಲವು ಮೌಲ್ಯಗಳನ್ನು ನಾಗರಿಕತೆಗೆ ಬಲಿನೀಡುತ್ತಿರುವುದು ದುರ್ದೈವ ಮತ್ತು ಹೇಯವಾದದ್ದು ಎಂಬ ಅಂತರಂಗದ ಮಾತನ್ನು ಹೊರಗೆಡವಿದ್ದಾರೆ. ವ್ಯಕ್ತಿಯ ಸಮಸ್ಯೆಯಿಂದ ಪ್ರಾರಂಭಿಸಿ, ಕೌಟುಂಬಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳನ್ನೊಳಗೊಂಡು ಕಡೆಗೆ ಧಾರ್ಮಿಕ ಕಲುಷಿತಗೊಂಡಿರುವ ಬಗ್ಗೆ ತಮ್ಮ ನೋವನ್ನು ತೋಡಿಕೊಂಡಿದ್ದಾರೆ.

ನಿಜ! ಮಾನವನು ಜೀವನ ಉದ್ದೇಶದಿಂದ ದೂರ ಸರಿಯುತ್ತಿದ್ದಾನೆ. ಕನಿಷ್ಠ ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವ ಭರದಲ್ಲಿ ಜೀವನದ ಚರಮಧ್ಯೇಯವನ್ನೇ ಮರೆತಿದ್ದಾನೆ. ಶ್ರಮಸಂಸ್ಕೃತಿ ಕಾಣೆಯಾಗುತ್ತಿದೆ. ದುಡಿಮೆಯೇ ದೇಶದ ಸಂಪತ್ತೆಂದು ತಿಳಿದು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರಮಿಸಬೇಕಿದ್ದ ಮಾನವ ದುಡಿಮೆಗೆ ಶಾರ್ಟ್‌ಕಟ್ ಹುಡುಕುತ್ತಿದ್ದಾನೆ. ಕಾರ್ಯಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕರ್ತವ್ಯವನ್ನು ನಿರ್ವಹಿಸದೆ ಕೇವಲ ಸ್ವಂತರಕ್ಷಣೆಗಾಗಿ ಹಕ್ಕುಬಾಧ್ಯತೆಗಳ ಹೋರಾಟವನ್ನು ಅವಲಂಬಿಸಿದ್ದಾನೆ. ಇದರ ಪರಿಣಾಮವಾಗಿ ಇಂದು ವ್ಯಕ್ತಿ, ಸಮಾಜ ಮತ್ತು ದೇಶವು 'ಮಾನಸಿಕ ದಾರಿದ್ರ್ಯ'ದಿಂದ ವಿಲವಿಲನೆ ಒದ್ದಾಡುತ್ತಿದೆ!

ಮೌಲ್ಯಗಳಿಗೆ ನಾವು ತಿಲಾಂಜಲಿಯಿತ್ತು ಮೌಲ್ಯಗಳ ಮೂಲಪುರುಷನಾದ ಪರಮಾತ್ಮನ ಕೃಪೆಯನ್ನು ಪಡೆಯುವಲ್ಲಿ ಅಸಮರ್ಥರಾಗಿದ್ದೇವೆ. 'ರೂಪವಿರುವುದು ಪಾಪಾಚರಣೆಗಲ್ಲ' ಎಂಬ ಕುಮಾರಸಂಭವದ ಮಾತನ್ನು ನಾಗರಿಕ ಜನತೆ ನಿರ್ಲಕ್ಷಿಸಿ ಸಾಗುತ್ತಿರುವುದು ಸುಸ್ಪಷ್ಟವಾಗಿದೆ.

ಇನ್ನು ತನ್ನ ದಿವಾಳಿತನವನ್ನು ನಿವಾರಿಸಿಕೊಳ್ಳಲು, ಸರ್ಕಾರದ ಬೊಕ್ಕಸಕ್ಕೆ ಲಾಭ ಗಳಿಸಲು ಸರ್ಕಾರಗಳು ಲಾಟರಿ, ಪ್ಲೇವಿನ್, ರೇಸ್, ಅಶ್ಲೀಲ ಕೇಂದ್ರಗಳಿಗೆ ಪರವಾನಗಿ ನೀಡುತ್ತಾ ಬರುತ್ತಿರುವುದು ಆಡಳಿತದಲ್ಲಿ ನೈತಿಕತೆಯ ಕೊರತೆಯನ್ನು ಎತ್ತಿ ತೋರುತ್ತಿದೆ. ಕೆಲವೊಮ್ಮೆ ಒಳ್ಳೆಯ ಉದ್ದೇಶಗಳಿಗೆ ಕೆಟ್ಟ ಮಾರ್ಗಗಳ ಮೂಲಕ ಆರ್ಥಿಕ ಸಂಪನ್ಮೂಲವನ್ನು ಸೃಷ್ಟಿಸಿಕೊಳ್ಳುವ ಪ್ರಯತ್ನಗಳೂ ತೀವ್ರಗೊಳ್ಳುತ್ತಿವೆ. ಇದರಿಂದ ಜನರ ನೈತಿಕ ಪ್ರಜ್ಞೆಯೂ ದಿವಾಳಿಯಾಗುತ್ತಿದೆ. ಸರಿಯಾದ ಆಡಳಿತ ನಡೆಸದ ದೇಶದಲ್ಲಿ ಹಣದುಬ್ಬರ, ಅಂತಃಕಲಹಗಳು ಹೆಚ್ಚುತ್ತವೆ. ಇವುಗಳಿಂದ ತಾತ್ಕಾಲಿಕವಾಗಿ ಅನುಕೂಲ ಕಂಡುಬಂದರೂ ಭವಿಷ್ಯದಲ್ಲಿ ಶಾಶ್ವತವಾದ ದುರಂತಗಳಿಗೆ ಎಡೆಮಾಡಿಕೊಡುತ್ತದೆ.

ಇನ್ನು ಧಾರ್ಮಿಕ ಕ್ಷೇತ್ರದ ಬಗ್ಗೆಯೂ ಸಮಾಜವು ಶ್ರದ್ಧೆ ನಂಬಿಕೆಗಳನ್ನು ಕಳೆದುಕೊಳ್ಳದಂತೆ ಧಾರ್ಮಿಕ ಮುಖಂಡರು ಎಚ್ಚರವಹಿಸಿ ಒಳ ಹೊರಗಿನಲ್ಲಿ ಪ್ರಾಮಾಣಿಕರಾಗಿ ಪರಿಶುದ್ಧ ಜೀವನಕ್ಕೆ ಒತ್ತು ನೀಡಬೇಕಿದೆ. ಇಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಮಾತು ಉಲ್ಲೇಖಾರ್ಹ : 'ಗುರುಗಳನ್ನು ಹಗಲು ರಾತ್ರಿ ಪರೀಕ್ಷಿಸಿ ಸ್ವೀಕರಿಸಬೇಕು' ಎಂದು. ಕಾಮ ಕಾಂಚನಗಳು ಹಾಗೂ ಹೆಸರು ಕೀರ್ತಿಗಳಿಗಾಗಿ ಸರ್ವಸಂಗ ಪರಿತ್ಯಾಗಿಗಳೆನಿಸಿಕೊಂಡವರೂ ಆಕರ್ಷಿತರಾಗುತ್ತಿರುವುದು ಆರೋಗ್ಯಕರ ಲಕ್ಷಣ ಎಂದೆನಿಸದು. ತ್ಯಾಗ, ವೈರಾಗ್ಯ, ಚಾರಿತ್ರ್ಯ ಮತ್ತು ಕಾರುಣ್ಯಗಳು ಸಂನ್ಯಾಸಿಗಳಿಗೆ ಭೂಷಣ.

ಒಟ್ಟಾರೆ ಭಾರತವನ್ನು ಸಮಗ್ರ ದೃಷ್ಟಿಕೋನದಿಂದ ಅವಲೋಕಿಸಿದಾಗ ಜವಾಬ್ದಾರಿಯುತ ವ್ಯಕ್ತಿಗಳಿಂದ ಕೂಡಿದ ಅತಂತ್ರ ರಾಷ್ಟ್ರಕ್ಕಿಂತ ಬೇಜವಾಬ್ದಾರಿ ವ್ಯಕ್ತಿತ್ವದಿಂದ ಕೂಡಿದ ಸ್ವತಂತ್ರ ರಾಷ್ಟ್ರವು ಹೀನವಾಗಿ ಕಾಣುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ಸಮಸ್ಯೆಗಳನ್ನಷ್ಟೇ ವಿಶ್ಲೇಶಿಸಿದರೆ ಸಾಲದು. ಇವುಗಳಿಗೆ ಪರಿಹಾರವನ್ನು ಹುಡುಕುವ ಭಗೀರಥ ಪ್ರಯತ್ನವೂ ಬೇಕು. ಬಾಲ್ಯದಲ್ಲಿ ಕುಡಿಯುವ ನೀರಿಗಾಗಿ ಪರಿತಪಿಸಿದ, ಅಧ್ಯಯನಕ್ಕೆ ವಿದ್ಯುದ್ದೀಪವೂ ಲಭ್ಯವಿಲ್ಲದಿದ್ದ ಗ್ರಾಮ್ಯ ಕುಟುಂಬದ ಬಾಲಕನೊಬ್ಬ ಭವಿಷ್ಯದಲ್ಲಿ ಮೈಸೂರು ರಾಜ್ಯದ ದಿವಾನನಾಗಿ ಸಾರ್ವಜನಿಕರ ಮೂಲಭೂತ ಅವಶ್ಯಕತೆಗಳಾದ ಕುಡಿಯುವ ನೀರು ಮತ್ತು ವಿದ್ಯುಚ್ಛಕ್ತಿಗಾಗಿ ಅವಿಶ್ರಾಂತವಾಗಿ ಶ್ರಮಿಸಿ ಯಶಸ್ವಿಯಾದುದು ಇತಿಹಾಸ. ಈ ಸಾಧನೆಗೈಯ್ದವರೇ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ.

ಸ್ವಾಮಿ ವಿವೇಕಾನಂದರು ಕಳೆದ ಶತಮಾನದಲ್ಲಿ ಹೇಳಿದ ಮಾತು ವಿಚಿತ್ರವೆನಿಸಿದರೂ ಸತ್ಯ : "Give light to poor and more light to rich. Give light to uneducated and more light to educated !" ಶಿಕ್ಷಣವು ಅಕ್ಷರಸ್ಥರ ನಿರ್ಮಾಣದಲ್ಲಿ ಯಶಸ್ವಿಯಾಗಿದೆಯೇ ಹೊರತು ಜವಾಬ್ದಾರಿಯುತ ಪ್ರಜೆಗಳ ನಿರ್ಮಾಣ ಕಾರ್ಯದಲ್ಲಲ್ಲ! That is why the present situation produces many B.Tech's but very few real engineers, many M.B.B.S's but very few real doctors, and many Ph.D's but very few true Seientists!

ಅಂದು ಭಾರತ ಕಂಗೆಟ್ಟಿತ್ತು. ಬಡತನ ರಾಷ್ಟ್ರದಲ್ಲಿ ರಾರಾಜಿಸುತ್ತಿತ್ತು. ಪೂಜೆ, ನೈವೇದ್ಯಗಳಿಗೇನೂ ಕೊರತೆ ಇರಲಿಲ್ಲ. ಧರ್ಮಬೋಧನೆಯೂ ಸಾಂಗವಾಗಿ ಸಾಗಿತ್ತು. ಆದರೆ 'ಹಸಿದ ಹೊಟ್ಟೆಗೆ ಧರ್ಮಬೋಧನೆ ನಿಷ್ಪ್ರಯೋಜಕ' ಎಂಬ ಶ್ರೀರಾಮಕೃಷ್ಣ ಪರಮಹಂಸರ ಮಾತು ಆಲೋಚನೀಯ.

ಇಂದು ಭಾರತ ಸಾಕಷ್ಟು ಸುಧಾರಿಸಿದೆ, ಯಾವ ಪ್ರಜೆಯ ಮಧ್ಯಪ್ರದೇಶ (ಉದರ)ದ ಪೋಷಣೆಗೆ ಕೊರತೆಯಿಲ್ಲ. ನಮಗಿಂದು ಬೇಕಾಗಿರುವುದು ಉತ್ಕೃಷ್ಟ ನೀತಿ ಸಂಹಿತೆ ಮತ್ತು ಪರಿಶುದ್ಧ ಆಧ್ಯಾತ್ಮಿಕ ವಿಚಾರಗಳು.

'A country cannot be raised by raising the roofs of the building but by raising the minds of the people!' ಎಂಥ ಸೊಗಸಾದ ಮಾತು! ಏಕೆಂದರೆ Increase of Knowledge without increase of wisdom will increase the sorrow!

ರಾಷ್ಟ್ರಕ್ಕಿಂದು ಸಮಗ್ರ ಚಿಕಿತ್ಸೆ ಬೇಕಿದೆ ! ಉತ್ತಮ ಶಿಕ್ಷಣ ವ್ಯವಸ್ಥೆ ಅತ್ಯವಶ್ಯಕವೆನಿಸಿದೆ. ಶಿಕ್ಷಣ ಮತ್ತು ಚಾರಿತ್ರ್ಯಗಳು 'ಪರ್ಯಾಯ ಪದ' ಗಳಾಗಬೇಕಿದೆ. ವ್ಯಕ್ತಿತ್ವ ಮತ್ತು ಚಾರಿತ್ರ್ಯ ನಿರ್ಮಾಣಗಳ ಮೂಲಕ ವ್ಯಕ್ತಿ ಹಾಗೂ ರಾಷ್ಟ್ರಗಳು ಸದೃಢವಾಗಲು, ಮಾನವೀಯವಾಗಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧ್ಯ. ಈ ನಿಟ್ಟಿನಲ್ಲಿ ಸಮಾಜದ ಹಿರಿಯ ಚೇತನಗಳು ಹಾಗೂ ಜವಾಬ್ದಾರಿಯುತ ಪ್ರಾಜ್ಞರು ಚಿಂತಿಸಿ ಕಾರ್ಯಪ್ರವೃತ್ತರಾಗಬೇಕಿದೆ. ಅಸತ್ಯವನ್ನು ಸತ್ಯದಿಂದ ಮತ್ತು ದ್ವೇಷವನ್ನು ಪ್ರೀತಿಯಿಂದಲೇ ಗೆಲ್ಲಬೇಕು. ಮುಳ್ಳನ್ನು ಮುಳ್ಳಿನಿಂದ ತೆಗೆಯಬಹುದಾದರೂ ಕೆಸರನ್ನು ಕೆಸರಿನಿಂದ ತೊಳೆಯಲಾಗದು, ಬದಲಾಗಿ ಶುದ್ಧ ನೀರಿನಿಂದಲೇ ತೊಳೆಯಬೇಕಲ್ಲವೇ!

ಶ್ರೀ ಲಕ್ಷ್ಮೀಕಾಂತ ಕಡಬರ ಪುಸ್ತಕವು ಜನರನ್ನು ಆಲೋಚನೆಗೆ ಎಡೆಮಾಡಿಕೊಡುವುದರಲ್ಲಿ ಸಂದೇಹವಿಲ್ಲ. ಸಹಸ್ರ ಚಂದ್ರದರ್ಶನದ ಹೊಸ್ತಿಲಲ್ಲಿರುವ ಶ್ರೀಯುತರು ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಯಶಸ್ವಿಯಾಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಅನಂತ, ಶುಭಾಶಯಗಳು,

ಇಂತಿ

ಶ್ರೀರಾಮಕೃಷ್ಣ ಸ್ಮರಣೆಗಳೊಂದಿಗೆ

(ಸಹಿ) ಸ್ವಾಮಿ ವೀರೇಶಾನಂದ
ಮುಖ್ಯಸ್ಥರು, ಶ್ರೀರಾಮಕೃಷ್ಣಾಶ್ರಮ, ತುಮಕೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಮರ್ಶೆ

ಕರ್ನಾಟಕ ಸಂಗೀತ ವಿದ್ವಾಂಸರೂ, ಉದ್ದಾಮ ಗಮಕಿಗಳೂ, ಅತ್ಯುತ್ತಮ ಸಾಹಿತಿಗಳೂ ಆದ ಎಂಬತ್ತರ ಹರೆಯದ, ಹಿರಿಯ ನಾಗರೀಕರಾದ ಶ್ರೀ ಲಕ್ಷ್ಮೀಕಾಂತ ಕಡಬರವರು ನನ್ನ ಕಿರು ವಿಮರ್ಶೆಗಾಗಿ, ಜಾನಪದ ಕನ್ನಡ ಲಾವಣಿ - "ಪ್ರಜಾಸರ್ಕಾರ - ಲೋಕಾಯುಕ್ತರೆಂಬೋ ಪ್ರಚಂಡ ಮಾರುತ, ಎರಡು ಸತ್ಯ ಕಥೆಗಳು ಹಾಗೂ ಬುಡುಬುಡಿಕೆ (ಸ್ವಯಂರಚಿತ) ಕವನ"ದ ನಕಲನ್ನು ಕೊಟ್ಟರು.

ಯಾವ ಪಕ್ಷಕ್ಕೂ ಬೆರಳು ತೋರದೆ, ತಮ್ಮದೇ ಆದ ಒಂದು ಕಲ್ಪನಾ ಕಥೆಯನ್ನು ಸೃಷ್ಟಿಮಾಡಿ, ಇಂದಿನ ಸಾಮಾಜಿಕ, ರಾಜಕೀಯ ಹಾಗೂ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಕಾರ್ಯವೈಖರಿಯನ್ನು ತಮ್ಮ ಲೇಖಣಿಯಿಂದ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಅಧಿಕಾರ ಹಾಗೂ ಹಣದ ದಾಹ, ಹೇಗೆ ಭ್ರಷ್ಟಾಚಾರಕ್ಕೆ ದಾರಿಯಾಗುತ್ತದೆ - ನ್ಯಾಯ, ನಿಷ್ಠೆಗಳು ಹೇಗೆ ಹಣದ ಮುಂದೆ ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತವೆ ಎಂದು ಜಾನಪದ ಲಾವಣಿಯ ಮೂಲಕ ಜನರ ಮನಸ್ಸಿಗೆ ತಲುಪಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವ ಸ್ಥಿತಿಯನ್ನೂ, ಇಂದಿನ ಜನತೆಯ ಮಾನಸಿಕ ಭಾವನೆಗಳನ್ನೂ, ವಿಶೇಷವಾಗಿ ಚಿತ್ರಿಸಿದ್ದಾರೆ. ಲೋಕಾಯುಕ್ತರ ಕಾರ್ಯವೈಖರಿಯನ್ನು ಮೆಚ್ಚಿ, ಅವರಿಗೆ ಹೆಚ್ಚಿನ ಅಧಿಕಾರ, ರಾಜಕೀಯ ವ್ಯಕ್ತಿಗಳ ಮೇಲೂ ಕಾನೂನು ಕ್ರಮ ಜರುಗಿಸಲು ಅವಕಾಶ ಸಿಕ್ಕಿ, ಭ್ರಷ್ಟಾಚಾರದ ಆಧಾರ ರಹಿತ ಹಣ, ಸರ್ಕಾರದ ಬೊಕ್ಕಸಕ್ಕೆ ಸೇರಲೆಂದೂ, ಆ ಹಣದಿಂದ ನಾಡನ್ನು ಕಟ್ಟಲೂ, ಪರದೇಶಿ ಸಾಲ ತೀರಲೂ ಅನುಕೂಲವೆಂದು ಪ್ರತಿಪಾದಿಸಿದ್ದಾರೆ.

ಎರಡು ಸತ್ಯ ಕಥೆಗಳು ಹೃದಯಸ್ಪರ್ಶಿ, ಬುಡುಬುಡಿಕೆ ಪದ್ಯವನ್ನು ಅವಿದ್ಯಾವಂತರೂ, ವಿದ್ಯಾವಂತರೂ ಹಾಡಿದರೆ, ಅದೇ ಒಂದು ರೀತಿಯ ಸಾಮಾಜಿಕ ಆಂದೋಳನ.

ಶ್ರೀ ಕಡಬರವರು ಲೋಕಾರ್ಪಣೆ ಮಾಡಿದ ಕೃತಿಗಳು ಹಲವಾರು - ಸತ್ಯವಂತರಿಗಿದು ಕಾಲವಲ್ಲಾ; ಭಾರತೀಯರಿಗೆ ದಾರಿದೀಪ ; ಭಾರತದಿ ಬ್ರಾಹ್ಮಣರು ; - ನಾನು ಕುಸುಮಮಾಲಾ (ಸಂಕಲನ) ಹಾಗೂ ಅವರೇ ಹಾಡಿರುವ ಸಿ.ಡಿ.ಗಳು ಜನಪ್ರಿಯವಾಗಿವೆ.

ಈಗ ಐದು ಕೃತಿಗಳನ್ನು ಲೋಕಾರ್ಪಣೆ ಮಾಡುತ್ತಿದ್ದಾರೆ - 'ಮಾನವ ಹೃದಯ ಮಂತ್ರಾಕ್ಷರ ಮಹಿಮೆ ; Medical Ethics (ಮೂಲ ಡಾ. ವಿ. ಪರಮೇಶ್ವರ); ಗಾಯತ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಜಾಸರ್ಕಾರ ಹಾಗೂ ಲೋಕಾಯುಕ್ತರೆಂಬೊ ಪ್ರಚಂಡ ಮಾರುತ ಸಾಮಾಜಿಕ ಲಾವಣಿ - ಪರಿವರ್ತನಾ ಎಂಬ ಅತ್ಯುತ್ತಮ ಸ್ವಯಂಕೃತ ಸಾಮಾಜಿಕ ನಾಟಕ.

ಭಗವಂತನು ಶ್ರೀ ಕಡಬ ರವರಿಗೆ ಉತ್ತಮ ಆರೋಗ್ಯ, ಆಯಸ್ಸು ಹಾಗೂ ತುಂಬಿದ ಉತ್ಸಾಹವನ್ನಿತ್ತು, ಅವರಿಂದ ಇನ್ನೂ ಉತ್ತಮ ಕೃತಿಗಳು ಜನತೆಗೆ ಲಭ್ಯವಾಗಲಿ ಎಂದು ಹಾರೈಸುವ ;

(ಸಹಿ) ಎನ್. ಸಂತೋಷ್ ಹೆಗ್ಡೆ
(ಎನ್. ಸಂತೋಷ್ ಹೆಗ್ಡೆ)
ಲೋಕಾಯುಕ್ತರು

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂದ,

ಮುಖ್ಯ ಮಂತ್ರಿ ಚಂದ್ರು
ಬೆಂಗಳೂರು

ನನ್ನ ಹಿರಿಯ ಮಿತ್ರರೂ, ಕಲಾವಿದರೂ, ಸಾಹಿತಿಗಳೂ ಆದ ಶ್ರೀ ನಾದಚಿಂತಾಮಣಿ ಲಕ್ಷ್ಮೀಕಾಂತ್ ಕಡಬರವರು, ನನ್ನ ವಿಮರ್ಶೆಯನ್ನು ಬಯಸಿ, ಜಾನಪದ ಲಾವಣಿ., "ಪ್ರಜಾಸರ್ಕಾರ, ಲೋಕಾಯುಕ್ತರೆಂಬೋ ಪ್ರಚಂಡಮಾರುತ, ಎರಡು ಸತ್ಯ ಕಥೆಗಳು ಹಾಗೂ ಸ್ವಯಂಕಲ್ಪಿತ ಬುಡುಬುಡಿಕೆ ಪದ"ದ ನಕಲನ್ನು ದಯಪಾಲಿಸಿದ್ದರು.

ಬಿಡುವಿಲ್ಲದ ಸಮಯದಲ್ಲಿಯೂ ಅಲ್ಲಲ್ಲಿ ಕಣ್ಣು ಹಾಯಿಸಿದೆ. ಇದೊಂದು ಅಪರೂಪದ "ಸತ್ಯ ಸಾಹಿತ್ಯ" ಎಂದು ನನ್ನ ಅನಿಸಿಕೆ.

ಇಂದಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಎಲ್ಲಾ ಕ್ಷೇತ್ರಗಳ, ಹೊಲಸು ಹಾಗೂ ಭ್ರಷ್ಟಾಚಾರವನ್ನು ವಿಡಂಬನೆಗಾಗಿ, ಅರ್ಥವತ್ತಾಗಿ, ನೀತಿಬೋಧಕವಾಗಿ ವಿವರಿಸಿದ್ದಾರೆ. ಅರವತ್ತು ವರ್ಷಗಳ ಹಿಂದಿನವರಿಗೂ, ಇಂದಿನವರಿಗೂ ಇರುವ ಭಾವನೆಗಳನ್ನು ಸತ್ಯವಾಗಿ ವಿಮರ್ಶಿಸಿದ್ದಾರೆ. ಹಳ್ಳಿಯ ಅಮಾಯಕ, ರಾಜಕೀಯದಿಂದ ದಿಲ್ಲಿಗೆ ಬಂದು ಸಚಿವ ಸ್ಥಾನವನ್ನು ಆಕ್ರಮಿಸಿ, ಹೇಗೆ ಭ್ರಷ್ಟಾಚಾರಿಯಾದ? ಅವನ ದೇಶಪ್ರೇಮವೇನಾಯಿತು? ಎಂದು ಪ್ರಶ್ನಿಸಿದ್ದಾರೆ. ಜೂಜುಗಾರಿಕೆ, ಕುಡಿತ, ವೇಶ್ಯಾವಾಟಿಕೆ ಇತ್ಯಾದಿಗಳನ್ನೂ ಅಣಕವಾಡಿದ್ದಾರೆ.

ಜಾನಪದ ಶೈಲಿಯಲ್ಲಿ - ಹಣಕ್ಕೆ ಪ್ರಾಧಾನ್ಯತೆಯನ್ನಿತ್ತು ವಿದ್ಯಾವಂತರಾಗಿ ಭ್ರಷ್ಟಾಚಾರದಿಂದ ಕೋಟಿ ಕೋಟಿ ಹಣವನ್ನು ದೋಚಿ ಕೊನೆಗೆ ಲೋಕಾಯುಕ್ತರ ಬಲೆಗೆ ಬಿದ್ದು, ಕಾನೂನಿನಡಿ ಹೆಣಗುವುದನ್ನೂ ಒಂದು ತಾವೇ ಸೃಷ್ಟಿಸಿದ ಕಥಾರೂಪದಲ್ಲಿ ಜನರಿಗೆ ಮನದಟ್ಟುಮಾಡಿಸಿದ್ದಾರೆ.

ಏತನ್ಮಧ್ಯೆ ಎರಡು ಸತ್ಯ ಕಥೆಗಳನ್ನೂ ಬರೆದು, ಜ್ಯೋತಿಷ್ಯದ ಸತ್ಯವನ್ನೂ ವಿವರಿಸಿದ್ದಾರೆ.

ಅವರ ರಚನೆ ಬುಡುಬುಡಿಕೆಯ ಪದವಂತೂ, ಅರ್ಥಗರ್ಭಿತವಾಗಿದ್ದು, ಓದುಗರನ್ನು ನಕ್ಕುನಲಿಸುತ್ತದೆ.

ಇಂದಿನ ಸಮಾಜಕ್ಕೆ ಬೋಧಕವಾದ ಇಂತಹ ಕೃತಿಗಳು, ಶ್ರೀ ಕಡಬರವರಿಂದ ಇನ್ನಷ್ಟು ಹೊರಹೊಮ್ಮಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ, ಅವರಿಗೆ ನನ್ನ ಸಹೃದಯ ಧನ್ಯವಾದಗಳು.

ಇಂತೀ

(ಸಹಿ) ಮುಖ್ಯಮಂತ್ರಿ ಚಂದ್ರು.

ಬೆಂಗಳೂರು
ದಿನಾಂಕ : 02-03-2010

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಎಂ.ವಿ. ನಾಗರಾಜರಾವ್
ಶೃಂಗಾರ ಪ್ರಕಾಶನ, ಚಿಕ್ಕನಾಯಕನ ಹಳ್ಳಿ

ಜನಪದ ಸಾಹಿತ್ಯದ ಸೌಂದರ್ಯವಿರುವುದು ಅದರ ಸರಳತೆ ಮತ್ತು ಸಹಜತೆಗಳಲ್ಲಿ. ಅನುಭವ ತುಂಬಿ ಬಂದಾಗ ಆಡುವ ಮಾತುಗಳೆಲ್ಲವೂ ಕಾವ್ಯವಾಗುತ್ತವೆ ಎಂಬುದಕ್ಕೆ ಜನಪದ ಗೀತೆಗಳು ಒಳ್ಳೆಯ ಉದಾಹರಣೆ. ಜಾನಪದ ಕವಿಗಳು ಕೊಡುವ ವರ್ಣನೆ, ನುಡಿಚಿತ್ರ, ಮಾತಿನ ಲಹರಿ, ಅಲಂಕಾರಗಳ ಮೋಡಿ ಅತ್ಯಂತ ಪ್ರಭಾವವುಳ್ಳದ್ದು. ಅವು ಕೃತ್ರಿಮವಲ್ಲ. ಜೀವನದ ಬೇರೆ ಬೇರೆ ನಿಟ್ಟಿನಲ್ಲಿನ ತುಂಬು ಅನುಭವದಿಂದ ಅವು ಮೂಡಿ ಬಂದವು.

ಶ್ರೀ ಲಕ್ಷ್ಮೀಕಾಂತ ಕಡಬ - ಇವರ ಪರಿಚಯ ಒಂದು ಆಕಸ್ಮಿಕ. ವಿವಾಹದ ಜನಜಂಗುಳಿಯ ಮಧ್ಯೆ ಅವರ ಸಹೃದಯತೆ, ಸರಳತೆ, ಸಜ್ಜನಿಕೆ ನನ್ನನ್ನು ಬಹುಬೇಗ ಅವರ ನಿಕಟವರ್ತಿಯನ್ನಾಗಿಸಿತು. ವಿದ್ವಾಂಸರಾದ ಶ್ರೀ ಕಡಬ ತಮ್ಮ ಈ ಜನಪ್ರಿಯ ಲಾವಣಿ ಸಂಗ್ರಹದಲ್ಲಿ ರಾಜಕೀಯ ವಿಡಂಬನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಸುಮಧುರ ಶೈಲಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ವಿಷಯಗಳ ಆಯ್ಕೆ ಹಾಗೂ ಬೆಳವಣಿಗೆಯಲ್ಲಿ ಏಕಸೂತ್ರತೆಯ ಅಭಾವ ಕಂಡುಬಂದರೂ ಅರ್ಥಗಾಂಭೀರ್ಯದ ದೃಷ್ಟಿಯಿಂದ ಇಲ್ಲಿಯ ಲಾವಣಿಗಳಿಗೆ ಮಹತ್ವವಿದೆ.

ಸಾಮಾಜಿಕ ಪಿಡುಗು ಎಂದೇ ಕರೆಯಲಾಗುವ ವೇಶ್ಯಾಸಮಸ್ಯೆ, ಜೂಜುಗಾರಿಕೆ, ಬಡತನ, ವಿಚ್ಛೇದನ ಇತ್ಯಾದಿ ವಿಷಯಗಳನ್ನು ಶ್ರೀಯುತರು ವಿಡಂಬನಾತ್ಮಕ ಶೈಲಿಯಲ್ಲಿ ಓದುಗರ ಹೃದಯ ತಟ್ಟುವಂತೆ ಚಿತ್ರಿಸಿದ್ದಾರೆ. ಅವರ ಧ್ವನಿಯಲ್ಲಿ ಸಾಮಾಜಿಕ ಕಳಕಳಿಯಿದೆ, ರಾಜಕೀಯ ಹೊಲಸು, ಭ್ರಷ್ಟಾಚಾರದ ವಿರುದ್ಧಸಮರ ಸಾರುವ ಲೋಕಾಯುಕ್ತರ ಅಸಹಾಯಕತೆ, ರಾಜಕಾರಣಿಗಳ ಹುಂಬತನ, - ಇತ್ಯಾದಿ ಎಲ್ಲವನ್ನೂ ಮಾರ್ಮಿಕವಾಗಿ, ಅಷ್ಟೇ ನಿಷ್ಠುರವಾಗಿ ಲಾವಣಿಯ ಪದಗಳಲ್ಲಿ ಚಿತ್ರಿಸಿದ್ದಾರೆ. ತಮ್ಮ ಅನುಭವವನ್ನು ಅಭಿವ್ಯಕ್ತಗೊಳಿಸುವ ವಾಕ್‌ಶಕ್ತಿ ಅವರಿಗೆ ಸಿದ್ಧಿಸಿದೆ. ಸಾದೃಶ್ಯ ಸಂಪತ್ತು ಅವರಲ್ಲಿದೆ. ಸಹಜವಾದ ಉಕ್ತಿಗಳಲ್ಲಿ ಸಾಮಾನ್ಯರಿಗೂ ಮನದಟ್ಟಾಗುವಂತೆ ಶ್ರೀಯುತ ಕಡಬ ನಿರೂಪಿಸಿದ್ದಾರೆ. ಅವರ ಕಲ್ಪನಾಶಕ್ತಿ ನಿಜಕ್ಕೂ ಬೆರಗುಂಟುಮಾಡುವಂಥದು.

ಶ್ರೀ ಲಕ್ಷ್ಮೀಕಾಂತ ಕಡಬ ಈಗಾಗಲೇ ತಮ್ಮ ಸಂಗೀತ ಮತ್ತು ಕನ್ನಡ ಓದುಗರಿಗೆ ಚಿರಪರಿಚಿತರು. ಪ್ರಸ್ತುತ ಲಾವಣಿ ಸಂಗ್ರಹ ಓದುಗರನ್ನು ರಂಜಿಸುವುದರ ಜೊತೆಗೆ ಚಿಂತನೆಗೆ ಹಚ್ಚುತ್ತದೆಂದೇ ನನ್ನ ಅನಿಸಿಕೆ. ದೇವರು ಅವರ ಬರವಣಿಗೆ ಶಕ್ತಿಗೆ ಇನ್ನಷ್ಟು ಇಂಬುಕೊಡಲಿ ಎಂದು ಹಾರೈಸುತ್ತೇನೆ.

ನಿವೃತ್ತ ಪ್ರಾಚಾರ್ಯರು

(ಸಹಿ) ಎಂ.ವಿ. ನಾಗರಾಜರಾವ್
ಚಿಕ್ಕನಾಯಕನ ಹಳ್ಳಿ - 572214

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಮರ್ಶೆ

ವಿದ್ವಾನ್ ಶ್ರೀ ಲಕ್ಷ್ಮೀಕಾಂತ ಕಡಬರವರು ತಮ್ಮ ಲೇಖನಿಯ ಮುಖೇನ ಸಾಮಾನ್ಯರಿಂದ ಅಸಾಧ್ಯವಾದ ಕೃತಿಯೊಂದನ್ನು ಗದ್ಯ ಮತ್ತು ಗಮಕರೂಪದಲ್ಲಿ ರಚಿಸಿ ಜನಸ್ತೋಮದ ಗಮವನ್ನು ಸೆಳೆದಿದ್ದಾರೆ. ಇದೊಂದು ಆಳವಾದ ಅಧ್ಯಯನ ಮತ್ತು ಸಂಶೋಧನೆಗಳ ಛಟ್ಟಿ ಇಳಿಸಿದ ಕೃತಿ. ಸಮಾಜದಲ್ಲಿನ ಭ್ರಷ್ಟಾಚಾರ, ಅಶಿಸ್ತು ಬದಲಾಗಿರುವ ಸಾಮಾಜಿಕ ಮೌಲ್ಯಗಳನ್ನು ಮತ್ತು ಅಪ್ರಿಯ ವರ್ತನೆಗಳನ್ನು ಪ್ರಿಯವಾದ ಭಾಷೆಯಲ್ಲಿ ಓದುಗರ ಹೃದಯಕ್ಕೆ ನಾಟುವಂತೆ ವರ್ಣಿಸಿದ್ದಾರೆ. ಇದ್ದದ್ದನ್ನು ಇದ್ದ ಹಾಗೆ ವಿವರಿಸಿದ್ದಾರೆ. ವಾಸ್ತವವಾದ ಮತ್ತು ಅಪ್ರಿಯವಾದ ಸಂಗತಿಗಳನ್ನು ಮುಂದಿಡಲು ಕಡಬರ ಲೇಖನಿ ಜಗ್ಗಲಿಲ್ಲ. ಪದ ಸಂಯೋಜನೆಯಲ್ಲಿ ಕುಗ್ಗಲಿಲ್ಲ. ಕಲ್ಪನೆ ಮತ್ತು ಉತ್ಪ್ರೇಕ್ಷೆಗಳಿಗೆ ಅವಕಾಶ ಕೊಟ್ಟಿಲ್ಲ. ಸನ್ನಿವೇಶಗಳಿಗೆ ಉಪ್ಪು ಖಾರ ಹಚ್ಚದೆ (ಅತಿಶಯೋಕ್ತಿ ಮಾಡದೆ) ಲೇಖನಿ ಮುಂದುವರಿದಿದೆ. ಸಮಾಜದ ಪ್ರಸ್ತುತ ಕಲ್ಮಶಗಳನ್ನು ಮೇಲೆತ್ತಿ ಹೇಳಲಾಗಿದೆ. ಗಮಕರೂಪದಲ್ಲಿರುವ ಸಾಲುಗಳು ಕೃತಿಗೊಂದು ಬಣ್ಣಕೊಟ್ಟಿವೆ.

ಸಮಾಜದಲ್ಲಿ ಆಳವಾಗಿ ಬೇರೂರಿನಿಂತಿರುವ ಭ್ರಷ್ಟಾಚಾರ, ಅನ್ಯಾಯ, ಅನೀತಿ ಮತ್ತು ಮಾನವ ಮೌಲ್ಯಗಳಿಗೆ ಪ್ರತಿಯೊಬ್ಬ ಪ್ರಜೆಯೂ ಸಾಕ್ಷಿಯಾಗಿದ್ದಲ್ಲೂ (ಭಾಗಿಯೂ ಹೌದು) ಕೇವಲ ಅಸಹಾಯಕ ಪ್ರೇಕ್ಷಕನಾಗಿ ತನ್ನ ದುಃಖ ಆಕ್ರೋಶ ಮತ್ತು ಅಸಮ್ಮತಿ ಯನ್ನು ಪರಸ್ಪರ ಸಂಭಾಷಣೆಗೆ ಮಾತ್ರ ಸೀಮಿತಮಾಡಿಕೊಂಡಿರುವನು. ಬಹಿರಂಗವಾಗಿ ಧಿ ಕ್ಕಾರ ಹಾಕಲೂ ಹಿಂಜರಿಯುವನು. ನ್ಯಾಯನೀತಿಗಳನ್ನಾಚರಿಸದ ಸಮಾಜಕ್ಕೆ ಭವಿಷ್ಯವಿಲ್ಲ. ಸಾಮಾಜಿಕ ಕಲ್ಮಶಗಳಿಗೆ ಸಮೂಜವೇ ಪರಿಹಾರವನ್ನು ಕಂಡುಕೊಳ್ಳಬೇಕು.

ಚಿಕಿತ್ಸೆಯು ಪ್ರಾಮಾಣಿಕತನದಿಂದ ಕೂಡಿ ವ್ಯಾಪಕವಾಗಿಯೂ ನಿರಂತರವಾಗಿಯೂ ಜರಗಬೇಕು. ಭಾರತ ರಾಷ್ಟ್ರದಲ್ಲಿ ನಾವು ವಾಕ್ ಸ್ವಾತಂತ್ರವನ್ನು ಕಳೆದುಕೊಂಡಿಲ್ಲ ಇದೊಂದು (ಪ್ರಬಲವಾದ) ವಜ್ರಾಸ್ತ್ರ, ಉತ್ತಮ ಸಮಾಜವನ್ನು ಕಟ್ಟಲು ಪ್ರಾಯಶಃ ಸ್ವತಂತ್ರ ಸಂಗ್ರಾಮದಂತಹ ಮತ್ತೊಂದು ಕ್ರಾಂತಿ ನಡೆಯಬೇಕು. ಪ್ರತಿಯೊಬ್ಬ ಜವಾಬ್ದಾರಿ ಪ್ರಜೆಯೂ (ಸಾಮಾನ್ಯ ವ್ಯಕ್ತಿಗಳು, ಸಿರಿವಂತರೂ) ಭಾಗಿಯಾಗಬೇಕು.

ಡಾ|| ವಿ. ಪರಮೇಶ್ವರ
MBBS, FRCP(LONDON), FRCP(EDIN), FACC(USA),
FAPI, FCSI, FISE, FAIID, FIMSA, FIAMS, FICN, FDSI
ಹೃದ್ರೋಗ ತಜ್ಞ, ಬೆಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯಾನುಕ್ರಮಣಿಕಾ

ಜಾನಪದ ಲಾವಣಿ (ಪ್ರಜಾಸರ್ಕಾರ)	1
ಲೋಕಾಯುಕ್ತರೆಂಬೊ ಪ್ರಚಂಡ ಮಾರುತ	38
ಎರಡು ಸತ್ಯ ಕತೆಗಳು - ಗದ್ಯಕಾವ್ಯ	53
ಲೋಕಾಯುಕ್ತರು (ಬುಡುಬುಡಿಕೆ ಪದ - ಜಾನಪದ ಲಾವಣಿ)	65

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾನಪದ ಲಾವಣಿ (ಪ್ರಜಾಸರ್ಕಾರ)

ರಾಗ : ಚಕ್ರವಾಕ ತಾಳ : ಆದಿತಾಳ

ಯಾವ ಸರ್ಕಾರ ಬಂದರೇನೂ ? ಯಾವ ಪಕ್ಷವು ಆಳಿದರೇನೂ ?

ನೆಮ್ಮದಿ ಸಿಗಲಿಲ್ಲಾ ಜನತೆಗೆ ನೆಮ್ಮದಿ ಸಿಗಲಿಲ್ಲಾ ?

ಸ್ವತಂತ್ರ ಬಂದೂ ಅರವತ್ತು ವರ್ಷಗಳು ಉರುಳಿಹೋದವು ಭಾರತರಾಷ್ಟ್ರಕೆ

ಕೋಟ್ಯಂತರ ಹಣ. ಸಾಲವ ಹೊತ್ತು ತತ್ತರಿಸುತಲಿದೆ ರಾಮರಾಜ್ಯವು

ಬಂದವರೆಲ್ಲಾ ಭಾಷಣಕಾರರೇ ? ಬಂದವರೆಲ್ಲಾ ಭ್ರಷ್ಟಾಚಾರಿಗಳೇ ?

ಮಾಧ್ಯಮಗಳಲೀ ಆಶ್ವಾಸನೆಗಳ ಮಳೆಯನೆ ಸುರಿಸೀ !

ಮೂಗಿನ ತುದಿಗೇ। ತುಪ್ಪ ಹಚ್ಚುವರು ! ತುಪ್ಪ ಹಚ್ಚಿದರು !

ಕಾಂಗ್ರೆಸ್ ಸರ್ಕಾರ ಅವನತಿಗೊಂಡು। ಬೆರಕೆಯ ಸರ್ಕಾರ ಬಂದಿತು ಕೇಂದ್ರದಲಿ।

ಕೇಂದ್ರದಲ್ಲಿಯೂ ಬೆರಕೆ ಸರ್ಕಾರ। ರಾಜ್ಯಗಳಲ್ಲಿಯೂ ಬೆರಕೆ ಸರ್ಕಾರ।

ರಾಷ್ಟ್ರೋನ್ನತಿಗೆ ಪರದೇಶಿ ಹಣವ। ಸಾಲವಾಗಿಯೇ ಪಡೆಯುತ್ತಿರುವೆವು ?

ವಿವಿಧ ಇಲಾಖೆಗೆ ಆ ಹಣ ಮೀಸಲು। ಸಾಧನೆ ಮಾತ್ರಾ। ಶೂನ್ಯವಾಗಿಹುದು ?

ಪ್ರಜಾಪ್ರಭುತ್ವವೆ। ಎಲ್ಲ ದೇಶಕೂ। ಮಾರ್ಗದರ್ಶಿಯು। ಎರಡನೆ ಮಾತಿಲ್ಲ?

ಆದರೆ ಭಾರತದಿ। ಆಗಿಹುದೇನು। ಪಕ್ಷದ ಹೆಸರಲಿ। ವ್ಯಕ್ತಿ ಬೆಳೆದಿಹನು ?

ಪಕ್ಷ ಬೆಳೆದಿದೆ – ವ್ಯಕ್ತಿ ಬೆಳೆದಿಹನು ? ರಾಜ್ಯ ಬೆಳೆದಿದೆಯೇ ? ರಾಷ್ಟ್ರ ಬೆಳೆದಿದೆಯೇ ?

ವಿಚಾರ ಮಾಡೀ ? ವಿಚಾರ ಮಾಡೀ ?

ಮಾಧ್ಯಮ ಗಮನಿಸೆ – ಭಾರತ ರಾಷ್ಟ್ರದಿ ಎಲ್ಲವು ಹಗರಣ ? ಎಲ್ಲವು ಹಗರಣ ?

ಗೊಬ್ಬರ ಹಗರಣ ? ಗಣಿಯ ಹಗರಣ ? ಅಣೆಕಟ್ಟು ಹಗರಣ ? ಆಹಾರ ಹಗರಣ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಪೋಲೀಸ್ ಹಗರಣ ? ಉಗ್ರರ ಹಗರಣ ? ಢಕಾಯಿತಿ ಹಗರಣ ?

ಕೊಲೆಯ ಹಗರಣ ? ರೌಡಿಗಳ ಹಗರಣ ? ಸುಪಾರಿ ಹಗರಣ ? ಚೀಟಿಯ ಹಗರಣ ?

ಚೀಟಿಂಗ್ ಹಗರಣ ? ಫಾರೆಸ್ಟ್ ಹಗರಣ ? ಪರಿಸರ ಹಗರಣ ? ವಿದ್ಯಾರ್ಥಿ ಹಗರಣ ?

ಮಾನಭಂಗ ಹಗರಣ ? ಜಮೀನು ಹಗರಣ ? ಪ್ರಯಾಣ ಹಗರಣ ?

ಟ್ರಾನ್ಸ್‌ಪೋರ್ಟ್ ಹಗರಣ ? ರಿಯಲೆಸ್ಟೇಟ್ ಹಗರಣ ? ವಿಮಾನ ಹಗರಣ ?

ನೌಕಾ ಹಗರಣ ? ಛಾಪಾಕಾಗದ ಹಗರಣ? ನಕಲಿ ಔಷಧ ಹಗರಣ ?

ಕುಡಿತದ ಹಗರಣ ? ವೇಶ್ಯಾವಾಟಿಕೆ ಹಗರಣ ? ವಿವಾಹ ಹಗರಣ ?

ವಿಚ್ಛೇದನ ಹಗರಣ ? ಪರೀಕ್ಷೆ ಹಗರಣ ? ಕಾಪೀಯಿಂಗ್ ಹಗರಣ ?

ಜಾತಿಯ ಹಗರಣ ? ಸೀಟಿಗೆ ಹಗರಣ ? ಉದ್ಯೋಗ ಹಗರಣ ?

ನಿರುದ್ಯೋಗ ಹಗರಣ ? ಕೋಮು ಹಗರಣ ? ಭಾಷಾ ಹಗರಣ ?

ಅಪಾಯಿಂಟ್‌ಮೆಂಟ್ ಹಗರಣ ? ಟ್ರಾನ್ಸ್‌ಫರ್ ಹಗರಣ ?

ರಕ್ಷಣಾ ಇಲಾಖೆಲಿ ವರ್ಣಭೇದ ಹಗರಣ ? ಶಸ್ತ್ರಾಸ್ತ್ರ ಹಗರಣ ?

ವಿದ್ಯಾ ಇಲಾಖೆಲಿ ಸೀಟಿನ ಹಗರಣ ? ಶಾಲಾಕಾಲೇಜಲಿ ಮಧ್ಯಾಹ್ನ ಮೀಸಲು ಊಟದ ಹಗರಣ ? ಪೋಲೀಸ್ ಇಲಾಖೆಲಿ ಸುಳ್ಳು ಸಾಕ್ಷಿ ಹಗರಣ ? ನ್ಯಾಯಾಲಯದಲಿ ಕೇಸು ಮುಗಿಯದ ಹಗರಣ ? ಪ್ರೇಮಿ ಕೈಕೊಟ್ಟಾಗ ಆತ್ಮಹತ್ಯ ಹಗರಣ ? ಅಮಾಯಕ ಹೆಣ್ಣನ್ನು ವೇಶ್ಯಾವಾಟಿಕೆಗೆ ಮಾರಿದ ಹಗರಣ ? ಮಂತ್ರಿ ಪದವಿಗೆ ಜಾತೀವಾರು ಹಗರಣ ?

ಕ್ಯಾಬಿನೆಟ್ ಪದವಿಗೆ ಒಳಗೊಳಗೆ ಹಗರಣ? ಮುಖ್ಯಮಂತ್ರಿ ಸ್ಥಾನಕ್ಕಂತೂ ವಿಶೇಷ ಹಗರಣ ?

ಅಧ್ಯಕ್ಷ ಸ್ಥಾನಕೆ ರಾಜಕೀಯ ಹಗರಣ ? ಮಸೂದೆ ಪಾಸಾಗಲು ಪಕ್ಷ ವಿಪಕ್ಷಗಳ ಬೃಹತ್ ಹಗರಣ ? ಭ್ರಷ್ಟಾಚಾರದ ಹಗರಣ ? ಆಸ್ಪತ್ರೆಯಲ್ಲಿ ನಕಲಿ ಔಷಧಿ ಹಗರಣ ? ವೈದ್ಯರ ಉದಾಸೀನದ ಹಗರಣ ? ರಾಂಗ್ ಡೋಸೇಜ್ ಇಂಜಕ್ಷನ್ ಹಗರಣ ? ಅಕಸ್ಮಾತ್ ಪೇಷಂಟ್ ಸತ್ತರೆ ಹಗರಣ ? ನರ್ಸ್, ವಾರ್ಡ್‌ಬಾಯ್ ಶುಶ್ರೂಷೆ ಹಗರಣ ? ಅಂಗಾಂಗಗಳ ಕದ್ದು ಮಾರಿದ ಹಗರಣ ? ರೋಗಿಯ ಮೃತ್ಯುವಿಗೆ ಭ್ರಷ್ಟಾಚಾರದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಗರಣ ? ಐ.ಟಿ. ಬಿ.ಟಿ ಕಂಪೆನಿಗಳ ಸ್ಥಳ ಸ್ಯಾಂಕ್ಷನ್ ಹಗರಣ ? ಸರ್ಕಾರ ಮಾತುಕೊಟ್ಟು ನಡೆಸದಂಥಾ ಹಗರಣ ? ವಿಶಾಲ ರಸ್ತೆ ನಿರ್ಮಾಣ ಹಗರಣ ? ರೈತರನ್ನೆತ್ತಿಕಟ್ಟಿ ರಾಜಕೀಯ ಹಗರಣ ? ಕಂದಾಯ ಇಲಾಖಾ ಭ್ರಷ್ಟಾಚಾರ ಹಗರಣ ? ಆರ್.ಟಿ.ಓ. ಇಲಾಖಾ ಹೊಲಸಿನ ಹಗರಣ ? ವಿದ್ಯಾ ಇಲಾಖಾ ಸ್ವಾರ್ಥದ ಹಗರಣ ? ಭ್ರಷ್ಟ ಅಧಿಕಾರಿಗಳ ಟ್ರಾನ್ಸ್‌ಫರ್ ಹಗರಣ ? ರೈಲ್ವೇ ಇಲಾಖೆಯ ಉದ್ಯೋಗ ಹಗರಣ ? ಅರಿಯದೆ ಹರಡುವ ಸಾಂಕ್ರಾಮಿಕ ಹಗರಣ ? ಮಾರಾಟ ಇಲಾಖಾ ಲಂಚಕೋರ ಹಗರಣ ? ಬಂದೀಖಾನೆಯಲಿ ಖೈದಿಗಳ ಹಗರಣ ? ಒಂದೇ ಮನೆಯಲಿ ಕೌಟುಂಬಿಕ ಹಗರಣ ? ಅವಿಭಕ್ತ ಕುಟುಂಬದಿ ಆಸ್ತಿಯ ಹಗರಣ ?

ವರದಕ್ಷಿಣೆ ಹಗರಣ ? ಪುನರ್ವಿವಾಹ ಹಗರಣ ? ಆತ್ಮಹತ್ಯಾ ಹಗರಣ ? ಕೊಲೆಯ ಹಗರಣ ? ಶವಾಗಾರದಲಿ ಶವಸಂಸ್ಕಾರ ಹಗರಣ ? ದೇವಸ್ಥಾನದಲಿ ಪೂಜೆಗೆ ಹಗರಣ ? ಮುಜರಾಯಿ ಇಲಾಖೆಲಿ ಅರ್ಚಕ ಹಗರಣ ? ಸ್ವಾಮಿ ಪೀಠದಲಿ ಪೀಠಾರೋಹಣ ಹಗರಣ ? ಮಠಗಳಲ್ಲಿಯೂ ರಾಜಕೀಯ ಹಗರಣ ? ರೈತಬಾಂಧವರಲಿ ಸಾಲದ ಹಗರಣ ? ಜಮೀನು ಜಮೀನಿಗೆ ನೀರಾವರಿ ಹಗರಣ ? ಸಾಮಾಜಿಕ ಕ್ಷೇತ್ರದಲಿ ಗೋವಧೆ ಹಗರಣ ? ಮತಾಂತರ ಹಗರಣ ? ಧರ್ಮಾಧರ್ಮಗಳ ಹಬ್ಬದ ಹಗರಣ ? ಉತ್ಸವಗಳಲೀ ಸಮಾಜ ದ್ರೋಹಿಗಳ ಕುಚೋದ್ಯದ ಹಗರಣ ? ಚುನಾವಣಾ ಸಮಯದಿ ಕುಡಿತದ ಹಗರಣ ? ಭ್ರಷ್ಟಾಚಾರದ ಹಗರಣ ? ಹಗರಣ ! ಹಗರಣ ! ಹಗರಣ ! ಜೀವನವೆಲ್ಲಾ ಹಗರಣಮಯವೂ। ತಲೆಮಾರು ಮುಗಿಯಿತು ಹಗರಣ ಮುಗಿಯದು.

ನಮ್ಮ ಪೂರ್ವಜರಿಗೆ ಬಡತನವಿದ್ದರೂ, ಹೊಟ್ಟೆಗೆ ಮಾತ್ರಾ ಕೊರತೆಯಿರಲಿಲ್ಲ. ಆರೋಗ್ಯಕ್ಕೆ ಕೂಡಾ ಕೊರತೆಯಿರಲಿಲ್ಲ. ಅತ್ಯುತ್ತಮವಾದ ಬಟ್ಟೆಗೆ ಕೊರತೆ ? ವಿದ್ಯೆಗೆ ಕೊರತೆ ? ಪ್ರಯಾಣಕೆ ಕೊರತೆ ? ವಾಸಕೆ ಕೊರತೆ ? ಆದರೂ ಅವರು ನಿತ್ಯತೃಪ್ತರು. ದುರಾಶೆ ಅವರಲಿ ಲವಲೇಶವಿಲ್ಲ? ಭ್ರಷ್ಟಾಚಾರವೆಂಬ ಪದದ ಅರಿವಿಲ್ಲ? ಪ್ರೀತ್ಯಾದರಗಳು ನರನಾಡಿಗಳಲಿ ಹರಿದು ಬಂದಿದ್ದವು. ಕೊಟ್ಟು ತಿನ್ನುವುದು ಜೀವನದ ಗುರಿಯು. ಅವರಿಗಿಲ್ಲದಿದ್ದರೂ ದಾನಧರ್ಮಗಳು ನಿತ್ಯಾಭ್ಯಾಸವು. ಅತಿಥಿಗಳಾಗಮನ ಅತಿ ಹರ್ಷವವರಿಗೆ. ಅತಿಥಿಯೊಡನೂಟ ಪರಮಶ್ರೇಷ್ಠವವರಿಗೆ. ಊಟ ತಿಂಡಿಗಳು ಬಾಳೇ - ಎಲೆಯಲಿ, ಬಾಳೇ ಎಲೆಯೂಟ ಪರಮ ಪವಿತ್ರವು, ಉತ್ತಮ ಸೀರೆಯುಟ್ಟು ಪವಿತ್ರ ತಿಲಕವಿಟ್ಟು ಝುಣಝುಣ ಬಳೆಗಳ ಶಬ್ದದ ಮಧ್ಯೆ ಆತ್ಮೀಯ ಮಾತಿನಿಂದ ಅಡಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಡಿಸುವುದು ಗೃಹಿಣಿ ಕರ್ತವ್ಯ. ಅತೃಪ್ತ ಭೋಜನ, ಉಪವಾಸ ಸತ್ಯಾಗ್ರಹ - ಅಪಶಕುನವವರಿಗೆ. ಮನುಷ್ಯರಿಗೆ ಮಾತ್ರವಲ್ಲ, ಮೂಕ ಪ್ರಾಣಿಗಳಿಗೂ ಅದೇ ಆತಿಥ್ಯವು. ದೂರದ ಊರಿಗೂ ಗಾಡಿಯ ಪ್ರಯಾಣ. ಗಾಡಿಯೆಂದರೆ ಬಿಸಿಲು ಮಳೆ ರಕ್ಷಣೆಗೆ ಕಮಾನು ಬಂಡಿ. ಆ ಬಂಡಿಗೂ, ಎಳೆವ ಎತ್ತುಗಳಿಗೂ ಶೃಂಗಾರವೇ ಶೃಂಗಾರ. ಗಾಡಿಯ ಒಳಗೆ ಹುಲ್ಲಿನ ಹಾಸಿಗೆ. ಅಕ್ಕಪಕ್ಕದಲಿ ಮರದ ಹಲಗೆಗಳು, ಒರಗಿಕೊಳ್ಳಲೂ ಮೃದುದಿಂಬುಗಳು, ಸಾರಥಿಗಂತೂ ಮೈಯೆಲ್ಲ ಕಣ್ಣು, ರಸ್ತೆ ಹದವರಿತು ಗಾಡಿ ಓಡಿಸುವ. ನಂತರ ಬಂದಿತು ಕುದುರೇ ಸಾರೋಟ್. ಅದರ ಹಿಂದೆಯೇ ಮೋಟಾರ್ ಆಗಮನ. ವ್ಯಕ್ತಿಯ ವೇಗಕೆ ಸೈಕಲ್ ಆಗಮನ. ಜಟಕಾ ಬಂದ ಮೇಲೆ ಕುದುರೆ ಸಾರಥ್ಯದಿ ದೂರದ ಊರಿಗೆ ಜಟಕಾ ಸವಾರಿ. ಸರ್ಕಾರೀ ಸಾಹೇಬರು ಹಳ್ಳಿಗಳ ಸುತ್ತುವುದು ಕುದುರೆಯ ಮೇಲೆ, ಹಾಗಿಲ್ಲವಾದರೆ ಜಟಕಾ ಬಂಡಿಲಿ. ಮೈಸೂರ್ ಪೇಟ ಧರಿಸಿ ಅಧಿಕಾರಿ ಬಂದರೆ, ಹಳ್ಳಿಯ ಜನರಿಗೆ ಜವನಡುಗು. ಹೊಟ್ಟೆಗಿಲ್ಲದ ಕಾಲ. ಶ್ಯಾನುಭೋಗರಾಮನೆಯ ಭೋಜನ, ಪಂಚಾಯ್ತಿ ಆಫೀಸಲಿ ಜಮಾ ಬಂದಿ, ಹಳ್ಳಿಯ ವ್ಯವಹಾರ, ಲಂಚ ಋಷುವತ್ತು ಇಲ್ಲದ ಕಾಲ - ''ಕಾಯಕವೇ ಕೈಲಾಸ''ವೆನ್ನುವ ಕಾಲ. ಗ್ರಾಮಲೆಕ್ಕಿಗ, ಶ್ಯಾನುಭೋಗ, ಹಳ್ಳಿಯ ಪಟೇಲ, ರೆವಿನ್ಯೂ ಅಧಿಕಾರಿ, ಹಳ್ಳಿಯ ಡಾಕ್ಟರ್, ಪೋಲೀಸ್ ಕಾನ್ಸ್‌ಟೇಬಲ್ ಎಲ್ಲರೂ ಒಂದೇ. ಊರಿನ ಸಮಸ್ಯೆ ಬಿಡಿಸುವುದೊಂದೇ ಅವರ ಗುರಿಯು. ಸಮಸ್ಯೆಯೆಂದರೆ ''ಸಾಂಕ್ರಾಮಿಕ ಜಾಡ್ಯ'' - ರಾಜಕೀಯ ಮಾಡುವುದು. ಲಂಚ ಹೊಡೆಯುವುದು, ಅವರ ಗುರಿಯಲ್ಲ - ತಣ್ಣನೆ ಎಳನೀರು, ಬಾಳೇ ಗೊನೆಯು, ಎಲೆ ಅಡಿಕೆ ಪುಷ್ಪಗಳು, ಹಣ್ಣು ತರಕಾರಿಗಳು ಅಂದಿನ ಕೊಡುಗೆ, ಲಂಚವಲ್ಲ ಅದು.

ಸಾಮಾನ್ಯ ರೈತನು ಬಂದ ಅಧಿಕಾರಿಯನು 'ಧಣೀ' ಎಂದೇ ಸಂಬೋಧಿಸುತಿದ್ದನು. ಅಹವಾಲು ಕೇಳಿ - ಪರಿಹಾರ ಸೂಚಿಸುವುದು ದಣಿಯ ಕೆಲಸವು. ಆಗಿನ ಶ್ಯಾನುಭೋಗರು ಹಳ್ಳಿಯ ದೇವರು. ಪಟೇಲರೆಂದರೆ ಗ್ರಾಮರಕ್ಷಕರು. ಸಾಮಾನ್ಯವಾಗಿ ಹಳ್ಳಿಯ ವ್ಯವಹಾರ, ನ್ಯಾಯಾಲಯಕ್ಕೆ ಹೋಗುವಂತಿಲ್ಲ. ಊರ ಪ್ರಮುಖರೇ ಪಂಚಾಯ್ತಿ ಕಟ್ಟೆಯಲಿ ಹಳ್ಳಿಯ ವ್ಯವಹಾರ ತೂಗಿಸುತಿರ್ದರು. ತಪ್ಪಿತಸ್ಥನಿಗೆ ಶಿಕ್ಷೆಯಾಗಲೀ, ಅನುಕಂಪೆಯಾಗಲೀ ಪಂಚಾಯತಿ ತೀರ್ಮಾನ. ಅದ ವಿರೋಧಿಸುವ ಹಕ್ಕು ವ್ಯಕ್ತಿಗಿಲ್ಲ. ಕುಡಿತವೆಂಬುದರ ಅರಿವಿರಲಿಲ್ಲ. ಹತ್ತಾರು ಹಳ್ಳಿಗೆ ಒಂದೇ ಹೆಂಡದಂಗಡಿ. ಎಷ್ಟೋ ದಿವಸಗಳು ಹೆಂಡ ಹುಳಿಯಾಗಿ ಕೇಳುವವರೇ ಇಲ್ಲ. ಬೀಡಿ ಸಿಗರೇಟು ಬಂದೇ ಇರಲಿಲ್ಲ. ''ಇಸ್ಪೀಟ್'' ಎಂಬುದರ ಹೆಸರೇ ಅರಿಯರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂಗ್ಲಿಷ್ ದೊರೆಗಳು ಬಂದಕೂಡಲೇ ಬೀಡಿ, ಸಿಗರೇಟ್ ಬಂದಿತು. ಇಸ್ಪೀಟ್ ಬಂದಿತು. ಹೆಂಡದಂಗಡಿಗಳು ಊರ್ಜಿತವಾದುವು. ದುರಭ್ಯಾಸಗಳು ಹಳ್ಳಿಯ ಜನರಿಗೆ ಆಕರ್ಷಕವಾದುವು. ಬೇರಾವ ಆಟವು ಪ್ರಸಿದ್ಧಿಯಲ್ಲಿಲ್ಲದಿರೆ, ಇಸ್ಪೀಟ್, ಹೆಂಡಗಳು ಮೋಜಿಗೆ ಬಂದವು. ದೊಡ್ಡವರು, ಚಿಕ್ಕವರು, ಉಳ್ಳವರು, ಇಲ್ಲದವರು, ಎಲ್ಲರೂ ಒಂದಾದರು ಇಸ್ಪೀಟ್ ಕುಡಿತಗಳಿಂದ. ಬೀಡಿ, ಸಿಗರೇಟ್‌ಗಳು, ನವ್ಯ ಸ್ನೇಹಕ್ಕೆ ಮಾರ್ಗದರ್ಶಿಯಾದುವು. ಇಸ್ಪೀಟ್ ಆಟವಂತೂ ಹಿರಿಯರ, ಕಿರಿಯರ, ಕೇಂದ್ರಸ್ಥಾನವಾಗಿ ಆಸ್ತಿ ಪಾಸ್ತಿಗಳು ಹರಾಜಾದವು.

ನಾಗರಿಕತೆ ಬೆಳೆಯಿತು. ಇಂಗ್ಲೀಷ್ ಭಾಷೆ ಬಂದಿತು. ವಿದ್ಯಾಶಾಲೆಗಳು ಲೆಕ್ಕವಿಲ್ಲದಷ್ಟಾದುವು. ಊಟ ಬದಲಾಗಿ, ವೇಷ ಬದಲಾಗಿ, ಭಾಷೆ ಬದಲಾಗಿ ಸಂಸ್ಕೃತಿ ಬದಲಾಗಿ, ಧರ್ಮ ಬದಲಾಗಿ, ನಡೆನುಡಿ ಬದಲಾಗಿ, ಭಾವನೆ ಬದಲಾಗಿ, ಆದರ್ಶವೆಲ್ಲಾ ಮಣ್ಣು ಪಾಲಾಯಿತು. ದಾನ ಧರ್ಮಗಳು ಭಾಷಣವಾದುವು. ಲಂಚ, ಖುಷುವತ್ತು, ಚಿಂತನೆಯಾದುವು. ಹಣ-ಹೆಣ್ಣು-ಹೆಂಡಗಳು ಮಾಧ್ಯಮವಾದುವು. ಕಾನೂನು ಪಾಲನೆ ಬೋಧನೆಯಾಯಿತು. ಭ್ರಷ್ಟಾಚಾರವು ಅನಿವಾರ್ಯವಾಯಿತು. ಸ್ವಾರ್ಥ ಚಿಂತನೆಯೆ ಆದರ್ಶವಾಯಿತು. ಭೋಗವೆ ಮಾನವನ ಜೀವನದ ಗುರಿಯಾಯ್ತು. ತೃಪ್ತಿಯೆಂಬುದು ಪುಸ್ತಕದ ಪುರಾಣ. ಮಠಾಧಿಪತಿಗಳು ರಾಜಕೀಯಕ್ಕಿಳಿದರು. ವೇಷ ಮಾತ್ರಾ ಕಾವಿಯಾಯಿತು. ಮನಸ್ಸೆಲ್ಲವೂ ಕಾಮಿನಿ ಬಯಸಿತು. ರಾಜ್ಯಾಡಳಿತದಿ, ಮಠಾಧಿಪತಿಗಳ ಸಲಹೆಗಳು ನಿರ್ಣಾಯಕವಾಯಿತು. ಜಾತಿಗೊಂದು ಮಠ ನಿರ್ಮಾಣವಾಯಿತು.

ಪೂರ್ವೀಕರಿಗಾದರ್ಶ ಪಶುಪಾಲನೆಯು. ಪಶುಪಾಲನೆಯೆಂದರೆ ಗೋವುಗಳಿಗೆ ಅಗ್ರಸ್ಥಾನ. ವ್ಯವಸಾಯ ಕ್ಷೇತ್ರಕೆ ಎತ್ತು (ಹೋರಿ) ಬೇಕಾದರೆ, ಹಾಲು, ಮೊಸರಿಗೆ ಗೋವಿಗೆ ಪ್ರಾಧಾನ್ಯ. ಶಿಶುಸಂರಕ್ಷಣೆಗೆ ಗೋಕ್ಷೀರವತಿ ಮುಖ್ಯ. ರೋಗಿಗಳ ರಕ್ಷಣೆಗೆ ಗೋಮೂತ್ರವತಿ ಮುಖ್ಯ. ತಾಯಿಯ ಎದೆಯಲಿ ಹಾಲಿಲ್ಲದಿದ್ದರೂ ಗೋವಿನ ಹಾಲು ಶಿಶುವಿಗೆ ಪ್ರಾಣ. ಗೋ ರಕ್ಷಣೆಯು ಅತಿ ಮುಖ್ಯವೆಂಬುದು ಪೂರ್ವಿಕರ ನೀತಿ. ಶಿಶುಗಳ ಕಂಡರೆ ಎಷ್ಟು ಮಮತೆಯೋ ಗೋವುಗಳ ಕಂಡರೂ ಅಷ್ಟೇ ಮಮತೆ. ಮನೆಯ ಯಜಮಾನ ಮೊಮ್ಮಕ್ಕಳ ಜೊತೆ ಪುಟ್ಟ ಕರುಗಳನು ಮಲಗಿಸಿಕೊಂಡು, ಮುದ್ದು ಮಾಡುತ್ತಿದ್ದುದು ನಮಗೆ ಸಾಕ್ಷಿಯಿದೆ. ಹೋರಿಗರುಗಳನು ಪ್ರೀತಿಯಿಂದ ನೇವರಿಸಿ, ಜೋಳ ರಾಗಿ ತೆನೆಗಳ ಕೈಯಿಂದ ತಿನ್ನಿಸಿ- ಸಾಕುತಲಿದ್ದುದು ನಮಗೆ ನೆನಪಿದೆ. ಎತ್ತು ದನಗಳಿಗೆ ರೋಗ ತಗಲಿದರೆ ನಾಟಿ ಔಷಧ, ಇಲ್ಲವೇ ಪಶುವೈದ್ಯಶಾಲೆಯಲಿ ಸೂಕ್ತ ಚಿಕಿತ್ಸೆಯಿತ್ತು ಆರೈಕೆ ಮಾಡುತ್ತಿದ್ದುದು ಸತ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯವು. ಮನೆಮಂದಿ ಮಕ್ಕಳೆಲ್ಲಾ ರೋಗಿಷ್ಟ ಪಶುವಿಗೆ ಆರೈಕೆ ಮಾಡುತ, ಅದರ ದುಃಖವನು ಹಂಚಿಕೊಳ್ಳುತ್ತಿದ್ದರು. ರೋಗ ಉಲ್ಬಣಿಸಿ ಗೋವು ಸತ್ತರೆ, ಅದನು ಮಣ್ಣು ಮಾಡಿ ತಿಥಿಮಾಡುತ್ತಿದ್ದುದು ಕೆಲವರ ಪದ್ಧತಿ. ಕಾಲ ಬದಲಾಯಿಸಿತು. ಹಳ್ಳಿಯವರು ನಾಗರೀಕರಾದರು. ವ್ಯವಹಾರಕೆಲ್ಲಾ ವಿದ್ಯುಚ್ಛಕ್ತಿ ಬಂದಿತು. ಉಳುಮೆ ಕೆಲಸಗಳಿಗಾಧುನಿಕ ಉಪಕರಣ - ಉಳುವುದು, ಬಿತ್ತುವುದು, ಕಳೆ ಕೀಳುವುದು, ನೀರೂಡಿಸುವುದು, ಕೊಯ್ಯುವುದು, ಮೆದೆ ಹಾಕುವುದು, ಬಡಿವುದು, ವಿಂಗಡಿಸುವುದು, ಎಲ್ಲವೂ ಯಂತ್ರಮಯ. ಆಕಳು, ಎತ್ತುಗಳ ಕೇಳುವವರಾರು ? ಹಸು ಎಮ್ಮೆಗಳು ಹಾಲು ಕೊಡುವುವು, ಎತ್ತು ಕೋಣಗಳ ಆರೈಕೆ ಖರ್ಚು ಜಾಸ್ತಿ. ಆಧುನಿಕ ಯಂತ್ರ ಬಳಕೆಗೆ ಬಂದ ಮೇಲೆ, ಎತ್ತು ಕೋಣಗಳಿಗೆ ಕೆಲಸವೇ ಇಲ್ಲ. ಅವುಗಳ ಪೋಷಣೆಯೂ ಒಂದಕ್ಕೆ ಮೂರರಷ್ಟು, ಹಾಲು ಕೊಡುವವರೆಗೆ ಹಸುಗಳವಶ್ಯಕತೆ - ಯಾಲು ಕೊಡದಿರೆ, ಸಾಕುವ ಖರ್ಚು ಇಂದು ಅಪಾರ. ಯಾವ ಗೋವನ್ನು ಮಾತೃದೇವರೆಂದು ಪೂಜಿಸುತ್ತಿದ್ದನೊ, ಆ ಬಡರೈತ, ಹಣಕ್ಕಾಗಿಯೇ ಆ ಹಸುವನ್ನು ವಧಾಶಾಲೆಗೆ ಕದ್ದು ಮಾರುವನು.

ನಮ್ಮ ಪೂರ್ವಜರಲಿ ಹಸುವೊಂದು ಸತ್ತರೆ, ಅವಿಭಕ್ತ ಕುಟುಂಬದ ವ್ಯಕ್ತಿಯೊಬ್ಬ ಸತ್ತಂತೆ. - ಅದರ ಸಾವನ್ನು ನೆನೆದೂ ನೆನೆದೂ ಗುಣಗಾನ ಮಾಡುತ್ತ ದುಃಖಪಡುತ್ತಿದ್ದರು. ಇಂದಿನ ಪೀಳಿಗೆಗೆ ಹಸುವೊಂದ ಮಾರಿದರೆ ಎಷ್ಟು ಲಾಭವೆಂದು ? ಹಸುಮುದಿಯಾಗಿ ದಷ್ಟ ಪುಷ್ಟವಾಗಿದ್ದರೆ, ರಕ್ತ ಮಾಂಸಗಳ ಕಣ್ಣಳತೆ ಮಾಡಿ ಹೆಚ್ಚು ಹಣ ಕೊಟ್ಟು ಕದ್ದು ಸಾಗಿಸುವ ಮಧ್ಯವರ್ತಿಗಳು ಎಲ್ಲೆಲ್ಲೂ ಇರುವರು. ಅವರೂ ನಮ್ಮವರೇ ! ಅಧಿಕ ಹಣ ತೆತ್ತು ರಾತ್ರೋರಾತ್ರೆಯೇ, ಲಾರಿಗಳಲ್ಲಿ ದೂರ ಸಾಗಿಸುವರು - ಆ ಮೂಕ ಪಶುವ. ''ಗೋಮಾತೆ'' ಯೆಂಬುದು ಆದರ್ಶವೆಂಬುದು ಒಂದು ಧರ್ಮಕ್ಕೆ ಮಾತ್ರ ಮೀಸಲು. ಆ ಧರ್ಮದವರೂ, ಹಣವನು ಕಂಡರೆ ಆದರ್ಶ ಮರೆವರು. ಪ್ರೀತಿಯಿಂ ಬೆಳಸಿದ ಗೋಮಾತೆಯನ್ನು ಕದ್ದು ಮಾರುವರು. ಎಲ್ಲಿದೆ ಆದರ್ಶ?

ಅಂದಿಗು ? ಇಂದಿಗು ?

(1) ನಮ್ಮ ಪೂರ್ವಜರಿಗೆ ಅತಿಥಿಯಾಗಮನ ಪರಮ ಹರ್ಷವು, ಸಂತೃಪ್ತಿಯವರಿಗೆ. ಅತಿಥಿ ಬಾರದಿರೆ ಊಟ ಸೇರದು. ಅತಿಥಿ ಬಂದರೆ ಸಂಕಟವಿವರಿಗೆ - ಇಂದಿನ ಪೀಳಿಗೆಗೆ?

Sri Vidyabharathi Book Centre, Sringeri

CC-O. In Public Domain. Digitized by eGangotri

(2) ಅತಿಥಿ ದೇವೋಭವ ನಾಣ್ನುಡಿಯವರಿಗೆ – ''ಅತಿಥಿದೇವೋಭವ'' ಹೋಟೇಲ್ ಮಾಲೀಕರಿಗೆ.

(3) ಉಂಡು ಹೋಗಲಿ – ಕೊಂಡು ಹೋಗಲಿ ಪೂರ್ವೀಕರಿಗೆ ? ''ದುಡ್ಡು ತೆತ್ತು ತಿಂದು ಹೋದ, ದುಡ್ಡು ಕೊಟ್ಟು ಕೊಂಡು ಹೋದ'' ಇಂದಿನ ಜನತೆಗೆ?

(4) ಪುಟ್ಟ ಮನೆಯಲಿ – ವಿಶಾಲ ಹಜಾರದಿ ಮಾತಾಡುತ್ತಾ ಮಲಗುತಿದ್ದರು ಪೂರ್ವೀಕರುಗಳು.

ಪತಿಪತ್ನಿಯರಿಗೆ ಪ್ರತ್ಯೇಕ ಕೊಠಡಿ. ಮಗನಿಗೊಂದು, ಮಗಳಿಗೊಂದು ಬೇರೆ ಬೇರೆ ಕೊಠಡಿ. ಬಂದ ಅತಿಥಿಗೆ, ಹೊಟೇಲಿನ ಕೊಠಡಿ ಇಂದಿನ ಪೀಳಿಗೆಗೆ.

(5) ಮೈತುಂಬ ಬಟ್ಟೆ ಬರೆ, ಮಂಗಳದ ಲಾಂಛನ, ನಿಯಮಿತ ಆಭರಣ, ಕೇಶಾಲಂಕಾರ, ಮುಗುಳ್ನಗೆ ಮುಖವು ಹಿಂದಿನ ಗೃಹಿಣಿಗೆ.

ಮೈ ಪ್ರದರ್ಶನದ ಬಟ್ಟೆ ಬರೆಯು, ಹಣೆಯಲ್ಲಿ ಸಣ್ಣ ಕುಂಕುಮದ ಬಟ್ಟು, ಮೈತುಂಬ ಆಭರಣ, ಮುಖಕ್ಕೆ ಮೇಕಪ್ಪು, ಲಿಪ್‌ಸ್ಟಿಕ್ ತುಟಿಯು, ಮೈಭಾರವಾ ಭರಣ, ಸರ್ವಾಲಂಕೃತ ಕೇಶ, ನಾಟಕೀಯ ಮುಖ ಇಂದಿನ ಗೃಹಿಣಿಗೆ.

(6) ಹಿರಿಯರ ಕಂಡರೆ ದೂರದಿಂದ ನಮನ, ಯೋಗಕ್ಷೇಮ ವಿಚಾರಣೆ, ಆದರದ ಸ್ವಾಗತ, ಆತ್ಮೀಯ ವಿಶ್ವಾಸ ಹಿಂದಿನ ಪೀಳಿಗೆಗೆ.

ಹಿರಿಯರ ಕಂಡರೆ ಅತೀವ ತಾತ್ಸಾರ, ಸಮವಯಸ್ಕರೊಡನೆ ಮನ ಬಿಚ್ಚಿ ಹರಟೆ, ಆರ್.ಸಿ.ಸಿ. ಹಾರುವಂತೆ ಜಂಭ ಕೊಚ್ಚುವುದು, ಇಂದಿನ ಪೀಳಿಗೆ.

(7) ಸಲ್ಲುವ ಸಮಾಚಾರ ಹಿಂದಿನ ಪೀಳಿಗೆ.

ಸಲ್ಲದ ಸಮಾಚಾರ, ಆಕ್ಷೇಪ ದೂರುಗಳು, ಇಂದಿನ ಪೀಳಿಗೆ.

(8) ಅವಶ್ಯಕತೆಯನನುಸರಿಸಿ ವ್ಯವಹಾರ ಮಾಡುವುದು ಹಿಂದಿನ ಪೀಳಿಗೆ

ಅನಾವಶ್ಯಕ ವ್ಯವಹಾರ, ಮೂಗು ತೂರಿಸುವುದು, ತನ್ನನ್ನು ಬಿಟ್ಟರೆ ಜಾಣರಿಲ್ಲ ಇಂದಿನ ಪೀಳಿಗೆ

(9) ಸಲಹೆ ಕೊಡುವುದು, ಸ್ವಾರ್ಥಕಾಗಲ್ಲ. ಹಿಂದಿನ ಪೀಳಿಗೆ.

ಸಲಹೆಗಾಗಿ, ಬೆಲೆಯು ಕಟ್ಟುವುದು ಇಂದಿನ ಪೀಳಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

(10) ಧರ್ಮನ್ಯಾಯಗಳ - ನೀತಿ ನಿಯಮಗಳ, ಜವಾಬ್ದಾರಿಯೇ ಹಿಂದಿನ ಪೀಳಿಗೆ
ಅಧರ್ಮ, ಅನ್ಯಾಯ, ಅನೀತಿ, ಅನಿಯಮ ಕಾರ್ಯಾಗಾರವೆ ಇಂದಿನ ಪೀಳಿಗೆ.

ಸಾಮಾನ್ಯರ ಮಧ್ಯಮರ ಇಂದಿನ ಸ್ಥಿತಿಯು?

ಓಟು ಓಟೆಂದು ಬಾಯ್ಬಡಿದುಕೊಂಡವು ಎಲ್ಲ ಪಕ್ಷಗಳು. ಓಟನ್ನು ಕೊಟ್ಟೆವು ಸಾಮಾನ್ಯರು, ಮಧ್ಯಮದವರು. ಆದದ್ದೇನು ? ಆದದ್ದೇನು ? ವಿಚಾರ ಮಾಡಿ ? ವಿಚಾರ ಮಾಡಿ?

ರಾಜಕೀಯವೇ ಉದ್ಯೋಗವಾಗಿ ಪುಡಾರಿಯಾದವ ಪ್ರಸಿದ್ಧನಾಗುವ - ಗೂಂಡಾಗಿರಿಯಲಿ ದರ್ಬಾರ್ ನಡೆಸುವ. ಅವನದೇ ಒಂದು ಪುಂಡರ ಪಟಾಲಂ ? ಆ ಪಟಾಲಮ್ಮಿಗೆ ಅವನೇ ಅಧಿಪತಿ, ಸರ್ವಾಧಿಕಾರಿ. ಹಳ್ಳಿಯ ದಾಂಧಲೆ, ಊರಿನ ದಾಂಧಲೆ, ಪಟ್ಟಣದ ದಾಂಧಲೆ, ಎಲ್ಲೆಲ್ಲಿಯೂ ಕುಪ್ರಸಿದ್ಧನಾದ. ಸಾಮಾಜಿಕ ವ್ಯವಹಾರದಿ ಇವನದೆ ಮಧ್ಯಸ್ತಿಕೆ, ಆಸ್ತಿ ವ್ಯವಹಾರದಿ ಇವನದೆಯೇ ಅಂತಿಮ ತೀರ್ಪು. ರಿಯಲ್ ಎಸ್ಟೇಟ್ ದಂಧೆಯಲಿ ಇವನಿಗೇ ಸಿಂಹಪಾಲು ? ಸರ್ಕಾರಿ ಕಛೇರಿ, ಪೊಲೀಸ್ ಸ್ಟೇಷನ್ ಇವನ ತೀರ್ಪೇ ಅಂತಿಮ. ತೀರ್ಪು ? ಆಸ್ಪತ್ರೆ ವ್ಯವಹಾರ ಅವನ ಕೈಯಲ್ಲೆ. ನ್ಯಾಯಾಂಗ ವ್ಯವಹಾರದಿ ಅವನ ಸಲಹೆಯು ಅತ್ಯಾವಶ್ಯಕ ? ಟೂರಿಸಂ ಹಾಗೂ ಪ್ರಸಾರಖಾತೆಲಿ ಅವನದೇ ವಾಹನಗಳು, ಅವನದೇ ಚಾಲಕರುಗಳು. ಅವನರಿವಿಲ್ಲದೆ ಹಣ ಕೈ ಸೇರಿತು. ಶಿಷ್ಯರೆಲ್ಲರೂ ಜೈಕಾರ ಹಾಕಿದರು? ಜನಾಂಗದ ಹಾಗೂ ಮಠದ ಕೃಪೆಯಿದೆ, ಚುನಾವಣೆಗೆ ನಿಂತ - ಹೆಬ್ಬೆಟ್ಟೊತ್ತಿದ, ಹಳ್ಳಿಯಗಮಾರ ದಿಲ್ಲಿಗೆ ಬಂದ. ಹಳ್ಳಿಲಿ ಸಾಮಾನ್ಯ ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದವ ಬೆಳೆಯುತ, ಬೆಳೆಯುತ ಇಡೀ ಜಿಲ್ಲೆಯ ಪ್ರತಿನಿಧಿ ಯಾಗಿ, ಯಾವುದೋ ಪಕ್ಷದ ಕೃಪೆಯಿಂದ ಎಂ.ಎಲ್.ಎ. ಆದ, ಸಚಿವನೂ ಆದ. ಏಕ ವಚನದಲಿ ಅವನ ಕರೆವರೆಲ್ಲ ''ಬುದ್ಧಿ'' ಎನ್ನುತ ನಮಸ್ಕಾರ ಹೊಡೆವರು, ವಿದ್ಯೆ ನೈವೇದ್ಯ - ಬುದ್ಧಿ ಅಮಾನುಷ. ಸಿಕ್ಕ ಖಾತೆಯಲಿ ಹಣ ಲೂಟಿ ಹೊಡದ. - ಹಿಂಬಾಲಕರಿಗೆಲ್ಲ ತಿನ್ನಿಸಿ ಮೆರೆದ. ''ಗತಿಗೆಟ್ಟವನಂದು - ಸುಖ ಭೋಜನವಿಂದು''. ಇಪ್ಪತ್ತು ವರ್ಷದ ಹಿಂದೆ ಹರಕಲು, ಬಟ್ಟೆಯ ಹಳ್ಳಿಯ ಹೈದ ಇಂದು ನೋಡಬೇಕು ಅವನ ವೈಭವವ. ಹರಕಲು ಬಟ್ಟೆಯು ಮರತೇ ಹೋಗಿದೆ. ಕುರುಚಲು ಗಡ್ಡವು ಸಾಬ್ ಸೀದಾ ಆಗಿದೆ. ಒರಟು ಶರೀರ ಅತಿ ನುಣುಪಾಗಿದೆ. ಗಡಸು ಶರೀರ ಕೋಮಲವಾಗಿದೆ. ವೇಷ ಭೂಷಣಗಳು ಅತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಬದಲಾಗಿವೆ. ಹೈದರಾಲೀ ಖಾನ್ ವಿದ್ಯೆ, ಇಲ್ಲದಿರೆ ರಾಜ್ಯವಾಳಿದುದು ಅವನಿಗಾದರ್ಶ. ಇಸ್ತ್ರಿ ಪೈಜಾಮು, ಇಸ್ತ್ರಿ ಜುಬ್ಬ, ಇಸ್ತ್ರಿ ವೈಸ್ಟ್ ಕೋಟ್, ಇಸ್ತ್ರಿ ಖಾದಿಟೊಪ್ಪಿ, ಸಿಂಗರಿಸಿದ ಕ್ರಾಪು, ಮೋಹಕ ಮುಖವಿಂದು. ಒರಟು ಪಾದಗಳಿಗೆ ಬಾಟಾ ಹಾಫ್ ಶೂ, ಸಚಿವನಲ್ಲವೇ ? ಹಿಂದೆ ಮುಂದೆ ಜವಾನರು ? ಮೊಬೈಲ್ ಹಿಡಿದುಕೊಂಡು, ಪ್ರತಿಕ್ಷಣದಲೂ 'ಸಾರ್' ಎಂದು ಸಂಬೋಧಿಸುವ ಪಿ.ಎ. ಪಕ್ಕದಲ್ಲಿ, ಅತ್ಯಂತ ಸುಂದರ ಬಿಳಿಯ 'ಟಯೊಟಾ' ಸಿದ್ಧವಾಗಿ ನಿಂತಿದೆ ಬಂಗಲೆ ಹೊರಗಡೆ. ಬಿಳೀಡ್ರೆಸ್ ಧರಿಸಿದ, ಯುವ ಚಾಲಕನು ಸಾಹೇಬರಿಗಾಗಿಯೆ ಕಾಯುತ್ತಲಿರುವನು. ಸಚಿವರ ಜೇಬಲಿ ಇಣುಕುತ್ತಲಿದೆ – ಅತ್ಯಂತ ಬೆಲೆಬಾಳ್ವ ಸ್ವಿಸ್ ಕಂಪೆನಿಯ, ಪರದೇಶಿ ಜ್ಯೂಯಲ್ ವಾಚ್. ಸಾಹೇಬರದು 'ಬ್ರೇಕ್ ಫಾಸ್ಟ್' ಮುಗಿಯಿತು, ಸಚಿವರ ದರ್ಶನಕೆ, ಹಲ ಕಂಪನಿಯವರು. ಅಧಿಕಾರಿ ವರ್ಗದಿಂದ ವ್ಯವಹಾರ ಮುಗಿದಿದೆ. ಸಚಿವರ ದಸ್ಕತ್ತಿಗೆ ರಾಶಿರಾಶಿ ಫೈಲುಗಳಿವೆ. ಯಾವ ಕಂಪೆನಿಯವ, ಎಷ್ಟು ಕೊಡಬೇಕೆಂದು ತೀರ್ಮಾನವಾಗಿದೆ – ಅಧಿಕಾರೀ ವರ್ಗದಿಂದ ? ಬ್ರೀಫ್ ಕೇಸಿನಲಿ ನಿಗದಿಯಾದಂಥ ಹಣ ಸಂದಾಯ ಕಂಪೆನಿ ಕಡೆಯಿಂದ. ರಾಜ ಮುದ್ರೆ ಬಿದ್ದ ಸಚಿವರ ಫೈಲು, ಕಂಪೆನಿಯ ಸಚಿವರಿಂದ ನೇರವಾಗಿಯೇ ಕಂಪನಿಯವರಿಗೆ. ಇನ್ನೇನು, ಬೇಕು ? ಕೆಲಸವಾಯಿತು ಕಂಪೆನಿಯವರಿಗೆ. ಗೆಜಿಟೆಡ್ ಅಧಿಕಾರಿ ಶಿಷ್ಯವರ್ಗಕೆ ಮಾಮೂಲು ತಲುಪಿತು. ಕೃತಾರ್ಥರಾದೆವೆಂದು ಅಧಿಕಾರಿ ವರ್ಗ, ನೆಮ್ಮದಿಯ ಮುಗುಳ್ನಗೆ ಸಚಿವರ ಮುಖದಲಿ, ತೃಪ್ತಿಯ ನಗುಮುಖ ಕಂಪೆನಿಯವರಿಗೆ? ಯಾರೇನಾದರೇನು? ರಾಷ್ಟ್ರ ಹಾಳಾದರೇನು? ತನ್ನ ಸಿಂಹಪಾಲು ತನಗೆ ದೊರೆಯಿತೆಂದು ಸಚಿವರ ಸಂತೃಪ್ತಿ ? ವ್ಯವಹಾರ ಕುದಿರಿಸಿ ತಮ್ಮ ಪಾಲನ್ನು ಬಿಡದೆ ಹಿಂಡಿದೆವೆಂದು ಅಧಿಕಾರಿ ವರ್ಗ ? ಹಣ ಬಿಸಾಕಿದೆವು, ಇಷ್ಟ ಬಂದಂತೆ ಬೇಕಾದ ಸ್ಥಳದಲಿ, ವ್ಯವಹಾರ ಮಾಡೀ ಒಂದಕ್ಕೆ ಮೂರರಷ್ಟು ಲಾಭ ಸಂಪಾದಿಸಿ, ಕಂಪೆನಿ ಬೆಳೆವುದೆ ನಮ್ಮಯ ಗುರಿಯು? ಅಚ್ಚು ಕಟ್ಟು ಕೆಲಸವೆಂದು ಹೊರಗಿನ ಜನತೆಗೆ ಮನದಟ್ಟು ಮಾಡಲು ಬೇಕಾದ ಮಾಧ್ಯಮವಿದೆ. ನಮ್ಮ ಕಾರ್ಯವೈಖರಿ ಜನತೆಗೆ ತಿಳಿಯಲು ಮೂರ್ನಾಲ್ಕು ವರ್ಷಬೇಕು. ಅಲ್ಲಿಯವರೆವಿಗೆ ಈ ಸರ್ಕಾರವಿರುವುದೊ, ಹೊಸ ಸರ್ಕಾರ ಬರುವುದೊ ಎನ್ನುವ ಚಿಂತನೆ ಕಂಪೆನಿಯವರಿಗೆ.

ಪರದೇಶಿ ಸಾಲವೆಲ್ಲ ಜನತೆ ತಲೆಯಮೇಲೆ, ಸಾಲ ಪಡೆದ ಹಣ ಬಡ್ಡಿಯ ಸಮೇತ ತೀರಿಸುವವರು ನಾಡಿನ ಜನತೆಯೆ? ಸಾಲದ ಹಣದಲಿ ಮೂರ್ನೇ ಎರಡು ಭಾಗ ಸಚಿವ ಸಂಪುಟದ ಅವ್ಯವಹಾರದಿಂದ ಭ್ರಷ್ಟಾಚಾರಕ್ಕೆ – ಮೂರ್ನೇ ಒಂದು ಭಾಗ ಹಣ ನಿಗದಿಯಾದ ಮಹಾ ಯೋಜನೆಗೆ? ಕಾಮಗಾರಿ ಹೇಗಿದೆಯೆಂದು ಪ್ರಜೆಗಳು ತಿಳಿವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರತಿಪಕ್ಷದವರು ವಿಧಾನಸಭೆ ಹಾಗೂ ವಿಧಾನ ಮಂಡಲದಲ್ಲಿ ಆಳುವ ಪಕ್ಷವ ಪೇಚಿಗೆ ಸಿಕ್ಕಿಸುವರು. ಆದರು ಪಕ್ಷವು ಸುಳ್ಳು ಸಮಜಾಯಿಷಿ ನೀಡಿ ತಪ್ಪಿಸಿಕೊಳ್ಳುವುದು. ಸತ್ಯಾಂಶವರಿಯಲು ಆಯೋಗ ರಚನೆ, ಸಿ.ಬಿ.ಐ ತನಿಖೆ ಎಲ್ಲವೂ ನೀರಸ. ವ್ಯವಹಾರದಿಂದುಳಿದ ಮೂರ್ನೆ ಒಂದು ಭಾಗ ಸಾಲದ ಹಣವು ವಿವಿಧ ಯೋಜನೆಗೆ ಮೀಸಲಾಗುವುದು. ರಸ್ತೆಯ ಯೋಜನೆ, ರೈಲುಮಾರ್ಗ ಸುಧಾರಣೆ, ನೂತನ ರೈಲು ಮಾರ್ಗ, ಆಹಾರ ವಿನಿಮಯ, ಕೈಗಾರಿಕಾಭಿವೃದ್ಧಿ, ಅರಣ್ಯಾಭಿವೃದ್ಧಿ, ಪಶುಗಳ ಮೇವು, ರೈತರ ಸಮಸ್ಯೆ, ಗೊಬ್ಬರ ಸಮಸ್ಯೆ, ಅಮೂಲ್ಯ ಅಣೆಕಟ್ಟು, ವಿದ್ಯುದುತ್ಪಾದನೆ, ಜಲಾಶಯಗಳು, ಯಂತ್ರಸಾಮಗ್ರಿ, ರಕ್ಷಣಾ ಸಾಮರ್ಥ್ಯ, ಔಷಧಿ ಸರಬರಾಜು, ಸಾಂಕ್ರಾಮಿಕ ತಡೆ, ಗ್ರಾಮಾಂತರಕೆ ವಿದ್ಯುದ್ದೀಪ, ಬಡ ಬಗ್ಗರಿಗೆ ಉಚಿತ ಗೃಹಗಳು ಗ್ರಾಮಾಭಿವೃದ್ಧಿಯ ವಿಶೇಷ ಯೋಜನೆ, ನಿರುದ್ಯೋಗ ಹಾಗೂ ಮಕ್ಕಳ ಕಲ್ಯಾಣ, ಅತ್ಯುತ್ತಮ ಶಸ್ತ್ರಾಸ್ತ್ರ, ಪೆಟ್ರೋಲ್, ಡೀಸೆಲ್, ಗ್ಯಾಸುಗಳ ಆಮದು ರಪ್ತು - ಅಕ್ಕಿ, ಗೋಧಿ, ಸಕ್ಕರೆ ದ್ವಿದಳ ಧಾನ್ಯಗಳ ಆಮದು ರಪ್ತುಗಳು ಇತ್ಯಾದಿ, ಇತ್ಯಾದಿ.

ಬೃಹತ್ ಹಾಗೂ ಸಣ್ಣ ಕೈಗಾರಿಕಾ ಅಭ್ಯುದಯ ಯೋಜನೆ? ಸ್ವದೇಶಿ ಉತ್ಪನ್ನಕ್ಕೆ ವಿಲೇವಾರಿಗೆ ತೀವ್ರ ಯೋಜನೆ, ಪಶ್ಚಿಮ ಹಾಗೂ ಪೂರ್ವರಾಷ್ಟ್ರಗಳೊಡನೆ ರಾಜತಾಂತ್ರಿಕ ಸಮಸ್ಯೆ ಪರಿಹಾರ, ರಾಷ್ಟ್ರ ರಕ್ಷಣೆಯ ಅಟಾಮಿಕ್ ಹಾಗೂ ಕ್ಷಿಪಣಿ ನಿರ್ಮಾಣ ಇತ್ಯಾದಿ, ಇತ್ಯಾದಿ, ಹಲವು ಯೋಜನೆಗಳ ಅನುಷ್ಠಾನಕೆ ವಿಧಾನ ಸಭೆಯಲಿ, ಲೋಕಸಭೆಯಲಿ ಮುಕ್ತ ಚರ್ಚೆ. ಪಕ್ಷ ಪ್ರತಿಪಕ್ಷಗಳ ಕೂಗಾಟ ಹಾಗೂ ಮಾರಾಮಾರಿ, ಅಧ್ಯಕ್ಷರ ಕೂಲಿಂಗ್, ಎಲ್ಲವೂ ಶಾಂತಿ. ಮಾಧ್ಯಮಗಳಲ್ಲಿ ವಿಶೇಷ ಬರಹ, ಶ್ರೀ ಸಾಮಾನ್ಯನಿಗೆ ಸಿಕ್ಕಿದುದೇನು? ಸಚಿವ ಪ್ರತಿನಿಧಿಗಳ ಅರಚಾಟ, ಕಿರಿಚಾಟ, ದುಮ್ಮಾನ, ದುಃಖಗಳು. ಯಾರಿಗೆ ಬೇಕ್ರೀ ಈ ರಾಜಕೀಯ? ಕೈತುಂಬ ಸಂಬಳ, ಲೆಕ್ಕರಹಿತ ಗಿಂಬಳ ಸಚಿವ ಪ್ರತಿನಿಧಿಗಳಿಗೆ. ಐದು ವರ್ಷಕಾಲ ಒಂದೇ ಪಕ್ಷದ ಸಾಮ್ರಾಜ್ಯ ನಡೆವುದು. ತಮ್ಮ ಪಕ್ಷವು ರಾರಾಜಿಸಿದೆಡೆ ಹಣದ ಹೊಳೆ ಹರಿವುದು. ಬೇಡಿಕೆಗಳೆಲ್ಲ ಈಡೇರುವುವು. ಪ್ರತಿಪಕ್ಷದವರಿಗೆ ರಾಜಕೀಯ ದ್ವೇಷದಿಂದ ಜಗಳವಾಡಿದಷ್ಟೇ ಲಾಭ ? ಒಟ್ಟಿನಲ್ಲಿ ಎಲ್ಲರಿಗೂ ಅತ್ಯುತ್ತಮ ಬಂಗಲೆ, ಮೃಷ್ಟಾನ್ನ ಭೋಜನ, ರೋಲ್ಸ್‌ರಾಯಲ್ ಕಾರು, ಸಂಸಾರಕ್ಕೆ ಸಕಲ ಸೌಭಾಗ್ಯ. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ. ಜೀವಮಾನ ಪರ್ಯಂತ- ಮನೆಮಂದಿ ಮಕ್ಕಳಿಗೆಲ್ಲಾ- ಉಚಿತ ಇಲಾಜು - ಸರ್ಕಾರಿ ಬೊಕ್ಕಸದಿಂದ. ಬೆಲೆಯೇರಿದರೂ ಭಯವಿಲ್ಲವವರಿಗೆ, ಬೆಲೆ ತಾನಿಳಿದರೂ ನಷ್ಟವಿಲ್ಲವವರಿಗೆ. ಪ್ರತಿನಿಧಿ ಸಿಂಹಾಸನ, ಸಚಿವ ಸಿಂಹಾಸನ ಇರುವವರೆವಿಗೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವಾಧಿಕಾರಿಗಳು ಅವರೇ ಆಗಿಹರು. ಮಾಧ್ಯಮದ ಹೊಗಳಿಕೆ ತೆಗಳಿಕೆಗಳಿಗೆ ಬಗ್ಗದವರವರು. ದಿನವೊಂದು ಕಳೆದರೆ ಹಣದ ಚಿಂತೆಯವರಿಗೆ. ಮುಂದೈದುವರ್ಷಕೆ ಗೆಲ್ಲುವ ಯೋಜನೆ. ಈಗಿನಿಂದಲೇ ತಯಾರಿ ಅದಕ್ಕೆ. ಚುನಾವಣೆಗೆ ಅತ್ಯಂತ ಅವಶ್ಯಕ ಲಕ್ಷ್ಮೀಕಟಾಕ್ಷ. ಹಣವನು ಮಾಡಲು ಹಲವು ಯೋಜನೆಗಳು. ಪಕ್ಷದ ಕೃಪೆಗೆ ಹಣವೇ ಮಾಧ್ಯಮ. ಇರುವೈದುವರ್ಷದಲಿ - ಭವಿಷ್ಯದ ಗುರಿಯಿಂದ ಅಪಾರ ಚರಸ್ಥಿರ ಆಸ್ತಿಗೆ ಸನ್ನಾಹ ? ವಿಶಾಲ ಬಂಗಲೆ, ಲೆಕ್ಕವಿಲ್ಲದಷ್ಟು - ಬೆಲೆ ಬಾಳ್ವ ಸೈಟುಗಳು. ನೂರಾರು ಎಕರೆ ತೋಟ, ಜಮೀನು, ಲಾಭದಾಯಕ ವ್ಯವಹಾರದಾ ಸಂಸ್ಥೆಯ ಯಾಜಮಾನ್ಯ, ಎಣಿಕೆಯಿಲ್ಲದಾ ಕಪ್ಪುಹಣ ಬ್ಯಾಂಕಲಿ, ಲಕ್ಷಾಂತರ ರೂ.ನ ನಗನಾಣ್ಯಗಳು, ಬ್ಯಾಂಕ್ ಲಾಕರಿನಲಿ - ಷೇರ್ ಸರ್ಟಿಫಿಕೇಟ್ ಹಾಗೂ ಆಸ್ತಿ ಕಡತಗಳು, ಕುಟುಂಬದೊಡನೆ ಕ್ಲಬ್ಬಿಗೆ ಹೋಗಿ ಮನಸಾರೆ ಕುಡಿವರು. ಇಸ್ಪೀಟ್ ಆಡುವುದು, ಅವಕಾಶವಾದರೆ ಕುದುರೆ ಜೂಜು ? ಮನರಂಜನೆಗೆ ಶಿಕ್ಷಣ ನೆವದಲಿ ಪರದೇಶ ಪ್ರವಾಸ, ನಾಲ್ಕಾರು ಕಾರುಗಳು, ಹತ್ತಾರು ಲಾರಿಗಳು, ಮೂರ್ನಾಲ್ಕು ಟು ವೀಲರ್, ಅತ್ಯಂತ ದುಬಾರಿಯ ಎರಡು, ಮೂರು ಸೆಲ್ ಫೋನುಗಳು, ಖರ್ಚೆಷ್ಟು ಮಾಡಿದರೂ ಕರಗಲೊಲ್ಲದ ಲಕ್ಷ್ಮಿ. ತೂಗುಯ್ಯಾಲೆಯಲಿ ಸಿಗರೇಟ್ ಸೇದುತ ಹಿಂದಿನ ಸ್ಥಿತಿಯನು ಸ್ಮರಿಸುವ ಪ್ರತಿನಿಧಿ. ಅಪಾರ ಬುದ್ಧಿಗೆ ಅವನಿಗೇ ಆಶ್ಚರ್ಯ. ತನ್ನ ಸಾಧನೆಯ ತಾನೇ ಮೆಚ್ಚುವ? ಮುಟ್ಟಿದ್ದೆಲ್ಲವು ಚಿನ್ನವಾಗಿದೆ ? ಸ್ವಜಾತಿ ಪ್ರೇಮ. ಸ್ವಜನ ಪಕ್ಷಪಾತ ತನ್ನಭ್ಯುದಯಕೆ ಕಾರಣವೆಂದು ಹಿರಿ ಹಿರಿ ಹಿಗ್ಗುವನು. ಓಟು ಕೊಟ್ಟಂಥ ಕುರಿ ಮಂದೆಯಲಿ, ತಾನು ತೋಳನೆಂದು ಅವನಿಗೆ ಆನಂದ. ಹೆಬ್ಬೆಟ್ಟೊತ್ತುವ ಹಳ್ಳಿಯ ಗಮಾರ, ಇಷ್ಟು ಉನ್ನತಿಗೆ ಏರಿದೆನೆಂದು ಅವನಿಗೇ ಆಶ್ಚರ್ಯ. ಊರ ಜಾತ್ರೆಯಲಿ ಹಣ ಖರ್ಚುಮಾಡಿ ಊಟ ಹಾಕಿಸುವ. ಹೊಗಳು ಭಟ್ಟರಿಂದ ತನ್ನ ಸಾಧನೆಯ ಪ್ರಚುರಗೊಳಿಸುವ. ಮುಂದೈದು ವರ್ಷಕೆ ಪ್ರತಿನಿಧಿಯಾಗಲು, ಹಾಗಿಲ್ಲವಾದರೆ ಉತ್ತಮ ಇಲಾಖೆಯ ಸಚಿವನಾಗಲು ಮನೆ ದೇವರಿಗೆ ಮೊರೆಯಿಡುವನವನು.

ಐದುವರ್ಷ ಕಳೆಯಿತು, ಭ್ರಷ್ಟಾಚಾರದ ಅವ್ಯವಹಾರ ಸಾರ್ವಜನಿಕರಿಗೆ ಮನದಟ್ಟಾಯಿತು. ಆದರು ಹೆದರದೆ ಕಸರತ್ ಮಾಡಿ ಸಾಧನೆ ವಿವರವ ಪಟ್ಟಿ ಮಾಡಿ, ಪಕ್ಷದ ಪ್ರಮುಖರ ಓಲೈಸಿಕೊಂಡು ಚುನಾವಣೆಯನ್ನು ಧೀರನಾಗಿ ಎದುರಿಸಿದನವ. ಹಣ ಹೆಂಡ ಹೊಳೆಗಳ ಪ್ರವಾಹ ಹರಿಸಿದ, ಮಠದ ಸ್ವಾಮಿಗಳ ಆಶೀರ್ವಾದ ಪಡೆದ, ಓಟು ಮಾಡಿದವರು ಪುನಃ ಕುರಿಗಳೇ, ತೋಳಗೆದ್ದಿತು. ಲೋಕಾಯುಕ್ತರಿಂದ ಸಾಬೀತಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಭ್ರಷ್ಟಾಚಾರಕೆ ಬೆಲೆಯಿಲ್ಲವಾಯಿತು. ಸಾಮಾನ್ಯ ಸಚಿವನು ಮುಖ್ಯಮಂತ್ರಿಯಾದ. ಲೋಕಾಯುಕ್ತರಿಗೆ ರಾಜಕೀಯದ ಮೇಲೆ ಲಗಾಮಿಲ್ಲದುದು ವರವಾಯಿತವನಿಗೆ. ಮಾಧ್ಯಮಕೂಡ ಇದನ್ನು ಪ್ರಚರಿಸಿ ಸುಮ್ಮನಾಯಿತು. ವ್ಯಕ್ತಿಗಿಂತ ಪಕ್ಷ ಮುಖ್ಯವಾಗದೆ, ಪಕ್ಷಕ್ಕಿಂತ ವ್ಯಕ್ತಿ ಮುಖ್ಯವಾಗಿ ಕೇಂದ್ರದಿಂದ ರಾಜ್ಯಪಾಲರ ಮೇಲೆ ಒತ್ತಡ ಬಂದು, ಸಚಿವ ಗೆದ್ದುದರಿಂದ ಆತನ ಮೇಲಿನ ಆಪಾದನೆಗಳು ಅನ್ಯಾಯವೆಂದು ನಿರ್ಧಾರವಾಯಿತು? ಎಲ್ಲಿಯವರೆವಿಗೆ ಲೋಕಾಯುಕ್ತರಿಗೆ ರಾಜಕೀಯ ವ್ಯಕ್ತಿಗಳ ಮೇಲೆ ಪರಮಾಧಿಕಾರ ಸಾಧ್ಯವಿಲ್ಲವೋ ಅಲ್ಲಿಯವರೆವಿಗೆ, ರಾಜಕೀಯ ವ್ಯಕ್ತಿಗಳು ನಿರಪರಾಧಿಗಳು. ಅಂದು ಗತಿಗೆಟ್ಟಹಳ್ಳಿಯ ಗಮಾರ ಇಂದು ಸಹಸ್ರಾರು ಕೋಟಿಗೆ ಬಾಳುವ ? ಹೇಳುವರ್‍ಯಾರು? ಕೇಳುವರ್‍ಯಾರು ? ಇದುವೇ ನಮ್ಮಯ ಪ್ರಜಾಪ್ರಭುತ್ವ ? ಗಣಿಯ ಹಗರಣ, ರಿಯಲ್ ಎಸ್ಟೇಟ್ ಹಗರಣ, ರಸ್ತೆಯ ಹಗರಣ, ನೀರಾವರಿ ಹಗರಣ ? ಅಣೆಕಟ್ಟು ಹಗರಣ, ನೈಸ್ ರೋಡ್ ಹಗರಣ, ಗೊಬ್ಬರ ಹಗರಣ, ಮೇವಿನ ಹಗರಣ, ರೈಲ್ವೆ ಹಗರಣ, ಪ್ರವಾಸೋದ್ಯಮ ಹಗರಣ, ರೆವಿನ್ಯೂ ಹಗರಣ, ಲೋಕೋಪಯೋಗಿ ಹಗರಣ, ಇತ್ಯಾದಿ, ಇತ್ಯಾದಿ ಯೋಜನೆಗಳಲ್ಲಿ ಕೋಟಿಕೋಟಿ ಹಣ ನುಂಗಿದ ಖದೀಮರು ರಾಜಾರೋಷವಾಗಿ ಓಡಾಡುತ್ತಿರುವರು. ಹಣ ಲಂಚ ಪಡೆದು, ಹೆಂಡವ ಕುಡಿದು ಪವಿತ್ರ ಓಟನು ಮಾರಿಕೊಂಡಂಥ ಶ್ರೀಸಾಮಾನ್ಯನು ನಿರ್ಗತಿಕನಾಗಿ ಬೀದಿ ಬೀದಿಯನು ಸುತ್ತುತ್ತಲಿರುವನು. ''ಓಟುಕೊಟ್ಟವ ಕೋಡಂಗಿಯಾದ, ಓಟು ಪಡೆದವ ಈರಭದ್ರನಾದ''. ಶ್ರೀಸಾಮಾನ್ಯನ ಬೇಡಿಕೆಗಳಿಗೆ ಭಗವಂತನೇ ಪುನರವತರಿಸಿ ಸ್ಪಂದಿಸಬೇಕು? ಯೋಚನೆ ಮಾಡಿ ? ಯೋಚನೆ ಮಾಡಿ ? ರಾಜಕೀಯ ಲಾಭದಿಂದ ಪ್ರತಿನಿಧಿ ಸಚಿವರು ರಾಜಾರೋಷಾಗಿ ಬೀದಿ ಬೀದಿ ಸುತ್ತುವರು. ಅವರ ರಕ್ಷಣೆಗೆ ಸರ್ಕಾರ ಸಹಕಾರ? ಅವರದೇ ಆದ ಪಕ್ಷ ಸಹಕಾರ ? ಲೋಕಾಯುಕ್ತರಿಂದ ಕೆಲಸ ಕಳೆದುಕೊಂಡ ಅಧಿ ಕಾರೀವರ್ಗ, ಹಲ್ಲಿಲ್ಲ ಗಿಂಜುತ ಕಾನೂನಿನಡಿಯಲಿ ಹೆಣಗುತ್ತಿರುವರು. ಸರ್ಕಾರದ ಕಾನೂನು ''ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ?'' ಯಾವುದೊಂದು ಯೋಜನೆಯಲ್ಲಿ ಸಚಿವರುಗಳಿಗೇ ಅಪಾರ ತಿನ್ನಿಸಿ, ಎಂಜಲು ಮಾತ್ರಾ ತಿಂದಂಥ ಅಧಿಕಾರಿ ಸಸ್ಪೆಂಡ್ ಆದ, ನ್ಯಾಯಾಲಯದಲಿ ಮೊಕದ್ದಮೆ ಎದುರಿಸುವ, ಭ್ರಷ್ಟಾಚಾರಕೆ ಮೂಲಕಾರಣನಾದ ರಾಜಕೀಯ ಪ್ರತಿನಿಧಿ, ಲೋಕಾಯುಕ್ತರಿಗೆ ಸಡ್ಡು ಹೊಡೆಯುತ, ಮೀಸೆತಿರುವುತ, ಯಾವ ಮೊಕದ್ದಮೆ ಬಾರದಂತೆ ಪಕ್ಕ ಮಾಡಿಕೊಂಡು, ದೋಚಿದ ಆಸ್ತಿಯ ಭದ್ರಮಾಡಿಕೊಂಡು, ಮುಂದಿನ ಚುನಾವಣೆಗೆ ನಿಲ್ಲುವಾಗ ಕಳ್ಳ ಆಸ್ತಿಯ ಪ್ರಮಾಣೀಕರಿಸಿ ಧೈರ್ಯವಾಗಿಯೇ ಸಾಗುತ್ತಿರುವನು? ಹಾಗೆಂದರೇನು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಜಾಪ್ರಭುತ್ವಕೆ ಅರ್ಥವೇ ಇಲ್ಲ? ಸಾಮ-ಧಾನ-ಭೇದ-ದಂಡಗಳು ಸಂಸಾರಕ್ಕೂ ಅತ್ಯಾವಶ್ಯಕ. ಸಾಮ್ರಾಜ್ಯಕ್ಕೂ ಅತ್ಯಾವಶ್ಯಕ. ಎಂತಹ ಅನ್ಯಾಯ ? ಅರವತ್ತು ವರ್ಷದಿಂದ ಬೆಲೆಯ ಏರಿಕೆಯ ಭಾರವ ಸಹಿಸುತ ಶ್ರೀಸಾಮಾನ್ಯನು ಬಹಳ ಕೊರಗಿಹನು - ಕೊರಗುತ್ತಲಿರುವನು. ಪ್ರಜಾಪ್ರಭುತ್ವವೆಂಬ ಆಡಳಿತ ಬಂದರೆ, ಪ್ರಜೆಯೇ ಪ್ರಭುವು. ಪ್ರಜೆಗಳ ಸುಖವೇ ಅವರ ಸುಖವು ಎಂಬ ನೀತಿಗೆ ಅರ್ಥವಿಲ್ಲವಾಯಿತು. Right is might ನಿರರ್ಥಕವಾಗಿ Might is Right ಕಾನೂನಾಗಿದೆ. 'ರಾಜ್ಯಾಧಿಕಾರ ಪ್ರಜೆಗಳಿಗೆ ಸುಖವಿಲ್ಲ' ಎಂಬ ಮಾತನ್ನು ಸುಳ್ಳಾಗಿಸಲು, ಪಾಕೀಸ್ತಾನವು ಮಿಲಿಟರಿ ಆಳ್ವಿಕೆಗೆ ರಾಜ್ಯವನ್ನೊಪ್ಪಿಸಿ ಸರ್ವಾಧಿಕಾರದಿಂದ ದೇಶ ಬಳಲಿತು. ಪ್ರಜಾಸರ್ಕಾರದಿಂದ ಬಾಳುವೆ ಚೆನ್ನವೆಂದು ಬಯಸಿದುದೇ ಭಾರತ ರಾಷ್ಟ್ರ. ಅರವತ್ತು ವರ್ಷದಲಿ ಆದದ್ದೇನು? ರಾಜಕೀಯವೆಂಬ ಸ್ವಜಾತಿಯೆಂಬ ಕೆಟ್ಟ ಚಟ ಬಂದು ಇಡೀ ಭಾರತ ತಲ್ಲಣಿಸುತ್ತಿದೆ ? ಒಬ್ಬ ರಾಜನಿಗೆ ಒಂದು ಸೈನ್ಯವಿದ್ದಿತು. ಈಗ ಹಾಗಿಲ್ಲ. ಒಬ್ಬೊಬ್ಬ ಪ್ರತಿನಿಧಿಗೆ ಒಂದೊಂದು ಗೂಂಡಾಸೈನ್ಯ. ಕಾನೂನು ಅವರದೆ, ರಾಜ್ಯಾಡಳಿತವವರದೆ. ಹಿಂದಿನ ರಾಜರ ಅಧಿ ಕಾರಾವಧಿಯಲಿ ಪ್ರಕೃತಿ ಸೂರೆಗೊಂಡ ಮಾಹಿತಿ ನಮಗಿಲ್ಲ. ಪ್ರಧಾನಿಗಳಾರು ಸ್ವಾರ್ಥ ಬಳಸಿದ ಪುರಾವೆ ನಮಗಿಲ್ಲ. ವಿಷಯಾಸಕ್ತ ಅರಸನಾಗಿದ್ದರೆ, ಸೈನ್ಯಾಧಿಕಾರಿಗಳು ದುರ್ನೀತಿ ನಡೆಸಿದ, ಮಾಹಿತಿ ನಮಗಿದೆ. ದುಷ್ಟಮೃಗಗಳ ಉಪಟಳವಾದರೆ ರಾಜನಾದವನು ಸೈನ್ಯ ಸಮೇತ ಕಾಡಲಿ ಬೀಡುಬಿಟ್ಟು, ದುಷ್ಟ ಮೃಗಗಳನ್ನು ಬೇಟೆಯಾಡಿದ ಉಪಕಥೆಗಳಿವೆ. ಕ್ಷಾಮ ಡಾಮರದಲ್ಲಿ ರಾಜ್ಯ ಭಂಡಾರವ ಪ್ರಜೆಗಳಿಗರ್ಪಿಸಿದ ದಾಖಲೆ ನಮ್ಮಲ್ಲಿದೆ, ಪ್ರಜಾಕ್ಷೇಮಕ್ಕಾಗಿ ರಾಜಾಧಿರಾಜರು ಯಜ್ಞಯಾಗಾದಿಗಳ ನಡೆಸಿದ ದಾಖಲೆ ಅಪಾರವಾಗಿದೆ. ದುಷ್ಟರಾಜನೆಂದು ಅಪಕೀರ್ತಿ ಹೊಂದಿದ ರಾಜರ ಸಂಖ್ಯೆ ಅತ್ಯಂತ ವಿರಳ. ಪ್ರಜಾಪ್ರಭುತ್ವ ಹೇಗಿದೆ ನೋಡಿ? ಒಂದೊಂದು ಗ್ರಾಮಕ್ಕೆ ಒಬ್ಬೊಬ್ಬ ರಾಜಕೀಯ ಪುಂಡ ಯಜಮಾನ? ಒಂದೊಂದು ಊರಿಗೆ ಕುಪ್ರಸಿದ್ಧನಾದ ರಾಜಕೀಯ ವ್ಯಕ್ತಿ ಅವನೇ ಯಜಮಾನ। ಒಂದೊಂದು ಜಿಲ್ಲೆಗೆ ಕ್ರಮಿನಲ್ ಮೊಕದ್ದಮೆಯ ರಾಜಕೀಯ ಹಿನ್ನೆಲೆಯ ಸರದಾರ ಪ್ರತಿನಿಧಿ, ಎಂ.ಎಲ್.ಎ. ಆಗಿಹನು'' ಆತನ ಕೈಯಲ್ಲೆ ಸರ್ವಾಧಿಕಾರ, ಪುಂಡರ ಗುಂಪು ಅವನಿಗೆ ಜೈಕಾರ? ಕಾನೂನು ಅವನದೆ? ಪೋಲೀಸ್ ಅವನದೆ? ಬಹುಸಂಖ್ಯಾತ ಕೋಮಿಗೆ ಯಜಮಾನನವನು? ಅವನ ವಿರೋಧ ಯಾವ ಅಧಿ ಕಾರಿಯಿಲ್ಲ? ಅವನಿಗೆ ವಿರೋಧ ಯಾವ ಲಾಯರಿಲ್ಲ? ಅವನ ಮಾತೇ ವೇದವಾಕ್ಯವು? ಸರ್ಕಾರದ ಹಣವು ಅವನಿಂದ ಬರಬೇಕು? ಊರೊಟ್ಟಿನ ಕೆಲಸ ಅವನಿಂದಾಗಬೇಕು ? ಅವನಿಗೆ ವಿರೋಧ ಪ್ರಾಣಸಂಚಕಾರ? ಅವನ ಭಯದಿಂದ ಓಟು

Sri Vidyabharathi Book Centre, Sringeri

 CC-O. In Public Domain. Digitized by eGangotri

ಹಾಕಬೇಕು ? ಆಯಾ ಜಿಲ್ಲೆಗೆ ಅವನೇ ರಾಜಾ ? ಇಂತಹ ರಾಜರು ಭಾರತದಲ್ಲಿ ಸಹಸ್ರಾರು ಜನ ? ಅವರ ಆಸ್ತಿಗೆ ಪರಿಮಿತಿಯಿಲ್ಲ ಉತ್ತಮನಾದರೆ ಯೋಗ್ಯತೆಯಿಂದಾಳುವ. ನೀಚನಾದರೆ ಮಾಡಬಾರದ್ದನ್ನು ಮಾಡಿಯೇ ಮಾಡುವ. ಅವನು ಕಟ್ಟಿದ ದಂಡು, ರೌಡಿಸಂ ಗೆ ಸಿದ್ಧ, ಸುಪಾರಿಗೂ ಸಿದ್ಧ, ಕೊಲೆಗೂ ಸಿದ್ಧ, ಜೈಲಿಗೂ ಸಿದ್ಧ. ಅವರನು ಬಿಡಿಸಲು ಈ ಅಣ್ಣನಿರುವನು. ಇದುವೇ ನಮ್ಮಯ ಪ್ರಜಾಸರ್ಕಾರ ?

ಲೋಕಾಯುಕ್ತರಿಂದ ಮುಟ್ಟುಗೋಲುಹಾಕಿದ ಆಸ್ತಿ ಹಾಗೂ ಕಪ್ಪುಹಣವು ಸರ್ಕಾರದ ಆಧೀನ. ಕಳ್ಳ ಆಸ್ತಿಯು ಸರ್ಕಾರದ್ದೆಂದು ಘೋಷಿಸುವ ಧೈರ್ಯ ಸರ್ಕಾರಕ್ಕಿಲ್ಲ. ರಾಜಕೀಯ ವ್ಯಕ್ತಿಗಳ ಪರಿಶೀಲನೆ, ಲೋಕಾಯುಕ್ತರ ವ್ಯಾಪ್ತಿಗೆ ಬಂದರೆ, ಪ್ರತಿನಿಧಿ ಸಚಿವರಿಗೆ ಉಳಿಗಾಲವಿಲ್ಲ. ಯೋಚನೆ ಮಾಡಿ ಪ್ರಜಾಸರ್ಕಾರ ಸೃಷ್ಟಿಸಿರುವುದೇ ಲೋಕಾಯುಕ್ತರು. ಲೋಕಾಯುಕ್ತರಿಗೆ ಪರಮಾಧಿಕಾರವೆಂದು ಶ್ರೀಸಾಮಾನ್ಯನು ಹಿರಿ ಹಿರಿ ಹಿಗ್ಗಿದನು ! ಆದರೇನು ? ಆದರೇನು ? ಲೊಟ ಲೊಟ ಟೊಣ ಟೊಣ ? ಬಿ.ಜೆ.ಪಿ ತತ್ವವೇನೋ ನಮಗೆ ಸಮ್ಮತವೆ ? ಆದರೆ ಅದರ ಪ್ರತಿನಿಧಿಗಳೇ ಬೇರೆ ಬೇರೆ ಪಕ್ಷದಿಂದ ಹಾರಿ ಬಂದವರೆ ? ಪಕ್ಷ ತತ್ವವನು ಪ್ರತಿಪಾದಿಸ ಹೊರಟರೆ ಪ್ರತಿನಿಧಿ ಬಂಡವಾಳ ಹೊರಗೆ ಬರುವುದು? ತತ್ವನಿಷ್ಠರು ಮೈನಾರಿಟಿ ಇಲ್ಲಿ ? ಹಣ ಮಾಡಿದವರೇ ಮೆಜಾರಿಟಿಯಲ್ಲಿ ? ಅವರ ವಿರೋಧ ಬಿ.ಜೆ.ಪಿಗೆ ಕುತ್ತು ಅಪರೂಪವಾಗಿ ಹಲ ವರ್ಷ ನಂತರ ಮೆಜಾರಿಟಿಯಾಗಿರುವ ಬಿಜೆಪಿಯನ್ನು, ಮೈನಾರಿಟಿಯಾಗಿಸಲು ಹಿರಿಯರಿಗೆ ಅಸಮಾಧಾನ ? ಧರ್ಮ ಸಂಕಟ ? ತತ್ವನಿಷ್ಠೆ ಬೇಕೇ ? ಅಧಿಕಾರ ಗದ್ದುಗೆ ಬೇಕೇ ? ದುಡುಕದಿದ್ದರೆ, ಅಧಿಕಾರವಿದ್ದಲ್ಲಿ, ಕೆಲವು ವರ್ಷಗಳಲ್ಲಿ ರಾಮರಾಜ್ಯ ಸ್ಥಾಪನೆಯು ಹಿರಿಯರಿಗಾದರ್ಶ ? ಆದರೀಗ ರಾವಣ ಕೂಟದಲಿ ರಾಮರಾಜ್ಯವಾಗಬೇಕು ? ಅಧಿಕಾರಿ ವರ್ಗದ ಕಳ್ಳ ಆಸ್ತಿಯ ಲೆಕ್ಕ, ನೂರಾರು ಕೋಟಿಯಾದರೆ, ಅರವತ್ತು ವರ್ಷಗಳಿಂದ ರಾಜಕೀಯ ಮಾಡಿದ ಪ್ರತಿನಿಧಿ, ಹಾಗೂ ಸಚಿವರ ಆಸ್ತಿ ಸಹಸ್ರಾರು ಕೋಟಿ ಇರಲೇಬೇಕು. ಪರದೇಶಿ ಸಾಲದ ಹಣ, ಪ್ರತಿನಿಧಿಗಳ ಕಳ್ಳ ಆಸ್ತಿ, ಜನತೆಗಿದನ್ನು ಪುನರರ್ಪಿಸಲು ಆ ಭಗವಂತನೆ ಶ್ರೀ ರಾಮನಾಗಿ ಬರಬೇಕೇನೋ ?

ಕೆಲದಶಕದ ಹಿಂದೆ ಚುನಾವಣೆಯಲ್ಲಿಗೆದ್ದು ಬಂದವರಿಗೆ ಮಾನ ಮರ್ಯಾದೆಗಳು ಮುಖ್ಯವಾಗಿದ್ದುವು. ಕ್ರಿಮಿನಲ್ ಕೇಸಲಿ ಅವರ ಹೆಸರಿಲ್ಲ. ತಪ್ಪುಮಾಡಿದುದು ಪ್ರಚಾರವಾದರೆ, ಸಾಬೀತಾಗುವ ಮುನ್ನವೇ - ರಾಜೀನಾಮೆಯಿತ್ತು ಹಿಂದಿರುಗುತಿದ್ದರು. ಆ ಕಾಲ ಹೋಯಿತು. ಭಂಡರು ಮೊಂಡರು ಇಂದಿನ ಪೀಳಿಗೆ, ಕ್ರಿಮಿನಲ್ ಹಿನ್ನೆಲೆಯಿದ್ದು,

Sri Vidyabharathi Book Centre, Sringeri

CC-O. In Public Domain. Digitized by eGangotri

ತಪ್ಪು ಸಾಬೀತಾದರೂ ಪಕ್ಷ ಕೃಪೆಯಿಂದ ಮುಂದುವರಿಯುವರು. ಅತ್ಯಂತ ಬುದ್ಧಿವಂತ ನ್ಯಾಯವಾದಿಗಳು ಅವರ ರಕ್ಷಣೆಗೆ. ಅನ್ಯಾಯದ ಹಣದಲಿ ಅವರಿಗೂ ಸಮಪಾಲು ! ಹೇಗಿದೆ ನಮ್ಮಯ ಪ್ರಜಾಸರ್ಕಾರ ? ಭ್ರಷ್ಟಾಚಾರಿಯನು, ಭ್ರಷ್ಟಾಚಾರಿಯಲ್ಲವೆಂದು ಸಾಬೀತು ಮಾಡುವಷ್ಟು ಪ್ರಚಂಡ ಪುರುಷರು ನ್ಯಾಯವಾದಿಗಳು. ''ನ್ಯಾಯವಲ್ಲ ಮುಖ್ಯ, ಹಣವೇ ಮುಖ್ಯ'' ಎಂದು ನಿರ್ಧರಿಸುವ ನ್ಯಾಯವಾದಿಗಳು ? ಪ್ರಜಾಸರ್ಕಾರದ ಇಂದಿನ ಹೊಲಸಿಗೆ ಪಕ್ಷ ಕಾರಣವೊ, ಪ್ರತಿನಿಧಿಕಾರಣವೊ, ಓಟು ಮಾಡಿದಾ ಜನತೆ ಕಾರಣವೊ ಭಗವಂತನೇ ಬಲ್ಲ ?

ನನ್ನಯ ಪ್ರಶ್ನೆ ಜನತೆಯ ಪ್ರಶ್ನೆ? ಉತ್ತರಿಸುವವರು ರಾಜ್ಯ ಪ್ರತಿನಿಧಿಗಳೊ ? ರಾಜ್ಯಪಾಲರೋ ? ರಾಜ್ಯ ಸರ್ಕಾರವೊ ? ಕೇಂದ್ರ ಪ್ರತಿನಿಧಿಗಳೊ ? ಕೇಂದ್ರ ಸರ್ಕಾರವೊ ? ರಾಷ್ಟ್ರಾಧ್ಯಕ್ಷರೊ ? ವಿವಿಧ ಖಾತೆಗಳ ಅಧಿಕಾರಿವರ್ಗವೊ ? - ನಮಗೆ ವೇಕಾದುದು ಎರಡು ಹೊತ್ತು ಅನ್ನ, ಮೈತುಂಬ ಬಟ್ಟೆ, ವಾಸಕ್ಕೊಂದು ಮನೆ, ಬದುಕಲು ವೃತ್ತಿ.

ಲೋಕಾಯುಕ್ತರ ಬಲೆಗೆ ಬಿದ್ದಂಥ, ಅಧಿಕಾರಿ ವರ್ಗದ ವಂಶಾವಳಿಯನು ವೀಕ್ಷಿಸಿದಾಗ, ನಮಗೂ ಒಂದು ಸರ್ಕಾರಿ ಕೆಲಸ ದೊರೆಯುವಂತಾದರೆ ಕೋಟಿ ಕೋಟಿ ಹಣ ಕಾಣಬಹುದಲ್ಲವೇ ? ಎಂಬುವ ಹಂಬಲ. ಸಾಮಾನ್ಯ ಕೆಲಸವೇ ಸಾಕು ನಮಗೆ. ಪೋಲೀಸನಾದರೇನು ? ಗ್ರಾಮಲೆಕ್ಕಿಗನಾದರೇನು ? ರೆವಿನ್ಯೂ ಇಲಾಖೆ ಸಿಕ್ಕಿದರೇನು ? ಲೋಕೋಪಯೋಗಿ ನಮಗೆ ಸಮ್ಮತವೆ ? ಆಹಾರ ಇಲಾಖೆ ಅದ್ಭುತ ನಮಗೆ ? ಗಣಿ ಭೂ ವಿಜ್ಞಾನ ಸ್ವರ್ಗವೆ ಸಿಕ್ಕಂತೆ? ಆಸ್ಪತ್ರೆ ವಹಿವಾಟು ಆರೋಗ್ಯ ನಮಗೆ? ಬಿತ್ತನೆ ಬೀಜ, ರಸಗೊಬ್ಬರವು ರಸದೂಟ ನಮಗೆ? ವ್ಯವಸಾಯ ಇಲಾಖೆ ಸಂತೃಪ್ತಿ ನಮಗೆ? ಪೋಲೀಸ್ ಇನಾಖೆ ಕಾನೂನು ನಮ್ಮದೆ? ಟ್ರಾನ್ಸ್‌ಪೋರ್ಟ್ ಇಲಾಖೆ ಕುಳಿತಲೇ ಹಣವು ? ಮಾರಾಟ ತೆರಿಗೆ ಹಣವಿಡೆ ಎಡೆಯಿಲ್ಲ? ನೋಂದಣಿ ಇಲಾಖೆ ಶ್ರಮವಿಲ್ಲದೆ ಹಣ ? ನೀರಾವರಿ, ವ್ಯವಸಾಯ ದೋಚಿದಷ್ಟು ಹಣ ? ಕಂಪೆನಿ ವ್ಯವಹಾರ ಬ್ರೀಫ್‌ಕೇಸ್ ಹಣವು ? ಪಶುಪಾಲನ ಇಲಾಖೆ ಮೂಕ ಪ್ರಾಣಿಯರಿಯದು ನಮ್ಮ ಲಾಭವಾ ? ಅರಣ್ಯ ಇಲಾಖೆ ಬೀಟೆ, ಹೊನ್ನೆ, ಗಂಧ, ತೇಗ ಮಾವು, ಹಲಸು, ಬಾಯ್ಬಿಡಲಾರವು ಭ್ರಷ್ಟಾಚಾರವ ? ವೈದ್ಯನಾದರೆ ಮಾತಿಗೆ ಹಣ, ಚುಚ್ಚಿದರೆ ಹಣ, ಕತ್ತರಿಸೆ ಹಣ, ಹೆಣವಾದರೂ ಹಣ ? ಇಂಜನಿಯರ್ ಆದರೆ ಕಾಮಗಾರಿಯನು ಕೊಡಲು ಹಣ, ಕಾಮಗಾರಿಯು ಮುಂದರಿಯೆ ಹಣಾ, ಕಾಮಗಾರಿಯನು ಮುಗಿಸಲು ಹಣಾ, ಅಂತಿಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿಲ್ ಪಾಸ್ ಮಾಡಲು ಹಣಾ ? ಒಂದು ಆಫೀಸಿನ ಜವಾನನಾದರೆ, ಸೆಲ್ಯೂಟ್ ಹೊಡೆದು ಒಳಗೆ ಬಿಡಲು ಹಣ ? ಸಾಹೇಬರನ್ನು ದರ್ಶಿಸೆ ಹಣಾ ? ಹಿಂದಿರುಗಿ ಬರುವಾಗ ಹಲ್ಲು ಕಿರಿಯೆ ಹಣ ? ಗುಮಾಸ್ತನಾದರೆ ಫೈಲು ನೋಡೆ ಹಣ. ಫೈಲು ತೆಗೆಯೆ ಹಣ. ಮೇಜಿಂದ ಮೇಜಿಗೆ ತಳ್ಳಲು ಹಣಾ ? ಸಾಹೇಬರಾ ದಸ್ಕತ್ತಿಗೆ ಹಣ ? ಪ್ರಾರ್ಥನಾ ಪತ್ರ ಮುಟ್ಟಲು ಹಣ ? ವರ್ಗದ ಪತ್ರದ ಶಿಫಾರಸ್ಸಿಗೆ ಹಣಾ ? ಬಯಸಿದ ಸ್ಥಳಕ್ಕೆ ವರ್ಗಕೆ ಹಣಾ ? ಇದ್ದ ಜಾಗದಲ್ಲಿ ಮುಂದರಿಯೆ ಹಣಾ ? ಇರುವವನನ್ನು ಜಾಗ ಬಿಡಿಸೆ ಹಣ ? ಬಡ್ತಿ ಪಡೆಯಲು ಕೇಳಿದಷ್ಟು ಹಣ ? ಸಚಿವರ ಶಿಫಾರಸ್ಸಿಗೆ ಲಕ್ಷ ಲಕ್ಷ ಹಣ ? ಬ್ಯಾಂಕಿನ ಉದ್ಯೋಗ ದೊರಕಲು ಹಣಾ ? ಲೋನ್. ಸ್ಯಾಂಕ್ಷನ್ ಮಾಡಲು ಕೇಳಿದಷ್ಟು ಹಣ, ಸ್ಪಾಟ್ ಇನ್‌ಸ್ಪೆಕ್ಷನ್‌ಗೆ ಪರ್ಸೆಂಟೇಜ್ ಹಣಾ ?

(ನಗರ ಸಭೆ ಹಾಗೂ ಮುನಿಸಿಪಾಲಿಟಿ) ನಿವೇಶನ ದರಖಾಸ್ತು ಪರಿಶೀಲನೆಗೆ ಹಣಾ ? ಪ್ಲಾನ್ ಸ್ಯಾಂಕ್ಷನ್ ಮಾಡಲು ಇಂಜನಿಯರ್‌ಗೆ ಹಣಾ ? ಎನ್‌ಕ್ರೋಚ್‌ಮೆಂಟ್ ಮಾಡಲು ಕೇಳಿದಷ್ಟು ಹಣ ? ಬಿಲ್ಡಿಂಗ್ ಕಟ್ಟಿದ ಮೇಲೆ ತೆರಿಗೆ ನಿರ್ಧರಿಸೆ ಹಣಾ ? (ಕುಡಿಯುವ ನೀರು - ವಿದ್ಯುಚ್ಛಕ್ತಿ) ಮೀಟರ್‌ಗಳನ್ನು ಅಳವಡಿಸೆ ಹಣಾ ? ಕಳ್ಳ ಲೆಕ್ಕ ತೋರಿಸೆ ಒಳಗೊಳಗೆ ಹಣಾ ? ಬೇಕಾದಾಗ ನೀರು ಬಿಡಲು ಹಣ ? ಗೆಜ಼ಟೆಡ್ ಆಫೀಸರ್ ಆದರಂತೂ ಸಂಬಳ- ಗಿಂಬಳ ? ಸಚಿವರ ಇಲ್ಲವೆ ಪ್ರತಿನಿಧಿ ಕೃಪೆಯಿಂದ ಯೋಜನೆಯನ್ನು ಅನುಷ್ಠಾನ ಮಾಡುವ ಸಮಯಕೆ, ಕಂಪೆನಿಗಳಿಂದ ಅಪಾರವಾಗಿ ಲಂಚದ ಹಣವು ? ಪೋಲೀಸ್ ಆಫೀಸರ್ ಆದರಂತೂ ಪಬ್ಲಿಕ್ ಸಮಸ್ಯೆಗೆ ಕುಳಿತಲ್ಲೆ ಹಣವು ? ಯಾವುದೋ ಉದ್ಯೋಗಕೆ ನೀತಿ ನಿಮಯಪಾಲನೆ ಹಿಂದಿನ ಪೀಳಿಗೆ ? ಸಚಿವ ಸಾಹೇಬರ ಕೃಪೆ ಇಂದಿನ ಪೀಳಿಗೆ ? ಯಾರದೋ ಕಾಲ್ಹಿಡಿದು ಅಧಿಕ ಲಂಚಕೊಟ್ಟು ಸರ್ಕಾರಿ ಕೆಲಸವೊಂದು ಸಿಕ್ಕರೆ ಸಾಕು, ಮಿಕ್ಕ ದುಡಿಮೆಯನು ಕೆಲಸವೆ ಕಲಿಸುವುದು?

ತಮಾಷೆಯ ಅನಿಸಿಕೆ ?

ಐದು ವರ್ಷ ಸರ್ವೀಸ್ ಮಾಡುವ ಸರ್ಕಾರಿ ನೌಕರ ಲಕ್ಷಾಂತರ ಕೋಟ್ಯಂತರ ಹಣವನ್ನು ಮಾಡುವ ? ಭಾರತ ರಾಷ್ಟ್ರದ ಕಾನೂನನ್ನು ಕಾಲಕ್ಕೆ ತಕ್ಕಂತೆ ಬದಲಾಯಿಸೀ, ಭಾರತ ರಾಷ್ಟ್ರದ ಪ್ರಜಾಸತ್ತೆಗೆ ಅವರವರ ವಯಸ್ಸು, ವಿದ್ಯೆಗೆ ತಕ್ಕಂತೆ ಸರ್ಕಾರಿಕೆಲಸ ಹತ್ತು ವರ್ಷಗಳಿಗೆ ಸೀಮಿತಗೊಳಿಸಿ, ಪ್ರತಿಯೊಬ್ಬ ಪ್ರಜೆಗೆ ಸರ್ಕಾರಿ ಕೆಲಸವು ಸೀಮಿತವಾದರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಹತ್ತು ವರ್ಷಗಳ ಅವಧಿಯಲ್ಲಿ ಸಂಬಳ-ಗಿಂಬಳವಲ್ಲದೇ ಭ್ರಷ್ಟಾಚಾರದ ಹಣ ಕೋಟಿ ಕೋಟಿ ಸಂಪಾದಿಸಿದರೇ ಪ್ರಜೆಗಳೆಲ್ಲರೂ ಸೌಖ್ಯವಲ್ಲವೇ ? ಈಗಿನ ಹೊಲಸನ್ನು ತಿದ್ದುವ ಸಾಮರ್ಥ್ಯ, ರಾಜ್ಯ ಸರ್ಕಾರಕು, ಕೇಂದ್ರ ಸರ್ಕಾರಕು ಸದ್ಯಕ್ಕಂತೂ ಸಾಧ್ಯವಿಲ್ಲ. ನನ್ನ ಸಲಹೆಯನು ಲೋಕಸಭೆಯಲ್ಲಿ ಅನುಮೋದಿಸಿದರೆ ಪ್ರಜೆಗಳೆಲ್ಲರೂ ಸುಖಿಗಳಲ್ಲವೇ ? ಭಾರತ ರಾಷ್ಟ್ರವು ರಾಮರಾಜ್ಯವೇ ಆಗದಿದ್ದರೂ, ವಾಮರಾಜ್ಯವಾಗಿ ಸುಖ ಸಂತೋಷದಿ ಮೆರೆವರಲ್ಲವೇ ? ನನ್ನಯ ಸಲಹೆ ಒಂದು ತಮಾಷೆ ?

ಧರ್ಮಾ, ನ್ಯಾಯಾ, ಸತ್ಯ, ನೀತಿಗಳ ಆಧಾರ ಸ್ತಂಭವೆ ಭಾರತರಾಷ್ಟ್ರ ! ರಾಜ್ಯಾಡಳಿತದ ಪಕ್ಷ ಪ್ರತಿಪಕ್ಷಗಳ ಭೇದ ಮರೆತು, ರಾಷ್ಟ್ರಹಿತವನ್ನು ಗಮನಿಸುವುದೇ ಪ್ರತಿನಿಧಿ ಕರ್ತವ್ಯ. ದಾಕ್ಷಿಣ್ಯ ಕೂಡದು, ಕಾನೂನು ಕಾನೂನೇ ? ನ್ಯಾಯ ನ್ಯಾಯವೇ ? ಅನ್ಯಾಯ ಮಾಡಿದ ಪ್ರತಿನಿಧಿಯಾಗಲೀ, ಸಚಿವನಾಗಲೀ ವಿವಿಧ ಖಾತೆಯ ಉದ್ಯೋಗಿಯಾಗಲೀ ಅಪರಾಧ ಮಾಡಿದರೆ ಅವನಿಗೆ ರಕ್ಷಣೆ ಆಡಳಿತ ಪಕ್ಷಕ್ಕೆ ಕಪ್ಪು ಚುಕ್ಕಿ ? 'ವ್ಯಕ್ತಿಗಿಂತ ಪಕ್ಷ ಮುಖ್ಯ' ಎಂಬುವ ಧ್ಯೇಯವ ಪ್ರತಿಪಾದಿಸಿದರೆ, ವ್ಯಕ್ತಿಯ ನಡವಳಿಕೆ, ಪಕ್ಷದ ಮೇಲೆ ಎಂತಹ ಪರಿಣಾಮ ಬೀರುವುದೆಂಬ ಸಂಪೂರ್ಣ ಅರಿವು ಸರ್ಕಾರಕ್ಕಿದ್ದರೆ, ವ್ಯಕ್ತಿ ರಕ್ಷಣೆಗೆ ಗಮನಹರಿಸದೆ, ತತ್ವರಕ್ಷಣೆಗೆ ಗಮನ ಹರಿಸಿದರೆ ರಾಷ್ಟ್ರ ಉಳಿದೀತು ? ಸ್ವತಂತ್ರ ಬಂದ ಎರಡು ದಶ ವರ್ಷ ತತ್ವ ನಿಷ್ಠೆಯ ಸರ್ಕಾರ ಕಂಡೆವು. ಅದುವೆ ಸತ್ಯವಾದ ಪ್ರಜಾಸರ್ಕಾರ. ಇಲ್ಲವೆ ಅದುವೇ ರಾಮರಾಜ್ಯ? ನಾಲ್ಕು ದಶಕಗಳಿಂದ ಕಾಣುತ್ತಿರುವುದು ಧರ್ಮಾ, ಸತ್ಯಾ, ನ್ಯಾಯ, ನೀತಿಗಳ ಗಮನವಿಲ್ಲದಾ ರಾವಣ ರಾಜ್ಯ? ಕೇವಲ ಗಾದಿಗಾಗಿ ಅಂಟಿಕೊಂಡು, ಕ್ರಿಮಿನಲ್ ಹಿನ್ನೆಲೆಯ ರಾಜಕೀಯ ಪುಡಾರಿಗಳ ಸಂಗವ ಬಯಸಿ ಆಡಳಿತ ಸೂತ್ರವನು ಅವರಾಜ್ಞೆಯಂತೆ ನಡೆಸುವಂತಾದರೆ, ರಾಷ್ಟ್ರದ ಉನ್ನತಿ ಹೇಗೆ ಸಾಧ್ಯಾ? ಪ್ರಜಾ ಸರ್ಕಾರದ ಸೂತ್ರವೇನು? ಶ್ರೀ ಸಾಮಾನ್ಯನ ಶಾಶ್ವತ ದೇಳಿಗೆ; ಭಾರತರಾಷ್ಟ್ರದಿ ನಡೆಯುತಿಹುದೇನು ? ಬಲ್ಲಿದನಾದವ ಇನ್ನೂ ಬಲ್ಲಿದ, ಬಡವನಾದವನು ಅತ್ಯಂತ ಬಡವ; ಪಾಕೀಸ್ತಾನಕೂ ಭಾರತರಾಷ್ಟ್ರಕೂ ವ್ಯತ್ಯಾಸವೇನು ? ಸರ್ವಾಧಿಕಾರದಿಂದ ರಾಷ್ಟ್ರದ ಸುಖವನು ಮೂಲೆಗೊತ್ತಿದರು ಪಾಕೀಸ್ತಾನದ ಮಿಲಿಟರಿ ಸಾರ್ವಭೌಮರು ? ಪ್ರಜಾಸರ್ಕಾರವ ನಡೆಸುವ ಭಾರತ, ಸಾಧಿಸಿದುದೇನು ? ಪ್ರಜಾನಿಯಂತ್ರಣ ಮೊದಲೇ ಇಲ್ಲ? ನಿರುದ್ಯೋಗವು ಶಾಶ್ವತವಾಗಿದೆ? ವಿದ್ಯಾಭ್ಯಾಸವು ಕನವರಿಕೆಯಾಗಿದೆ? ಜಾಗತೀಕರಣವು ಮನೆ ಮಾತಾಗಿದೆ ? ಧರ್ಮ, ಸತ್ಯಗಳು, ನ್ಯಾಯ, ನೀತಿಗಳು ಪುಸ್ತಕದ ಪುರಾಣ ? ಸಮತಾವಾದದ ಸೋಗಿನಿಂದ ಗಂಡು ಹೆಣ್ಣುಗಳಲಿ ಸಾಮ್ಯ ದೂರಾಗಿದೆ ?

Sri Vidyabharathi Book Centre, Sringeri

 CC-O. In Public Domain. Digitized by eGangotri

ಹಿರಿಯ ನಾಗರೀಕರು ಮನೆಗೆ ಭಾರವು ? ದಂಪತಿಗಳೀರ್ವರು ಉದ್ಯೋಗಕ್ಕೆ ಹೋಗುವರು, ಹಿರಿಯರಿಗಲ್ಲಿ ಪ್ರಾಧಾನ್ಯವಿಲ್ಲದೆ, ಮಕ್ಕಳು ಮರಿಗಳು ದಾರಿ ತಪ್ಪುವರು ? ಹಣ ಸಂಪಾದನೆ, ಭೋಗವೈಭವವು ಜೀವನದ ಗುರಿಯಾಗಿ ಸಂಸಾರದಲ್ಲಿ ನೆಮ್ಮದಿಯೆಂಬುದು ಅತಿದೂರವಾಗಿದೆ ? ದುರಾಶೆ ಜಾಸ್ತಿಯಾಗಿ, ದುಶ್ಚಟಗಳೂ ಮಿತಿ ಮೀರಿ ಬೆಳೆದಿವೆ. ಇಪ್ಪತ್ನಾಲ್ಕು ಗಂಟೆ ದುಡಿಯುವ ಜೀವಕೆ - ದುರಾಸೆಯೆಂಬುದು ರಕ್ತಗತವಾಗಿ - ಆರೋಗ್ಯವೆಂಬುದು ದೂರ ಸಾಗುತ್ತಿದೆ. ಸ್ಥೂಲದೇಹ - ಕೊಲೆಸ್ಟರಾಲ್, ಬಿ.ಪಿ. ಮಧುಮೇಹ - ಕಾಣದೆ ಬರುತಿದೆ. 'ಡಯಾಲಿಸಿಸ್' ಖಾಯಿಲೆ ವಿಶೇಷ ಹರಡುತಿದೆ. ಡ್ರಗ್ಸ್ ಸೇವನೆಯಂತೂ ತರುಣ-ತರುಣಿಯರಲಿ ಸಾಂಕ್ರಾಮಿಕವಾಗಿದೆ. ಲೈಂಗಿಕ ದೃಷ್ಟಿಯೆ 'ಏಡ್ಸ್' ಖಾಯಿಲೆಗೆ ನಾಂದಿಯಾಗುತ್ತಿದೆ. ಕುಡಿತ, ಕುಣಿತಗಳು, ಬೀಡಿ, ಸಿಗರೇಟ್ ಸೇವನೆ, ಜರ್ದಾ-ತಂಬಾಕು ಅಮಿತವಾಗುತ್ತಿವೆ. ಗೊತ್ತಾಗದ ಖಾಯಿಲೆ ಕಾಣದೆ ಬರುತಿದೆ. ಮದ್ದುಗಳ ಸಂಖ್ಯೆ ಲೆಕ್ಕಕ್ಕೆ ಸಿಗದೇ, ನಕಲಿ ಮದ್ದುಗಳು ಪ್ರಚಾರವಾಗಿ, ಜನತೆಯ ಖಾಯಿಲೆ ಉಲ್ಬಣವಾಗುತಿದೆ. ಹಳ್ಳಿಯಿಂದ, ದಿಲ್ಲಿಯವರೆಗೂ ರೋಗಿಗಳ ಸಂಖ್ಯೆ ಅಮಿತವಾಗುತಲಿದ್ದು ಆಸ್ಪತ್ರೆಗಳು ನರಕವಾಗುತಲಿವೆ. ಜನಸಂಖ್ಯೆ ಬಿಟ್ಟರೆ ಯಾವ ಕ್ಷೇತ್ರದಲಿ ಸರ್ಕಾರಿ ಸಾಧನೆ ನೂರಕ್ಕೆ ನೂರೆಂದು ಕೊಚ್ಚಿಕೊಳ್ಳಲು ಅವಕಾಶವೇ ಇಲ್ಲ?

ಅರವತ್ತು ವರ್ಷದಲಿ ಪದಾರ್ಥದ ಬೆಲೆಗಳು ಏರಿದಷ್ಟೂ, ವ್ಯವಹಾರದ ಬೆಲೆಯೂ ಏರುತ್ತ ಸಾಗಿದೆ. ಉದ್ಯೋಗ ದೊರೆತವರ ವ್ಯವಹಾರ ಇಂತೂ ? ಉದ್ಯೋಗವಿಲ್ಲದ ಶ್ರೀ ಸಾಮಾನ್ಯನ, ಮಧ್ಯಮವರ್ಗದವನ ನಿರುದ್ಯೋಗಿಯಾ ಬದುಕೆಂತೂ ?

ವರ್ಷಕು ವರ್ಷಕು ಬೆಲೆಯೇರುತ್ತಿದೆ ? ಅರವತ್ತು ವರ್ಷಗಳ ಹಿಂದಿನ ಸ್ಥಿತಿಯೇನು ? ಇಂದಿನ ಬದುಕೇನು ? ಮುರುಕಲು ಮನೆಯೋ, ಹರಕಲು ಬಟ್ಟೆಯೋ ವಾಸಕೆ ಮನೆಯಿತ್ತು, ತಿನ್ನಲು ಅನ್ನವಿತ್ತು? ಅವಿಭಕ್ತ ಕುಟುಂಬದ ವಾಸ ಚೆನ್ನಾಗಿತ್ತು? ವಿಜ್ಞಾನ ಮುಂದರಿಯಿತು - ವಿದ್ಯೆ ಮುಂದರಿಯಿತು ? ಹಳ್ಳಿಯಿಂದ ದಿಳ್ಳಿಯವರೆವಿಗೂ ವಿದ್ಯೆ ಮುಂದರಿಯಿತು ? ವ್ಯವಸಾಯ ಬಿಟ್ಟು ವಿದ್ಯೆಕಲಿತರು ಹಳ್ಳಿಯ ಯುವಕರು ? ವಿದ್ಯೆ ಬಂದ ಮೇಲೆ ಉದ್ಯೋಗ ಕ್ಕೊಡಿರಟರು? ವ್ಯವಸಾಯ ಮಾಡ್ವರಿಲ್ಲ. ಆಹಾರ ಬೆಳೆವರಿಲ್ಲ? ಜನಸಂಖ್ಯೆ ಮಾತ್ರ ನೂರು ಕೋಟಿ ಮೀರಿದೆ ? ರಕ್ತ ಬೀಜನಾ ವಂಶದವರು ನಾವು ? ಸ್ವತಂತ್ರ ಬಂದಿತು. ರಾಜರ ಸರ್ಕಾರ ಮಾಯವಾಯಿತು ? ಅಂದು ದೇಶಕೆ ರಾಜನೊಬ್ಬನಿದ್ದ. ಧರ್ಮ ಮಾರ್ಗದಲಿ ನಡೆಯುತಲಿದ್ದ? ಪ್ರಧಾನ ಮಂತ್ರಿ, ಸೈನ್ಯಾಧಿ ಪತಿ, ವಿವಿಧ ಇಲಾಖೆಗೆ ಒಬ್ಬೊಬ್ಬ ಮಂತ್ರಿ ? ಪ್ರಜಾಚಿಂತನೆ ಮಹಾರಾಜರದು ? ದೇಶ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಂತನೆ ಪ್ರಧಾನಮಂತ್ರಿಗಳದು, ರಾಜ್ಯರಕ್ಷಣೆ ಸೇನಾಧಿಪತಿಗಳದು ? ಕಂದಾಯ ವಸೂಲಿ ಸುಬೇದಾರ ಹಾಗೂ ಕೊತ್ವಾಲರದು ? ಕ್ಷಾಮ ಡಾಮರ ಆಹಾರ ಸರಬರಾಜು ಮಹಾರಾಜರ ಜವಾಬ್ದಾರಿಯು ? ಕಳ್ಳದಾಸ್ತಾನಿಗೆ ಅವಕಾಶವೇ ಇಲ್ಲ? ಪ್ರಜಾರೋಗ್ಯವೂ, ವಿದ್ಯಾಭ್ಯಾಸವೂ ಪ್ರಧಾನ ಮಂತ್ರಿಗಳ ಜವಾಬ್ದಾರಿಯು ? ಸ್ವತಂತ್ರ ಬಂದಿತು. ಪ್ರಜಾರಾಜ್ಯ ಬಂದಿತು. ಜಿಲ್ಲೆ ಜಿಲ್ಲೆಗೆ ಸಚಿವರಾದರು ? ನಗರ ಸಭೆಗಳಿಗೆ ಕಾರ್ಪೋರೇಟರ್ ಆದರು? ಪಂಚಾಯಿತಿಗೆ ಸದಸ್ಯರಾದರು ? ಎಲ್ಲವು ಚುನಾವಣೆ – ರಾಜಕೀಯಧಾಳಿ? ರಾಜರ ರಾಜ್ಯದಿ ಹಣವೊಂದು ಕಡೆಸೇರಿ ದೇಶಕ್ಕೆಲ್ಲಾ ವಿನಿಯೋಗವಾಗುತಿತ್ತು ? ಈಗ ಹಾಗಲ್ಲ. ರಾಜಕೀಯದರ್ಬಾರಿನಲಿ ಹಳ್ಳಿಯಿಂದ ನಗರದವರೆಗೆ ಸಹಸ್ರಾರು ರಾಜರಾದರು ? ಕೋಟಿ ಕೋಟಿ ಹಣ ವ್ಯವಹಾರದಲಿ ಲಕ್ಷಾಂತರರೂ ಲೂಟಿ ಹೊಡೆದರು. "ದೇಶಸೇವೆಯೇ ಈಶಸೇವೆ" ಯೆಂದು ಡಂಗುರ ಸಾರಿದರು. ಮಾಡಿದುದೇನು ಭ್ರಷ್ಟಾಚಾರ ? ತೃಪ್ತಿಯೆಂಬ ಪದ ಭಾಷಣಕೆ ಮೀಸಲು ? ಎಲ್ಲವೂ ಮೋಸ, ದ್ರೋಹ, ಕುತಂತ್ರ ? ದೇಶ ಸುಖದ ಹಣ ಸ್ವಂತಕೆ ಸೇರಿತು ? ಗೃಹ ಭಂಡಾರವು ಭರ್ತಿಯಾಯಿತು ? ವಾಸಕೆ ಕೊರತೆಯಿಲ್ಲ – ದೊಡ್ಡ ಬಂಗಲೆ ? ನೂರಾರು ಎಕರೆ ತೋಟಗದ್ದೆಗಳು. ಲೆಕ್ಕವಿಲ್ಲದಷ್ಟು ಸೈಟು ಬಂಗ್ಲೆಗಳು ? ಕಪ್ಪು ಹಣ ವಿಡಲು ಜಾಗವೇ ಇಲ್ಲ. ಧರ್ಮ ಮಾಡಲು ಮನಸೇ ಇಲ್ಲ? ಅನ್ಯಾಯದ ಹಣ ? ಇಪ್ಪತ್ನಾಲ್ಕು ಗಂಟೆ ಕುಡಿತ ಕುಣಿತಗಳು – ವಿಲಾಸ ಜೀವನ ? ಯಾವುದೋ ಪಕ್ಷದಿಂದ ಗೆಲುವು ಗ್ಯಾರಂಟಿ ? ಪ್ರತಿ ಐದು ವರ್ಷ ಪದವಿ ಗ್ಯಾರಂಟಿ ? ಸರ್ಕಾರಿ ಉದ್ಯೋಗಿಗೆ ಮೂವತ್ತು ವರ್ಷ ಸರ್ವೀಸ್ ಗ್ಯಾರಂಟಿ ? ಭ್ರಷ್ಟಾಚಾರದ ಹಣ ಇಡಲು ಜಾಗವಿಲ್ಲ, ಲೋಕಾಯುಕ್ತರಿಗೆ ಸಿಕ್ಕಾಗ ಮಾತ್ರ "ಮುಸುಡಿ ಮೂಲಂಗಿ" ? ಅಲ್ಲಿವರೆವಿಗೆ ರಾಜಕೀಯ ಧೈರ್ಯ ? ಮೊಂಡು ಧೈರ್ಯ ? ಸಸ್ಪೆಂಡ್ ಆದರೂ ಕೋರ್ಟ್ ಹಗರಣ ? ಈಗಿನ ಕಾನೂನಲ್ಲಿ ವರ್ಷಗಟ್ಟಲೇ ತಳ್ಳಬಹುದು? ಲೋಕಾಯುಕ್ತರು ರಾಜಕೀಯದವರನ್ನು ಮಾತಾಡಿಸುವಂತಿಲ್ಲ? ಕೇಂದ್ರ ಸರ್ಕಾರದ ಪ್ರಭಾವದಿಂದ ರಾಜಕೀಯ ವ್ಯಕ್ತಿಯ ಭ್ರಷ್ಟಾಚಾರ ಮೊಕದ್ದಮೆ ತಣ್ಣಗಾಗುವುದು ? ಇದುವೇ ನಮ್ಮಯ ಪ್ರಜಾಪ್ರಭುತ್ವ ? ಇದುವೇ ನಮ್ಮಯ ಕಾನೂನು ಕಟ್ಟಳೆ ? ಭ್ರಷ್ಟಾಚಾರಿಯಾದ ಅಧಿಕಾರಿಯ ಹಣ, ನೂರು ಕೋಟಿಯಾದರೆ ರಾಜಕೀಯ ಪ್ರತಿನಿಧಿಗಳ ಹಣ ಸಹಸ್ರಾರು ಕೋಟಿ ಇರಲೇ ಬೇಕು. ಓರ್ವ ರಾಜನಲಿ ಬೊಕ್ಕಸ ತುಂಬಿದ್ದರೂ ದಾನ ಧರ್ಮಗಳ ಮಾಡುತಲಿದ್ದ. ಯಜ್ಞ ಯಾಗಾದಿ ನಡೆಸುತಲಿದ್ದ ಜನರ ರಕ್ಷಣೆಗಾಗಿ ಇಡೀ ಬೊಕ್ಕಸವ ಸಮರ್ಪಿಸುತ್ತಿದ್ದ. ಚತುರಂಗ ಬಲವ ರಾಜ್ಯ ರಕ್ಷಣೆಗೆ ಅನುವಾಗಿಡುತಿದ್ದ ರಾಜಕೀಯ [illegible] ಸಿಬ್ಬಂದಿಯ ಬದುಕು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಠೋರ ? ಸೂಕ್ತ ಶಸ್ತ್ರಾಸ್ತ್ರಗಳ ಒದಗಿಸುವಂತಿಲ್ಲ? ಅಪಾಯಿಂಟ್‌ಮೆಂಟ್, ಪ್ರಮೋಷನ್ ಎಲ್ಲದರಲ್ಲಿಯೂ ರಾಜಕೀಯ ? ವರ್ಣ ದ್ವೇಷ - ಭಾಷಾದ್ವೇಷ - ಕೋಮುದ್ವೇಷ - ಮತೀಯ ದ್ವೇಷ ರಾಷ್ಟ್ರರಕ್ಷಣೆಗು ರಾಜಕೀಯವೇ ?

ಯಾವ ಸರ್ಕಾರ ಬಂದರೇನು ? ಯಾವ ಪಕ್ಷವು ಆಳಿದರೇನು ? ಅಕ್ಕಿ, ರಾಗಿ, ಗೋಧಿ - ಜೋಳ ಬೇಳೆಗಳು ಊಹಿಸಲಾರದಷ್ಟು ಗಗನಕ್ಕೇರಿವೆ. ಏರುತ್ತಲೆ ಇವೆ ? ಹಣ್ಣು, ತರಕಾರಿ ತಿನ್ನಲು ಸಾಧ್ಯವೇ ? ಬೇಳೆಗಳಂತೂ ಇಲ್ಲದಿರೆ ಊಟವಿಲ್ಲ. ಅವುಗಳ ಬೆಲೆಯು ಆಕಾಶದೆತ್ತರ ? ಸಕ್ಕರೆ, ಬೆಲ್ಲಗಳು ಬಡವರಿಗಲ್ಲವಲ್ಲ? ತೈಲ-ತುಪ್ಪಗಳು ಮಂತ್ರ ಪುಷ್ಪಗಳು. ಹೋಟೇಲಿನಲ್ಲಿ ಇಡ್ಲಿ, ಸಾಂಬಾರ್, ಉಪ್ಪಿಟ್ಟು, ಪೂರಿಗಳು - ಚಪಾತಿ, ಭಾತು, ವಡೆ, ಬೋಂಡಾಗಳು - ಬೋರ್ಡ್ ನೋಡಿದರೇ ಕಂಪನ ನಮಗೆ ? ಹಾಲೊಂದು ಏರಿದರೆ ಕಾಫಿ, ಟೀ, ಕುಡಿಯುವಂತಿಲ್ಲ? ಪಶುವಿನ ಆಹಾರ, ಹುಲ್ಲು ಸೊಪ್ಪುಗಳು ಹಿಂಡಿ ಬೂಸಗಳು - ಚಿಲ್ಲರೆಬೆಲೆಗೆ ದೊರೆಯುವಂತಿಲ್ಲ. ಕೇಂದ್ರ ಸರ್ಕಾರದ 'ಅಭಯಹಸ್ತ' ಆಹಾರದಾಸ್ತಾನಿಗೆ ಕೊರತೆಯಿಲ್ಲ. ಸಕ್ಕರೆ, ಬೆಲ್ಲಗಳು ಯಥೇಚ್ಛ ದೊರೆವುವು ? ಬೆಲೆಯ ನಿಯಂತ್ರಣ ರೂಪಿಸುವವರ್‍ಯಾರು ? ಅಂದಂದಿನಾ ಆಹಾರ ಧಾನ್ಯಗಳ, ತರಕಾರಿ - ಹಣ್ಣುಗಳ ಒಟ್ಟಾರೆ ಹಾಗೂ ಚಿಲ್ಲರೆ ಬೆಲೆಯನು ವರ್ತಮಾನ ಪತ್ರಿಕೆಲಿ ವೀಕ್ಷಿಸುತಿದ್ದರೆ ಎದೆ ಝುಲ್ಲೆನ್ನುವುದು. ? ಮಲ್ಟಿ ನ್ಯಾಷನಲ್ ಕಂಪೆನಿಗಳು ಭಾರತದೇಶದಿ ಮಾಡುತ್ತಿರುವ ಅನ್ಯಾಯವನ್ನು ಗಮನಿಸುವವರ್‍ಯಾರು ? ಅವರಲಿ ಹಣವಿದೆ. ಎಷ್ಟು ಸಹಸ್ರ ಟನ್ ಆಹಾರ ಬೆಳೆದರೂ, ಮಧ್ಯವರ್ತಿಗಳ ಸಹಕಾರದಿಂದ ರೈತರ ದರ್ಶಿಸಿ, ಅತಿ ಹೆಚ್ಚು ಬೆಲೆಯನು ನಿಷ್ಕರ್ಷಿಸೀ, ಹಣವನು ತೆತ್ತೂ ಲಾರಿಗಟ್ಟಲೆ ಆಹಾರವನ್ನು, ದಾಸ್ತಾನು ಮಾಡುವರು. ಕೊಂಡ ಬೆಲೆಗಿಂತ ಎರಡುಮೂರರಷ್ಟು ಬೆಲೆ ನಿಗದಿಮಾಡಿ, ಪರಿಶುದ್ಧ ಪದಾರ್ಥ ಚೀಟಿಯ ಅಂಟಿಸಿ - ಅತಿ ಹೆಚ್ಚು ಬೆಲೆಗೆ ಅದನು ಮಾರುತಾ - ಅತ್ಯಂತ ಲಾಭವ ಮಾಡುವರವರು ? ಸರ್ಕಾರ ಕೂಡ ರೈತನಿಗೆ ಲಾಭವೆಂದು ಈ ವ್ಯವಹಾರದಲಿ - ತಲೆ ತೂರಿಸುವುದಿಲ್ಲ? ರಾಜ್ಯದಿಂದ ರಾಜ್ಯಕೆ. ಆಮದು ರಫ್ತಿಗೆ ರಾಜ್ಯ ಸರ್ಕಾರಗಳು ನಿರ್ಬಂಧ ವಿಧಿಸಿ, ಅದೂ ಒಂದು ಕಾರಣ, ಆಹಾರದ ಅಭಾವಕೆ, ಬೆಲೆ ಪೈಪೋಟಿಗೆ ?

ಹಿಂದಿನ ಪೀಳಿಗೆ ಸ್ವಾರ್ಥರಹಿತರು, ದಾನಧರ್ಮಗಳ ಭಾವನೆ ಇದ್ದವರು ? ಕೊಟ್ಟು ತಿನ್ನುವುದು ಅವರ ಸ್ವಭಾವ ? ಎಲ್ಲಾ ವಿಷಯದಲಿ ತೃಪ್ತರಾಗಿದ್ದರು ? ರೈತನಾಗಲೀ, ವ್ಯಾಪಾರಿಯಾಗಲೀ, ಘನಸರ್ಕಾರದ ನೌಕರನಾಗಲಿ - ದುರಾಶೆ ಇರಲಿಲ್ಲ. "ಸರ್ವೇ ಜನಾಃ ಸುಖಿನೋ ಭವಂತು" ಭಾವನೆ ಇದ್ದಿತು. ನಾವು ನಮ್ಮವರು ಅಭಿಮಾನವಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂದಿನ ಪೀಳಿಗೆಗೆ ಎಲ್ಲವೂ ಶೂನ್ಯ ? ಎಷ್ಟು ಬಂದರೂ ಅತೃಪ್ತರವರು. ದಾನ ಧರ್ಮಗಳ ಮಾಡಲಾರರು ಕೊಟ್ಟರೆ ಸ್ವೀಕರಿಸುವರು ? ಸ್ವಜಾತಿ ಪ್ರೇಮ-ಸ್ವಜನ ಪಕ್ಷಪಾತ ತುಂಬಿಕೊಂಡಿದೆ? ಲಾಭವಿದ್ದರೆ ನೆಂಟರು ಬರಲಿ, ಉಂಡು ಹೋಗಲಿ ? ಲಾಭವಿಲ್ಲದಿರೆ ಅವರು ಬಾರದಿರೆ, ನಷ್ಟವೂ ಇಲ್ಲ - ಇಂದಿನ ಪೀಳಿಗೆಗೆ ? ಹಸುವನು ಸಾಕುವುದೂ ಗೋಪೂಜೆಗಾಗಲ್ಲ - ಲಾಭಕ್ಕಾಗಿ ? ಖರ್ಚಿಗಿಂತ ಹೆಚ್ಚು ಹಾಲು ಕೊಟ್ಟರೆ ಅದಕೆ ಆರೈಕೆ ಇಲ್ಲದಿದ್ದರೆ ವಧಾಸ್ಥಾನ ? ಪಾಪ-ಪುಣ್ಯಗಳ ನಂಬಿಕೆಯಿಲ್ಲ? ವ್ಯವಸಾಯವೆಲ್ಲಾ ಯಂತ್ರಗಳಿಂದ. ಎತ್ತು-ಎಮ್ಮೆಗೆ ಕೆಲಸವೇ ಇಲ್ಲ. ಹಾಲು ಕೊಡುವ ಹಸು ಪೂಜಾರ್ಹಳು ? ಹಾಲಿಲ್ಲದ್ದಿರೆ ವಧಾರ್ಹಳು ? ಕುರಿ, ಕೋಳಿ, ಮೇಕೆ, ಹಂದಿ ಲಾಭಕ್ಕಾಗಿ ಸಾಕುವುದು ? ಹೊಟ್ಟೆಗಾಗಿ ಸಾಕುವುದು ? ಉತ್ತರ-ದಕ್ಷಿಣ, ಪೂರ್ವ-ಪಶ್ಚಿಮ ಹಳ್ಳಿ ಊರುಗಳ ಸಂಪರ್ಕಕ್ಕಾಗಿ ವಿಶಾಲ ರಸ್ತೆಗಳು. ಇದರಿಂದಾದ ಅನಾಹುತವೆಂದರೆ ವ್ಯವಸಾಯ ಮಾಡುವ ಜಮೀನುಗಳೆಲ್ಲಾ ರಿಯಲ್ ಎಸ್ಟೇಟ್ ದಂಧೆಗೆ ಒಳಗಾದುವು? ಸಾವಿರ ಸಾವಿರಕೆ ದೊರೆಯುತಿದ್ದಂಥ ಹೊಲಗದ್ದೆ ತೋಟಗಳು, ಲಕ್ಷ ಕೋಟಿಗಳ ಗೆರೆಯ ದಾಟಿದವು ? ಹಳ್ಳಿ ಊರಾಯಿತು, ಊರು ಪಟ್ಟಣವಾಯ್ತು, ಪಟ್ಟಣ ನಗರವಾಯ್ತು. ಕಾರ್ಖಾನೆ ಇಮ್ಮಡಿಯಾದುವು. ಸಿಮೆಂಟು, ಕಬ್ಬಿಣ, ಕಲ್ಲು, ಮರಳುಗಳು ನಿಲುಕಲಾಗದ ಬೆಲೆಯ ಕಂಡವು. ತೇಗ, ಬೀಟೆ, ಮತ್ತಿ - ಹೊನ್ನೆ, ಹಲಸು, ಮಾವು - ಮರದ ದಿಮ್ಮಿಗಳು ಗಗನ ಚುಂಬಿತ ಬೆಲೆ ? ಊರು ಪಟ್ಟಣದಲಿ ಅಪಾರ್ಟ್‌ಮೆಂಟ್ ಹಾಗೂ ಸಂಕೀರ್ಣ ಭವನ ತಲೆಯೆತ್ತಿ ನಿಂತವು ಬಡವ ಬಡವನೆಂಬ ಹಳ್ಳಿಯ ರೈತ ಕಾಸು ಸಂಪಾದನೆ ಚೆನ್ನಾಗಿ ಕಲಿತ. ಹಣ ಸೇರಿದಂತೆ ಕುಡಿತ ಜೂಜುಗಳು ಗ್ರಾಮ ಗ್ರಾಮಗಳಲ್ಲಿ, ವಿಶೇಷವಾದುವು. ಬೀಡಿ, ಸಿಗರೇಟ್, ಜರ್ದಾ, ಹೆಂಡಾ ಕೆಳಗಿನವರ್ಗಕೆ ಮೀಸಲಾದರೆ, ಮಧ್ಯಮವರ್ಗಕೆ ಬೀರು, ವಿಸ್ಕಿ, ರಮ್ಮು, ವೈನುಗಳು ಮೋಜಿಗೆ ಬಂದುವು. ಇಸ್ಪೀಟಿನಾಟವಂತೂ ಹಳ್ಳಿಗರಿಗೆ ಹೊತ್ತುಗಳೆಯಲೂ, ಹಣಕಾಸು ಮಾಡಲೂ, ಪಾಪರ್ ಆಗಲೂ ಮೋಜಿನ ಆಟ.

ಸಿಟಿಗಳಲಂತೂ ರೇಸ್‌ಕೋರ್ಸ್ ಹುಚ್ಚು, ಕುದುರೆ ಜೂಜು ಸಾಮಾನ್ಯರ ಮಧ್ಯಮರ, ಬಲ್ಲಿದರ ಆಟ. ಒಬ್ಬ ವ್ಯಕ್ತಿಯನು ದಿವಾಳಿಯಾಗಿಸಲು ಕುಡಿತ ಜೂಜುಗಳು, ಅತಿಮುಖ್ಯವಲ್ಲವೇ ? ಅರ್ಧ ಲೋಟ ವೈನನ್ನು ಕುಡಿಸಿ ಒಬ್ಬ ವ್ಯಕ್ತಿಯನು ಕುದುರೆ ಜೂಜಿಗೆ ಕರೆದುಕೊಂಡು ಹೋದರೆ ಅಷ್ಟೇ ಸಾಕು ಆ ವ್ಯಕ್ತಿಯನು ದಿವಾಳಿಯಾಗಿಸಲು ಅದುವೇ ನಾಂದಿ. ಸಿಗರೇಟ್ ಬೀಡಿಗಳು ಕ್ಯಾನ್ಸರಿಗೆ ದಾರಿಯೆಂದು ಪ್ರಚಾರವಿದ್ದರೂ, ಇದರ ಚಟದವರು ಇತರ ದೇಶಗಳಿಗೆ ಹೋಲಿಸಿನೋಡಿದರೆ ಭಾರತ ರಾಷ್ಟ್ರದಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರತಿವರ್ಷವೂ ಏರುತ್ತಿರುವರು. ''ಆರೋಗ್ಯ ನಾಶಕೆ ಕುಡಿತಕಾರಣ'' ವೆಂದು ಪ್ರಚಾರವಿದ್ದರೂ ಕುಡಿತದ ಚಟವು ಭಾರತ ರಾಷ್ಟ್ರದಲಿ ಹತ್ತು ಪಟ್ಟು, ಜಾಸ್ತಿಯಾಗಿಹುದು - ಸಂಖ್ಯಾದಾಖಲೆ. ಸಿಗರೇಟ್, ಬೀಡಿ, ಜರ್ದಾ, ತಂಬಾಕುಗಳು ಹೆಂಡ, ಬೀರು, ವಿಸ್ಕಿ, ಬ್ರಾಂದಿಗಳು, ಎಲ್ಲಕ್ಕಿಂತ ಮೇಲಿನ ಜೂಜಿನ ಸಡಗರ. ಘನಸರ್ಕಾರಕೆ ತೆರಿಗೆಯ ಮೂಲಕ ಅಪಾರ ಲಾಭವೆಂದು ಜಗಜ್ಜನಿತ. ಕುಡಿತ ಜೂಜಿನಾ ಕ್ಲಬ್ಬುಗಳ ಸಂಖ್ಯೆ ರಸ್ತೆ ರಸ್ತೆಯಲಿ, ಹೊಟೇಲ್‌ಗಳಷ್ಟೇ ಬಲವಾಗೀ ಬೆಳೆಯುತ್ತಲಿವೆ. ಶ್ರಮಜೀವಿಗಳಿಗೆ ಕುಡಿತವೆಂಬುದು ಮನಸ್ಸಿಗೆ ಉಲ್ಲಾಸ, ಮೈಗೆ ಹಿತವಂತೆ. ಬೆಳಗಿನಿಂದ ರಾತ್ರಿಯವರೆವಿಗೂ ದುಡಿದು ದುಡಿದೂ ಇನ್ನೂರು ಮುನ್ನೂರು ಸಂಪಾದನೆ ಮಾಡಿ, ಮಿತ್ರರ ಜೊತೆಯಲಿ ಅಷ್ಟೂ ಕುಡಿದರೆ ಮನೆಯವರಗತಿ ? ಸಾಲದುದಕ್ಕೆ ಇಸ್ಪೀಟು, ಸಿಗರೇಟ್, ಜರ್ದಾ ಕಲಿತರೆ, ಜೇಬು ಖಾಲಿಯಾಗಿ ಮಿತ್ರನ ಬಳಿ ಪುನಃ ಸಾಲ. ಆ ಮಿತ್ರನೋ ಒಂದಕ್ಕೆರಡರಷ್ಟು ಬಡ್ಡಿ ವಸೂಲಿ, ತನ್ನ ಕುಡಿತದ ಖರ್ಚು ಇವನ ತಲೆಯಮೇಲೆ ! ತೂಗಾಡಿಕೊಂಡು ಮನೆಗೆ ಬಂದರೆ ಜೇಬು ಖಾಲಿ ! ಹೆಂಡತಿ ಸಂಪಾದನೆ ಸಂಸಾರಕ್ಕಾಗಿ. ಮಕ್ಕಳ ಜೊತೆಗೆ ಈ ಪಾಪಿಯನ್ನು ಅವಳೇ ಸಾಕುವಳು ? ಹೇಗಿದೆ ಕುಡಿತ ? ಜ್ಞಾನ ಬಂದ ಮೇಲೆ ತಪ್ಪಿನ ಅರಿವಾಗಿ, ಇನ್ನು ಮೇಲೆ ಕುಡಿಯುವುದಿಲ್ಲವೆಂದು ಪ್ರಮಾಣ ಮಾಡುವ. ಆದರೇನು? ನಾಯಿ ಬಾಲ ಡೊಂಕು ? ಸರ್ಕಾರಕ್ಕೇ ತಮ್ಮ ತಪ್ಪಿನ ಅರಿವಿದ್ದರೂ ಸಹ, ಖಜಾನೆಗೆ ಬರುವ ಆದಾಯ ಗಮನಿಸಿ ತುಟಿಪಿಟ್ಟಿಕ್ಕೆನ್ನದೆ ಸುಮ್ಮನಾಗುವುದು. ಕಳ್ಳಭಟ್ಟಿಯಿಂದ ಜನರು ಸತ್ತಾಗ ಸಚಿವರ ಪ್ರಲಾಪ, ನಿಲ್ಲದ ಭಾಷಣ, ಹೇಳ ತೀರದು. ರಾಜಕೀಯ ಪ್ರಭುವಿಗೆ - ಎಕ್ಸೈಜ್ ಕಂಟ್ರಾಕ್ಟರ್ ಕೊಡುವ ಕಳ್ಳಗಂಟು ಸಾಮಾನ್ಯವೇ ? ಚುನಾವಣಾ ಸಮಯದಿ ಆತನ ಅನುಕಂಪೆ ಇವರಿಗೆ ಬೇಡವೇ ? ರಾಜಕೀಯ ಪ್ರಭುವಿಗೆ ಎರಡುತರಹ ಲಾಭ. ಜೂಜು ಕುಡಿತದಿಂದ ಬೀಡಿ ಸಿಗರೇಟ್ ಜರ್ದಾದಿಂದ ಖಜಾನೆಗೆ ಬರುವ ಅಮಿತ ಆದಾಯ ಒಂದುಕಡೆಯಾದರೆ, ಚುನಾವಣಾ ಸಮಯದಿ ಎಕ್ಸೈಜ್ ಕಂಟ್ರಾಕ್ಟರ್‌ನ ಬ್ರೀಫ್‌ಕೇಸಿನ ಹಣ ಇನ್ನೊಂದು ಲಾಭವು ? ಕುಡಿತ ಜೂಜುಗಳ ಸಂಪೂರ್ಣ ನಿಲುಗಡೆಗೆ ಪಕ್ಷ ಕೂಡಾ ಒಪ್ಪದು. ಕಂಟ್ರಾಕ್ಟರುಗಳಿಂದ ಟೆಂಡರ್ ಅಪ್ರೂವ್ ಆಗಲು, ಸಚಿವರ ಮೂಲಕ ಪಕ್ಷಕ್ಕೂ ಹಣ ? ಕುಡಿತ ಜೂಜುಗಳ ನಿಲ್ಲಿಸದ ಸರ್ಕಾರ ಭವ್ಯ ಕಟ್ಟಡದ ಆಸ್ಪತ್ರೆ ಕಟ್ಟಿಸುವರು ? ದೇಹದ ಮೇಲೆ ದುಷ್ಪರಿಣಾಮ, ಬುದ್ಧಿಯ ಮೇಲೆ ದುಷ್ಪ ಪರಿಣಾಮ, ಶ್ವಾಸಕೋಶದ ದುಷ್ಪರಿಣಾಮ, ಜಠರ ಕರುಳುಗಳ ದುಷ್ಪರಿಣಾಮ, ಹೃದಯದ ಮೇಲೆ ದುಷ್ಪರಿಣಾಮ, ಲೈಂಗಿಕ ಕ್ರಿಯೆಯ ದುಷ್ಪರಿಣಾಮ, ಕಣ್ಣು, ಮೂಗುಗಳ ದುಷ್ಪರಿಣಾಮ, ಕೈಕಾಲುಗಳ ದುಷ್ಪರಿಣಾಮ, ಹಲವು ತರಹದ [illegible] ಸಮಸ್ತ ಅಂಗಾಂಗಗಳ ಮೇಲೆ

Sri Vidyabharathi Book Centre - Sringeri

CC-O. In Public Domain. Digitized by eGangotri

ದುಷ್ಪರಿಣಾಮ, ತಾರುಣ್ಯದಲೀ ಮೆರೆದನವನು - ಮಧ್ಯವಯಸ್ಸಿಗೆ ಮಹತ್ತರ ಖಾಯಿಲೆ, ಒಂದು ಆಸ್ಪತ್ರೆಯಿಂದ ಇನ್ನೊಂದು ಆಸ್ಪತ್ರೆಗೆ + ಸರ್ಕಾರಿ ಆಸ್ಪತ್ರೆ ನರಕವಾಸವು, ಔಷಧಿ ಇಂಜಕ್ಷನ್ ಕೊಳ್ಳಲು ಹಣವಿಲ್ಲ. ಹಣವಿಲ್ಲದಿದ್ದರೆ ನಾಯಿಗಳನ್ನು ಬಡಿದು ಓಡಿಸುವಂತೆ ಹೊರಗಟ್ಟುವವರು ! ಹೊಟ್ಟೆಗೂ ಇಲ್ಲ, ಔಷಧಿಯಿಲ್ಲ, ಆರೈಕೆಯಿಲ್ಲ ಯಮನ ದರ್ಶನ - ಹಿಂದಿನದ ನೆನೆದು ಸಂಕಟಪಟ್ಟರೆ - ಯಮನು ಕ್ಷಮಿಸುವನೆ ? ಹೆಂಡತಿ ವಿಧವೆ, ಮಕ್ಕಳು ತಬ್ಬಲಿ, ಬೀದಿಗೆ ಬಂದಿತು ಸುಂದರ ಸಂಸಾರ ? ಬಾಲ್ಯ ತಾರುಣ್ಯದಲಿ ಕಲಿತ ಚಟಗಳು ಮಧ್ಯಮ ವಯಸ್ಸಿಗೆ ಹೆಮ್ಮರವಾಗಿ - ಯಜಮಾನನನ್ನು ಮೃತ್ಯು ಸನ್ನಿಧಿಗೆ ಕೊಂಡೊಯ್ಯುವುವು?'' ಹೆಸರಾದಂಥಾ ವ್ಯಕ್ತಿ ಸತ್ತರೆ ಟಿವಿಯಲ್ಲಿ, ಪತ್ರಿಕೆಯಲ್ಲಿ ಗುಣಗಾನ ಹಾಗೂ ಸಂಕ್ಷಿಪ್ತ ಪರಿಚಯ. ಕನಿಷ್ಟ ವರ್ಗದ, ಮಧ್ಯಮವರ್ಗದ ಈ ಕುಡುಕ ಸತ್ತರೆ ಕೇಳುವವರಾರು ? ಹಿಂದೂ ಸಂಸ್ಕೃತಿಯ ಆಧಾರದಂತೆ ಚಿತ್ರಗುಪ್ತನ ದಫ್ತರದಲ್ಲಿ ಇವನ ಗುಣಗಾನ, ಯಮಲೋಕದಲ್ಲಿ ಅವನಿಗೆ ಶಿಕ್ಷೆ, ವರ್ಷಂಪ್ರತಿ ದೊಡ್ಡ ದೊಡ್ಡ ಆಸ್ಪತ್ರೆ ಕಟ್ಟಿದರೇ ವೈದ್ಯವೃತ್ತಿ ಮಾಡುವರ್ಗೆ, ನರ್ಸ್ ಹಾಗೂ ವಾರ್ಡ್ ಬಾಯ್ ವೃತ್ತಿಪರರಿಗೇ ಅತ್ಯಂತ ಲಾಭ, ರೋಗಿಗೆ ಮಾತ್ರಾ ಯಾವ ಲಾಭ ? ದುಶ್ಚಟ ನಿರ್ಮೂಲನೆಗೆ ಕಾನೂನು ತಂದರೆ, ಆಸ್ಪತ್ರೆ ವೈದ್ಯರಿಗೆ ಕೆಲಸವೇ ಇಲ್ಲ. ದುಶ್ಚಟಗಳಿಂದ ಬರುವ ಖಾಯಿಲೆಯೇ ನೂರಕ್ಕೆ ಅರವತ್ತರಿಂದ ಎಪ್ಪತ್ತು ಭಾಗ. ಯಾವ ಸರ್ಕಾರವೂ ಪ್ರಾಮಾಣಿಕವಾಗಿ ದುಶ್ಚಟಗಳನ್ನು ನಿಲ್ಲಿಸಲಾರದು ? ದುಶ್ಚಟ ನಿಲ್ಲಿಸಲು ಕಾನೂನು ಅಸಾಧ್ಯ. ಪ್ರಚಾರದಿಂದಲೆ, ಮಾಧ್ಯಮದಿಂದಲೆ ಅರಿವುಮೂಡಿಸಿ ದುಷ್ಚಟಗಳಿಗೆ ಲಗಾಮು ಹಾಕಿದರೆ, ಆಗಲಾದರೂ ಮಾನವಕೋಟಿ ಎಚ್ಚರಗೊಂಡು ಸಲ್ಲದ ಖಾಯಿಲೆ ತಗ್ಗುವುದಲ್ಲದೆ, ಕನಿಷ್ಟ ಮಧ್ಯಮವರ್ಗದ ಜನತೆಯು ತಮ್ಮ ದುಡಿಮೆಯೂಟ ಸುಖವಾಗಿ ಮಾಡುವರು. ದುಶ್ಚಟ ಸಾಮರ್ಥ್ಯ ಎಷ್ಟು ಹೆಚ್ಚಾಗಿ ಬೆಳೆದಿದೆಯೆಂದರೆ, ಗಂಡಿನೊಡನೆ ಹೆಣ್ಣೂ ಕೂಡ ಸಮಾನವಾಗಿ ದುಷ್ಚಟಗಳಲ್ಲಿ ಭಾಗಿಯಾಗುವಳು. ವಿದ್ಯಾವಂತ ಯುವತಿಗೆ ಒಂದಲ್ಲೊಂದು ದುಶ್ಚಟ ಬರುವುದು. ಸಿಗರೇಟ್, ಜರ್ದಾ ಸಾಮಾನ್ಯವಾದರೆ, ಕುಡಿತ, ಡ್ರಗ್ಸ್‌ಗಳು ಅಸಾಮಾನ್ಯವಾಗಿಹವು. ಕಾಲೇಜ್ ಜೀವನದಿ ಕಲಿತ ಚಟವನ್ನು ಬಿಡಲಾರದಾಕೆ ದುರ್ಮಿತ್ರರೊಡನೆ ಈ ಚಟವನ್ನೂ ಹಂಚಿಕೊಳ್ಳುವಳು. ನವ್ಯ ಸಮಾಜದ ಭವ್ಯ ಪದ್ಧತಿಯಿದು. ಆಕೆಗೆ ವಿವೇಕ ಹೇಳುವವರಿಲ್ಲ. ಅವಳೂ ಅಪಾರ ಸಂಬಳ ದುಡಿವಳು. ಭಾರತ ನಾರಿಯು ಪರದೇಶಿ ಹೆಣ್ಣಿಗೆ ರೂಪದಲ್ಲಿ ಕಡಿಮೆಯೆ ? ವೇಷದಲ್ಲಿ ಕಡಿಮೆಯೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗಾರದಲ್ಲಿ ಕಡಿಮೆಯೆ ? ವಿದ್ಯೆಯಲ್ಲಿ ಕಡಿಮೆಯೆ ? ಬುದ್ಧಿಯಲ್ಲಿ ಕಡಿಮೆಯೇ ? ಭೋಗದಲ್ಲಿಕಡಿಮೆಯೇ ? ಚಟದಲ್ಲೇಕೆ ಕಡಿಮೆಯಾಗಬೇಕು ?

ಸಮಾಜದ ಹೊಲಸು (ಸಮಾಜಬಾಹಿರರು)

ಹಣಸಂಪಾದನೆ ಅತಿಯಾದಷ್ಟೂ ವಿಲಾಸಿ ಜೀವನ ಜಾಸ್ತಿಯಾಗುತ್ತಿದೆ. ಜಾಗತೀಕರಣ ಭಾರತಕಲ್ಲ, ಆದರೆ ಅನಿವಾರ್ಯ ? ಹೊನ್ನು, ಹೆಣ್ಣು, ಮಣ್ಣು, ಸುಖಕ್ಕೆ ಮೂಲ. ಹೊನ್ನು, ಹೆಣ್ಣುಮಣ್ಣು, ಸಮಾಜಕೆ ಅವಶ್ಯಕ ? ಅತಿಯಾದರೆ ಅವು ಸಮಾಜಕೆ ಶೂಲ ? ಕುಡಿತ - ಕುಣಿತಗಳು ಮಿತವಾಗಿದ್ದರೆ ಸಮಾಜಕೆ ಒಳಿತು. "There is a proverb – Half anna Toddy is Helpful for Body". ರಕ್ತದಲ್ಲಿ ಮಲಿನರಕ್ತವಡಗಿದೆ, ಶುದ್ಧ ನೀರಿನಲಿ, ಶುದ್ಧ ಹಾಲಿನಲಿ ಗಮನಕೆ ಬಾರದಷ್ಟು ಅಶುದ್ಧತೆಯಡಗಿದೆ. ಶುದ್ಧಗಾಳಿಯಲಿ, ಹಲಕೆಲವೇಳೆ ಅಶುದ್ಧಗಾಳಿಯೂ ಬೆರೆತು ಬಿಡುವುದು? ಗಟ್ಟಿಚಿನ್ನವು ಒಡವೆಯಾಗದು, ತಾಮ್ರ ಬೆರೆತರೇ ಅದು ಆಭರಣ ? ಹಾವು ಕಡಿದರೆ ಮನುಷ್ಯ ಸಾಯುವನು, ಅದಕ್ಕೆ ಕಾರಣ ಹೆಚ್ಚಿನ ವಿಷವು ಅತಿ ಶೀಘ್ರವಾಗಿ ರಕ್ತದಲ್ಲಿ ಬೆರೆತು, ರಕ್ತವು ವಿಷವಾಗಿ ವ್ಯಕ್ತಿ ಸಾಯುವನು. ಅದೇ ಚೇಳು ಕುಟುಕಿದರೆ ವಿಷದ ಪರಿಣಾಮ, ಅತ್ಯಂತ ಗೌಣ. ಔಷಧಿಯಿಂದ ಗುಣಪಡಿಸಬಹುದು. ಹೆಣ್ಣು ಮುಡಿಯುವಾ, ದೇವರಿಗೆ ಹಾಕುವಾ, ಹಾರವು ಸುಂದರ. ಆ ಮಾಲೆಯಲಿ ಘಮಘಮಿಸುವಾ, ವರ್ಣ - ವರ್ಣದಾ ಪುಷ್ಪರಾಶಿಯಿದೆ. ಹೂವಿನ ಬಿಗುವಿಗೆ ಬಣ್ಣವಿಲ್ಲದಾ ವಾಸನೆಯಿಲ್ಲದ, ನಾರಿನ ಬಲವಿದೆ. ನಾರೊಂದನ್ನೇ ಭಗವಂತನಿಗೆ ಅರ್ಪಣೆ ಮಾಡೆವು, ಹೆಣ್ಣು ಕೂಡಾ ಮುಡಿಯಲಾರಳು ? ಹಾಗೆಂದರೇನು ಈ ಪ್ರಕೃತಿಯಲ್ಲಿ ಹಾಲಿದೆ - ವಿಷವಿದೆ ; ಒಳ್ಳೆಯದಿದೆ - ಕೆಟ್ಟದಿದೆ ; ದುರ್ನಾತವಿದೆ - ಸುವಾಸನೆ ಇದೆ ; ಆಮ್ಲಜನಕವಿದೆ - ಇಂಗಾಲವಿದೆ ; ಒಳ್ಳೆಯ ಮಾತಿದೆ - ಕೆಟ್ಟಮಾತಿದೆ ; ಸುಚಟಗಳಿವೆ - ದುಶ್ಚಟಗಳಿವೆ ; ಯಾವುದನ್ನು ಎಷ್ಟು ಬೇಕೋ ಅಷ್ಟು ಬಳಸಿದರೆ ಪ್ರಕೃತಿಯೊಡನೆ ನಾವು ಸ್ಪಂದಿಸಲು ಸಾಧ್ಯವಲ್ಲವೇ ? ದುಶ್ಚಟಗಳಿಗೂ ಲಗಾಮು ಹಾಕಿ, ಎಂದೋ ಒಂದು ದಿನ, ಯಾವುದೋ ಸಂದರ್ಭದಲಿ ಒಂದು ಸಿಗರೇಟ್ ಇಲ್ಲವೇ ಅರ್ಧಗ್ಲಾಸ್ ಬೀರ್, ಇಲ್ಲವೇ ಮದುವೆ ಮನೆಯಲ್ಲಿ ಮಿತ್ರರೊಡನೆ ಒಂದೆರಡು ಗಂಟೆ ಇಸ್ಪೀಟ್ ಆಡಿದರೆ ಅನಾರೋಗ್ಯವಲ್ಲ- ಪ್ರಕೃತಿ ಸ್ಪಂದಿಪಳು ? ಸುನಾದ ಕೂಡಾ ದೇಹಕೆ ಆರೋಗ್ಯ. ದಿನವೆಲ್ಲಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಳಿತು ಅಖಂಡ ಭಜನೆಯಂತೆ ಹಾಡುತಲಿದ್ದರೆ ಆರೋಗ್ಯಹಾನಿ, ಕೇಳ್ವರಿಗೂ ಅಹಿತ ? ಎಲ್ಲಾ ಚಟುವಟಿಕೆಗಳಿಗೂ ಒಂದು ಮಿತಿಯಿದೆ. ವಿಶ್ರಾಂತಿಯಿಲ್ಲದೆ ಇಪ್ಪತ್ನಾಲ್ಕು ಗಂಟೆ ವೈದ್ಯದುಡಿದರೆ, ಗುರುವೂ ದುಡಿದರೆ ಅವರ ಆರೋಗ್ಯ ತಾನಾಗಿ ಕೆಡುವುದು. ಈ ಜಡದೇಹಕ್ಕೆ ಇಪ್ಪತ್ನಾಲ್ಕು ಗಂಟೆಲಿ ಆರರಿಂದ ಎಂಟು ಗಂಟೆ ವಿಶ್ರಾಂತಿ ಅವಶ್ಯಕ ? ಮಾನವಪ್ರಾಣಿ ಬುದ್ಧಿಯೊಡನೆ ಕೆಲಸ ಮಾಡುವಾಗ ಅಂಗಾಂಗಗಳು ವಿಶ್ರಾಂತಿಯನ್ನು ಪಡೆಯಲೇಬೇಕು? ವಿಶ್ರಾಂತಿಯಿಲ್ಲದೆ ದುಡಿದ ಅಂಗಗಳಿಗೆ ಒಂದೆರಡು ಗಂಟೆ ವ್ಯಾಯಾಮ ಬೇಡವೇ ? ವಾಕಿಂಗ್ ಬೇಡವೇ ? ಸದಾಕಾಲ ತಿನ್ನುತ, ದೀರ್ಘಕಾಲ ನಿದ್ರಿಸುವ ಮಹಾ ವ್ಯಕ್ತಿಯನು ಸೋಮಾರಿಯೆನ್ನುವರು. ಅಂಥ ಸೋಮಾರಿಗೆ ಕೊಬ್ಬು ಅಧಿಕವಾಗಿ, ಕೊಲೆಸ್ಟರಾಲ್ ಸಂಗ್ರಹವಾಗಿ ಮಧುಮೇಹ, ಬಿ.ಪಿ. ಗಳಿಗೆ ಎಡೆಯಾಗಬಹುದು? ವೀಳೆದೆಲೆ, ಅಡಿಕೆ, ದೇಹಕೆ ಆರೋಗ್ಯ ? ತಂಬಾಕು ಸೇರಿದರೆ ದೇಹಕೆ ಆಘಾತ ? ತಂಬಾಕು ವಿಷವೆಂದು ಜಗವೇ ಅರಿವುದು. ಆದರೂ ತಂಬಾಕಿಗೆ ಎಷ್ಟೊಂದು ಗೌರವ ? ರೂಪಾಂತರ ಹೊಂದಿ ರಕ್ತದಿ ಸೇರುವ ವಿಷಮಯ ತಂಬಾಕು ? ನಶ್ಯ ರೂಪದಿ ಮೂಗಿನ ಮೂಲಕ ದೇಹ ಸೇರುವುದು ? ಚುಟ್ಟಾ ಗಾಂಜವಾಗಿ ಉಸಿರೆಳೆತದಿಂದ ಶ್ವಾಸಕೋಶ ಮಾರ್ಗ, ಗಂಟಲು ಮಾರ್ಗ ದೇಹಸೇರುವುದು? ತಂಬಾಕು ರೂಪಿನಿಂದ ಎಲೆ ಅಡಿಕೆಯ ಜೊತೆ ಬಾಯಿಯ ಮಾರ್ಗ ದೇಹ ಸೇರುವುದು ಜರ್ದಾರೂಪತಾಳಿ ತುಟಿಗೂ ಹಲ್ಲಿಗೂ ಮಧ್ಯ ಜಾಗದಲಿದ್ದು ನಾಲಿಗೆ ಮೂಲಕ ಕೊಂಚ ರಸವಾದರೂ ಗಂಟಲಿಗೆ ನುಗ್ಗಿ ಜಠರ ಸೇರುವುದು. ಅದೇ ತಂಬಾಕು ಬುದ್ಧಿ ಕೆಡಿಸುವಾ ರಾಸಾಯನಿಕವಸ್ತುಗಳೊಡನೆ "ಡ್ರಗ್ಸ್" ರೂಪ ತಾಳಿ, ಬುದ್ಧಿಯ ಮೇಲೆ ದುಷ್ಪರಿಣಾಮ ಬೀರಿ ಶ್ವಾಸಕೋಶಗಳಿಂದ ದೇಹ ಸೇರುವುದು. ತಂಬಾಕು - ಮನುಜಗೆ ಉತ್ತೇಜನ ವೆಂಬುದು ಬರಿಯ ಬೊಗಳೆ, ಸುಳ್ಳಿನ ಕಂತೆ ? "ಶ್ವಾಸಕೋಶಮಾರ್ಗ, ಗಂಟಲುಮಾರ್ಗ, ಅನ್ನನಾಳ ಮಾರ್ಗ, ಜಠರ ಸೇರುವುದು, ಆಹಾರದೊಡನೆ ಅದೂ ಪಚನವಾಗಿ ರಕ್ತ ಸೇರುವುದು ? ಶುದ್ಧ ರಕ್ತವು ಮಲಿನವಾಗುವುದು. ದೇಹಾಂಗಗಳ ಮೇಲೆ ದುಷ್ಪರಿಣಾಮ ? ಕಾಲಕ್ರಮೇಣ ಬ್ಲಡ್ ಕ್ಯಾನ್ಸರಿಗೆ ದಾರಿಯಾಗುವುದು. ಹೃದಯ, ಶ್ವಾಸಕೋಶ, ಕರುಳು, ಜಠರ, ಪಿತ್ತ ಜನಕಾಂಗ, ಮೂತ್ರಜನಕಾಂಗ, ಇಲ್ಲೆಲ್ಲ ಸಂಚರಿಸಿ ಶುದ್ಧ ರಕ್ತವನು ಮಲಿನವಾಗಿಸಿ ಅಂಗಾಂಗ ಚಲನೆಗೆ ಅಡ್ಡಿಯಾಗುವುದು ? ಕುಡಿತದ ಚಟವು ಮತ್ತೊಂದು ಮಾರ್ಗ. ಕುಡಿತವೆಂದರೆ ನಿಶೆಯ ಸಂಪರ್ಕ. ತಾತ್ಕಾಲಿಕವಾಗಿ ಬುದ್ಧಿಭ್ರಮಣೆ ಯಾಗುವ ನಿಶಾವಸ್ತುಗಳು - ಕುಡಿತದಲಿ ಸಂಯೋಗವಾಗಿವೆ. ಕಳ್ಳು ಕುಡಿದರೇನು,

Sri Vidyabharathi Book Centre, Sringeri

 CC-O. In Public Domain. Digitized by eGangotri

ಬ್ರಾಂದಿ ಕುಡಿದರೇನು ? ಕುಡಿತ ಕುಡಿತವೇ ? ಕಳ್ಳ ಭಟ್ಟಿ ಕುಡಿಯಲೀ, ವಿಸ್ಕಿ ಕುಡಿಯಲೀ ಬುದ್ಧಿಯ ಮೇಲಿನ ಪರಿಣಾಮವೊಂದೇ ? ಜ್ಞಾನವಿಲ್ಲದೆ ಹುಚ್ಚು ಹುಚ್ಚಾಗಿ, ಹರಟುತ ಬೀಳ್ವದು ಒಂದು ಮಾರ್ಗ ? ಮಾನಮರ್ಯಾದೆಗಳ ಜ್ಞಾನವಿಲ್ಲದೇ ತಾಯಿ ಮಗಳನ್ನು, ಹೆಂಡತಿಯೆಂದೆಣಿಸೀ ಕಾಮದಾಸೆಗೆ ಕೈಹಾಕುವುದು ಮತ್ತೊಂದು ಮಾರ್ಗ ? ರಸ್ತೆಯಲ್ಲಿ ತೂರಾಡುತ್ತಾ ವಾಹನ ಚಲಿಸೀ ಅಪಘಾತ ಸಂಭವಿಸಿ ಮೃತ್ಯುವಪ್ಪುವುದು, ಹಾಗಿಲ್ಲದಿದ್ದರೆ ಅಂಗವಿಹೀನನಾಗುವುದು ಮಗುದೊಂದು ಮಾರ್ಗ ? ಸಮಾಜದಲ್ಲಿನ ಘನತೆಯ ಸ್ಥಾನಕೆ ಕುಡುಕನೆಂತೆಂಬ "ಗುಣವಾಚಕ" ಬಂದು, ಯಾರೂ ಇವನನು ಗೌರವಿಸದಿರುವುದು ಅಸಹ್ಯಮಾರ್ಗ? ಕುಡುಕ ಗಂಡನಿಂದ ಪ್ರಾಯದ ಹೆಂಡತಿ ಬದುಕಿಗಾಗಿ, ಜಾರೆಯಾಗು ವುದು ಅಪಾಮಾರ್ಗ ? ಕುಡಿತ ಚಪಲದಿಂದ ಸಂಸಾರಕ್ಕೆ ಅತಿ ಹೊರೆಯಾಗಿ ಪತ್ನೀ ಪುತ್ರರು ಭಿಕಾರಿಯಾಗುವುದು ಅನ್ಯಾಯಮಾರ್ಗ? ಹಾಗೆಂದರೆ ಆರೋಗ್ಯಹಾನಿ, ಸಂಸಾರಹಾನಿ, ಮಾನಹಾನಿ, ಅರ್ಥಹಾನಿ, ಸಮಾಜಹಾನಿ, ಮಕ್ಕಳಿಗೆಲ್ಲಾ ವಿದ್ಯೆ ಹಾನಿ ? ಭಾಷಣಮಾತ್ರ ಬಿಗಿವುದು ಸರ್ಕಾರ ? ವಿಧಾನಸೌಧದ ಮುಂಬಾಗಿಲಿನಲ್ಲಿದೆ "ಸರ್ಕಾರದ ಕೆಲಸ ದೇವರ ಕೆಲಸ ?" ಸಮಾಜದಲ್ಲಿನ ಈ ಹೊಲಸು ಸ್ಥಿತಿಯು ದೇವರ ಕೆಲಸವೆ ?

ಜೂಜುಗಾರಿಕೆ

"ಲಕ್ಷ್ಮಿ" ಕೈ ಸೇರಲು ಉತ್ತಮ ಹವ್ಯಾಸ, ಉತ್ತಮ ನಡೆನುಡಿ, ಉತ್ತಮ ಭಾವನೆ ಕಾರಣವಾದರೆ, 'ಲಕ್ಷ್ಮಿ' ಕೈ ಬಿಡಲು ಕೆಟ್ಟ ಚಟಗಳು ಕಾರಣವೆಂದು ಸಮಾಜ ನಂಬುವುದೆ? ಕಾಸಿನಾಟ, ಬಚ್ಚದಾಟ, ಕವಡೆ, ಪಗಡೆಗಳು ಚಿಕ್ಕಾಟವಾಗಿ ಚಿಲ್ಲರೆ ಹಣವು ಓಡಾಡುತ್ತಿದ್ದರೆ, ಇಸ್ಪೀಟು, ಕುದುರೆ ಜೂಜು ಹಿರಿಯರಾಟವಾಗಿ ಪ್ರತಿನಿತ್ಯವೂ ಲಕ್ಷಾಂತರ ರೂಪಾಯಿ ವಹಿವಾಟು ನಡೆದು, ಆಸ್ತಿ ಪಾಸ್ತಿಗಳು ಹರಾಜಾಗುವುವು. ಹಳ್ಳಿಗಳಲ್ಲಿ ಊರುಗಳಲ್ಲಿ ರಸ್ತೆಗೆರಡು ಕ್ಲಬ್ಬು ಜನ್ಮತಾಳಿ ಹುಡುಗರು, ಯುವಕರು ವಯಸ್ಕರೊಡನೆ ಇಸ್ಪೀಟ್ ಆಡುತ ಹಣಕಾಸು ವ್ಯವಹಾರ ಅತಿಯಾಗಿ ನಡೆವುದು. ಈಗೀಗಂತೂ ಪ್ರತಿಹಳ್ಳಿಯಲಿ ರೈತನ ಆದಾಯ ಸೀಮೆ ಹಸು ಕೊಡುವ ಸಮೃದ್ಧ ಹಾಲಿನಿಂದ. ಹಸುವಿನ ಮೇಲೆ ಬ್ಯಾಂಕಿನ ಸಾಲ ಹಾಗೇ ನಿಂತಿದೆ" "ನಿಂತರೆ ನಿಲ್ಲಲಿ, ಇಸ್ಪೀಟ್ ಆಡುವ ಹಾಲಿನ ಹಣದಲಿ, ಒಂದೇ ಸಾರಿ ಗೆದ್ದರೆ ಸಾಲ ತೀರಿಸುವ, ಒಂದು ಬಾರಿ ಸೋತರೆ ಬಡ್ಡಿ ಕಟ್ಟಿದರಾಯ್ತು - ಬ್ಯಾಂಕ್ ಮ್ಯಾನೇಜರ್ರು ನಮ್ಮವರಲ್ಲವೇ ? ಜಮೀನು ಸಾಲದ ಹಣ, ವ್ಯವಸಾಯೋತ್ಪನ್ನದ ಅಡ್ವಾನ್ಸ್ ಹಣ, ಎತ್ತು ಕರುಗಳನ್ನು ಮಾರಿದ ಹಣ, ಇತ್ಯಾದಿ, ಇತ್ಯಾದಿ" "ಸ್ವಯಂಸಂಪಾದನೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿಗರೇಟ್ ಕಲಿಸುವರು, ಕುಡಿತ ಕಲಿಸುವರು, ಅವಿದ್ಯಾಂತನಿವ, ಬಾಯ್ತುಂಬ ಹೊಗಳಿ ಗೆದ್ದರೆ ಇವನನು ಹಿಡಿವವರಾರು ? ಎಂಬ ಸಂದೇಶ ಅವನಿಗೆ ತಲುಪಿಸಿ ಜೂಜಿನ ದಂಧೆಗೆ ಬೀಳಿಸುವವರವರು. ಕುಳಿತಲ್ಲಿಯೇ ಕುಡಿತ ಇಸ್ಪೀಟುಗಳು. ಸಾಲದುದಕ್ಕೆ ಅಪರೂಪವಾಗಿ ಮೋಹಿನಿಸಮಾಗಮ. ಯೌವನಮದವು, ಹಣದ ಮದವು, ಶ್ರೀಮಂತಿಕೆಮದವು, ಹಠಮಾರಿಯವನು, ಸಮಾಜಕೆ ಹಿರಿಯ, ಅತ್ಯಂತ ಘನತೆಯವ. ''ಮಾರಿಯ ಮುಂದೆ ಕೋಣ ಬೀಳುವಂತೆ'' ದುಷ್ಟಟಗಳಿಗೆ ಬಲಿಯಾಗುವನವ ? ಮನೆಯವರ ಮಾತಿಗೆ, ಹಿರಿಯರ ಮಾತಿಗೆ, ಮಕ್ಕಳ ಬೇಡಿಕೆಗೆ ಬಗ್ಗದ ವ್ಯಕ್ತಿಯವ. ಸಂಪೂರ್ಣ ದಿವಾಳಿಯಾಗಿ, ಜಮೀನಿನಮೇಲಿನ ಸಾಲ ತೀರದೆ ಆತ್ಮಹತ್ಯೆಗೆ ಕೈಹಾಕುವನವ. ಸತ್ಯವ ಮಾತ್ರಾ ಮನೆಯವರರಿವರು, ಮಿತ್ರರು ಅರಿವರು ? ಕ್ಲಬ್ಬಿನವರ ಸಂಕಟ ಹೇಳತೀರದು ? ಅತ್ಯುತ್ತಮ ಗಿರಾಕಿ ಕಣ್ಮುಚ್ಚಿದನೆಂದು ? ಅವನನು ಪಾಪರ್ ಮಾಡಿ ಮೃತ್ಯು ಸನ್ನಿಧಿಗೆ ಕಳುಹಿಸಿದವರೂ ಆ ಪುಣ್ಯಾತ್ಮರೆ ? ಪುಟ್ಟ ಊರಿನಲಿ ಕ್ಲಬ್ ನಡೆಸಲು ಅನುಮತಿಯಿತ್ತವರು ಘನಸರ್ಕಾರವೆ ? ''ಸಿಟಿಯಿಂದ ಸಾಂಕ್ರಾಮಿಕ ಹಳ್ಳಿಗೆ ಹರಡಿತು ? ಸಿಟಿಯವರಲ್ಲಿ ಲಂಚದ ಹಣವಿದೆ ? ಸರ್ಕಾರೀ ಉದ್ಯೋಗ ಭ್ರಷ್ಟಾಚಾರಕ್ಕೆಡೆ ? ಹಣ ಖರ್ಚು ಮಾಡಲು ದಾರಿಯೇ ಇಲ್ಲ - ಕುಡಿತ ಕುಣಿತಗಳು ಅವರಿಗೆ ಬೇಕು ? ಅಯ್ಯೋ ಪಾಪ, ಹಳ್ಳಿಯ ಅಮಾಯಕ, ದುಷ್ಟಟಕೆ ಬಿದ್ದು ಖಾಲಿಯೂ ಆದ, ಸಾವನ್ನಪ್ಪಿದ, ಹೇಳುವವರ್‍ಯಾರು ?

''ಗ್ರಾಮಗಳಲ್ಲಿ ಇಂದಿಗೂ ಕೂಡ ಊರಿನಪ್ರಮುಖವ್ಯಕ್ತಿ ಮನೆಯಲ್ಲಿ ಶ್ಯಾನುಭೋಗ, ಪಟೇಲ, ಜಮೀನ್ದಾರ, ಪುರೋಹಿತ ಇಂಥವರ ಮನೆಯಲ್ಲಿ ಹವ್ಯಾಸವಾಗಿ ಸಾಮಾನ್ಯ ವ್ಯಕ್ತಿಗಳೂ, ಸರ್ಕಾರಿ ಅಧಿಕಾರಿಗಳೂ, ಊರಿನ ಹಿರಿಯರು ಮನರಂಜನೆಗಾಗಿ ಇಸ್ಪೀಟ್ ಆಡುವುದು ಸರ್ವೇಸಾಮಾನ್ಯ. ಆದರೆ ಅಲ್ಲಿಯು ಹಣವೇ ಪ್ರಾಧಾನ್ಯ. ಕಾಫಿ, ಸಿಗರೇಟು, ಮನೆಯ ಯಜಮಾನನ ಸೇವಾರ್ಥವಾಗುವುದು. ಮದುವೆ ಮುಂಜಿಗಳಲ್ಲಿ ಮೋಜಿನ ನೆವದಲಿ ಹಣ ಕಟ್ಟಿ ಆಡುವುದು ಹವ್ಯಾಸವಾಗಿದೆ. ಕೆಲವರಿಗಂತೂ ಉದ್ಯೋಗವಿಲ್ಲದಿರೆ ಹಣ ಸಂಪಾದನೆಗೆ ಇಸ್ಪೀಟ್ ಆಟವು ದುಡಿಮೆಯ ಆಟ ! ಅವರಲಿ ಕೆಲವರು ಲೆಕ್ಕಾಚಾರದಲಿ ಅತ್ಯಂತ ಸಮರ್ಥರು. ಎಲೆಹಂಚಿವ ಮೇಲೆ ಒಂದು ಸುತ್ತು ಮುಗಿದಾಗ, ಮನಸಿನ ಲೆಕ್ಕದಿ, ಉಳಿದ ಎಲೆಗಳ ಸಾಮರ್ಥ್ಯವನ್ನಳೆದು ಬುದ್ಧಿವಂತಿಕೆಯಿಂದ, ಆಟವಗೆದ್ದು ಹಣವ ಮಾಡುವರು. ಖುಷಿಗೆ ಬಂದಂಥ ದಡ್ಡರು ಅಲ್ಲಿ, ಹಣ ಕಳೆದುಕೊಂಡು ಮಂಕಾಗುವರು. ಇಸ್ಪೀಟ್ ಜೊತೆಗೆ ಧೂಮಪಾನವೂ ಉತ್ತಮ ಸಂಗಾತಿ ! ಯಾವುದೋ ಸಂದರ್ಭ ಕುಡಿತವೂ ಸೇರುವುದು. ಕೆಲ ಕ್ಲಬ್ಬುಗಳಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಣ್ಣಿನ ಪಾತ್ರವು ಅತಿಯಾಗಿ ನಡೆದು ವೇಶ್ಯಾವಾಟಿಕೆಗೆ ದಾರಿಯಾಗುವುದು.

ಹರೆಯದ ಹುಡುಗರು, ತರುಣ ತರುಣಿಯರು, ಸಂಗದೋಷದಿಂದ ಇಸ್ಪೀಟ್ ಧೂಮಪಾನ ಅಭ್ಯಸಿಸುವರು. ವಿದ್ಯಾವಂತಾ ತರುಣ ತರುಣಿಯರು ವಿಹಾರಕ್ಕಾಗಿ ಪ್ರಕೃತಿ ಧಾಮಕ್ಕೆ ಭೇಟಿಯಿತ್ತಾಗ, ಮನರಂಜನೆಗಾಗಿ ಇಸ್ಪೀಟ್ ಆಟ, ಧೂಮಪಾನ ಅಭ್ಯಸಿಸುವರು. ಆ ಅಭ್ಯಾಸವೆ ಹಿರಿದಾಗಿ ನಡೆದು, ಚಟ ಬಿಡಲಾರದೆ, ಕದ್ದು ಸೇದುವರು, ಇಸ್ಪೀಟ್ ಆಡುವರು. ಟಿ.ವಿ. ಛಾನಲ್‌ನಲ್ಲಿ ಪಾಶ್ಚಾತ್ಯ ಸಿನೆಮಾ ನೋಡುತ, ನೋಡುತ, ನಮ್ಮಯ ಹೆಣ್ಣೂ-ಸಿಗರೇಟ್, ಇಸ್ಪೀಟು ಚಟವನು ಕಲಿತು, ಕ್ಲಬ್ ಸದಸ್ಯೆಯಾಗಿ ರಾಜಾರೋಷಾಗಿ ಇಸ್ಪೀಟ್ ಆಡುವಳು, ಧೂಮಪಾನ ಮಾಡುವಳು! ಅಪರೂಪವಾಗಿ ಕುಡಿತದ ಚಟಕೂ ಶರಣಾಗುವಳು ! ನಾಗರೀಕತೆಯ ಸಮಾಜದಲ್ಲಿ - ಗಂಡು ಹೆಣ್ಣು ಸಮಾನರಾದಾಗ, ಗಂಡನಾದವನು ಹೆಂಡತಿ ಹವ್ಯಾಸ ಧಿಕ್ಕರಿಸಲಾರನು ? "ಮಹಿಳಾ ಕ್ಲಬ್ಬಿನಲಿ ಅತ್ಯುತ್ತಮ ಸ್ಥಾನದ ಪತ್ನಿಯು ಆಕೆ. ಅವಳ ಸ್ಥಾನವು ಸಮಾಜದಲ್ಲಿ, ತನಗೂ ಗೌರವ ಕಾಣದೆ ತರುವುದು. "ನಾನು ಕ್ಲಬ್ಬಿನಲ್ಲಿ ಅಷ್ಟೊಂದು ಕುಡಿಯುವೆ, ಧೂಮಪಾನ ಮಾಡುವೆ ಇಸ್ಪೀಟ್ ಆಡುವೆ, ಅವಳಿಗೂ ಬೇಜಾರು, ಹೊತ್ತು ಕಳೆಯಲು ಅವಳ ಸ್ನೇಹಿತರು, "ತಾನೇಕೆ ಅದನ್ನು ವಿರೋಧಿಸಲಿ" ಗಂಡನ ತೀರ್ಮಾನ. ಮಕ್ಕಳ ಕತೆಯು ಭಗವಂತನಿಗೆ ಪ್ರೀತಿ ?

ಡ್ರಗ್ಸ್ ಹಾವಳಿಯಂತೂ ಅಗೋಚರ, ಅಮಾನುಷ? ಸ್ವಪ್ರೇರಣೆಯಿಂದ, ಬಲಾತ್ಕಾರದಿಂದ, ಒಂದು ಸಾರಿ ಅಭ್ಯಾಸವಾದರೆ ಅಷ್ಟೇ ಸಾಕು, ಮುಗಿಯಿತು ಜೀವನ ? ಧೂಮಪಾನ ಕುಡಿತಗಳ ಹೇಗಾದರೂ ಮಾಡಿ ತಪ್ಪಿಸಲು ಸಾಧ್ಯ ? ಡ್ರಗ್ಸ್ ಸೇವನೆಯು ನಿಲ್ಲಿಸದಿರುವಂಥ ಘೋರ ದುಶ್ಚಟ. ಡ್ರಗ್ಸ್ ಚಟವು ವಿದೇಶದಿಂದ ಬಂದಂತಹ ಪರದೇಶಿ ಶಾಪಾ. ಪ್ರೌಢಶಾಲಾ ಕಾಲೇಜಿನಾ ತರುಣ, ತರುಣಿಯರು ಸಾಮಾನ್ಯವಾಗಿ 'ಡ್ರಗ್ಸ್' ಚಟಕ್ಕೆ ಬಲಿಯಾಗುವುದು ಅತ್ಯಂತ ಸಹಜ. ಶ್ರೀಮಂತ ಮಕ್ಕಳಿಗೆ ಹೇಗಾದರೂ ಕಲಿಸಿ, ಅವರಲ್ಲಿರುವ ಹಣ ದೋಚುವುದೇ "ಡ್ರಗ್ಸ್" ಜಾಲದ ಮುಖ್ಯ ಉದ್ದೇಶ. ಮಧ್ಯಮ ಹಾಗೂ ಶ್ರೀಮಂತವರ್ಗಕೆ ಈ ಚಟ ಬಂದರೆ, ಪ್ರಚೋದಕ ಕ್ರಿಯೆಯಿಂದ ಬಲಹೀನರಾಗಿ, ಮತ್ತೆ ಮತ್ತೆ ಬೇಕೆಂದು ಬಯಸುವ ಚಟವದು. ದುಡ್ಡು ಸೆಳೆಯಲು ವಾಮಮಾರ್ಗವಿದು. ಮತ್ತಿಳಿದ ಮೇಲೆ ಮತ್ತೆ ಬೇಕೆನ್ನುವ, 'ಡ್ರಗ್ಸ್' ಕೊಡುವ ವ್ಯಕ್ತಿಗೆ ಕೇಳಿದಷ್ಟು ಹಣ ಕೊಡುತ್ತಾ ತನ್ನಯ ಸೌಂದರ್ಯವು ಇಳಿಮುಖವಾಗಿ, ಜಾರೆಯಾದಂಥ ಹೆಣ್ಣುಗಳೆಷ್ಟೋ? ಹಣದ ವ್ಯವಹಾರ - ಭ್ರಷ್ಟಾಚಾರದಿಂದ ಪೋಲೀಸ್ ಇಲಾಖೆ ನಿಷ್ಕ್ರಿಯವಾಗಿ ಡ್ರಗ್ಸ್ ದಂಧೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರತರಾಷ್ಟ್ರದಿ ಹೆಮ್ಮರವಾಗಿದೆ. ಉತ್ತಮ ಸಂಸ್ಕೃತಿಯ ಗಂಡು ಹೆಣ್ಣುಗಳು ದುಷ್ಟ ಸಹವಾಸದಿಂದ ಈ ದಂಧೆಯಲ್ಲಿ ಪಾಲ್ಗೊಳ್ಳುವರು. ಡ್ರಗ್ಸ್ ವ್ಯವಹಾರಕೆ ಅಂತರರಾಷ್ಟ್ರೀಯ ಮಹಾಜಾಲವೇ ನಿರ್ಮಿತವಾಗಿದೆ. ಆಫ್ಘನ್ ರಾಷ್ಟ್ರದ ಗುಡ್ಡ ಬೆಟ್ಟದ ನಡುವೆ, ಅವ್ಯಾಹತವಾಗಿ ಬೆಳೆಯುತ್ತಿರುವ ಅಫೀಮು, ಗಾಂಜವೆ, ಡ್ರಗ್ಸ್ ದಂಧೆಗೆ ಕಾರಣವಾಗಿವೆ. ಅಪಾರ ಹಣವನು ಮಾಡುವ ತವಕದಿ ಕಾಣದ ಜಾಗದಿ 'ಗಾಂಜಾ' ಬೆಳಸಿ, 'ಡ್ರಗ್ಸ್' ಆಗಿ ಪರಿವರ್ತಿಸಿ ಪರದೇಶಗಳಿಗೆ ರಫ್ತು ಮಾಡುವರು. ಈ ದಂಧೆಯಲ್ಲಿ ಭಾರತರಾಷ್ಟ್ರವೂ ಆಮದಿನ ರಾಷ್ಟ್ರವಾಗಿ, ಈ ದೇಶದಲ್ಲಿನ ತರುಣ ತರುಣಿಯರೂ ದಾರಿ ತಪ್ಪುವರು. ಚಿಕ್ಕ ಚಿಕ್ಕದಾದ ಪೊಟ್ಟಣದಲ್ಲಿ – ಗಾಂಜಾ ಅಫೀಮಿನೊಡನೆ ಮತ್ತು ಬರುವಂಥ ರಾಸಾಯನಿಕ ಮಿಶ್ರಣ ಬೆರಸೀ, ಲಕ್ಷ ಲಕ್ಷ ರೂಪಾಯಿಗೇ ಅದನು ಮಾರುವರು. ಡತ್ರಗ್ಸ್ ಸೇವನೆಯು ಅತ್ಯಂತ ಘೋರವಾದ ದುಶ್ಚಟವಾಗಿದೆ. ಬುದ್ಧಿಮಾಂದ್ಯ, ಪೌರುಷಹಾನಿ, ದೈಹಿಕ ನಿಷ್ಕ್ರಿಯೆ ಎಲ್ಲವೂ ಒಮ್ಮೆಗೆ, ಮಾನಹಾನಿ, ಅರ್ಥ ಹಾನಿ, ಉದ್ಯೋಗಹಾನಿ, ಸಮಾಜದಲ್ಲಿನ ಗೌರವ ಹಾನಿ, 'ಡ್ರಗ್ಸ್' ಚಟಕ್ಕೆ ವ್ಯಕ್ತಿ ಬಿದ್ದರೆ ಮುಗಿಯಿತು. ಅವನ ಭವಿಷ್ಯದ ಕತೆಯು ? ಹಣವೆಲ್ಲ ಖಾಲಿಯಾಗಿ ಚಟ ಮಾತ್ರ ಹೋಗದು. ಪೌರುಷತ್ವವೂ ಖಾಲಿಯಾಗಿ ನಿರ್ವೀರ್ಯನಾಗುವನು, ನಿಸ್ತೇಜನಾಗುವನು. ಸುಂದರ ಯುವತಿ ಈ ಚಟದಿಂದ, ದೇಹದ ಸೌಂದರ್ಯವಳಿದು ಹಣ ಖಾಲಿಯಾಗಿ, ಹಣದಾಸೆಯಿಂದ ವೇಶ್ಯೆಯಾಗುವಳು. ಡ್ರಗ್ಸ್ ದಂಧೆಯು ಕ್ಲಬ್ಬಿನಾಟವಲ್ಲ? ಕುಡಿತ, ಜೂಜುಗಳಿಗೆ ಘನ ಸರ್ಕಾರದ ಪರವಾನಗಿಯಿದೆ. ಕ್ಲಬ್ಬಿನ ಸದಸ್ಯನಾಗಿ ಎಷ್ಟು ಕುಡಿದರೂ, ಎಷ್ಟು ಜೂಜಾಡಿದರೂ ದೋಷವಿಲ್ಲವಲ್ಲಿ? ಕುಡಿದು ಬಿದ್ದವರನ್ನ ಕ್ಲಬ್ ಆಡಳಿತ ವರ್ಗವೆ ಮನೆಗೆ ಸಾಗಿಸುವುದು ? ಹಣವಂತನಾದರೆ ಅಧಿಕಾರಿಯಾದರೆ, ಕಾರಿನ ಚಾಲಕ ಯಜಮಾನನನ್ನು ಮನೆಗೆ ಸಾಗಿಸುವ ? ಈಚೆಗಂತೂ ಮಹಿಳಾ ಕ್ಲಬ್ಬುಗಳು ವಿಶೇಷವಾಗಿ ಸಮಾಜದುದ್ಧಾರ ನೆಪವನ್ನೊಡ್ಡಿ ಜೂಜು ಕುಡಿತಗಳು ಸಾಮಾನ್ಯವಾಗಿವೆ ? ಅನ್ಯಾಯದ ಹಣ ಸೇರಿದಂತೆಲ್ಲಾ ಪತ್ನಿಯ ಪ್ರಚೋದಿಸಿ, ಅಧಿಕಾರಿ ವರ್ಗ ಮಹಿಳಾ ಕ್ಲಬ್ಬುಗಳ ಮೆಂಬರ್ ಮಾಡಿಸುವರು ? ಸೌಂದರ್ಯಧಮನಿಯರು, ಸಲ್ಲದ ಚಟ ಕಲಿತು, ಸಂಸಾರ ಮರೆತು ಸಮಾಜೋದ್ಧಾರ ನೆವದಿಂದಲೇ ಕ್ಲಬ್ಬುಗಳಿಗೆ ದಾಸರಾಗುವರು. ಗಂಡನು ಅಲ್ಲಿ ಹೆಂಡತಿ ಇಲ್ಲಿ ? ಈರ್ವರು ಕಳ್ಳರೇ ? ಮಕ್ಕಳಂತೂ ಅಪ್ಪ ಅಮ್ಮಂದಿರ ಮಾರ್ಗದರ್ಶನವಿರದೆ ಹಣದ ಮದದಿಂದ ದಾರಿ ತಪ್ಪುವರು ? ತಾರುಣ್ಯ ಮದದಿಂದ ಕಲಿಯದ್ದನ್ನು ಕಲಿವರು ? ಸಂಸಾರ ರಥವೂ ದಿಕ್ಕು ತಪ್ಪುವುದು ? ಅವರ ಭವಿಷ್ಯವ ಭಗವಂತನೇ ಬಲ್ಲ, ಡ್ರಗ್ಸ್ ದಂಧೆಯಿಂದ ಆರೋಗ್ಯ ಹಾನಿ, ಮರ್ಯಾದೆ ಹಾನಿ – ಉದ್ಯೋಗ ಹಾನಿ ಹಣವೂ ಹಾನಿ, ಪೌರುಷತ್ವ ಹಾನಿ, ಬುದ್ಧಿ ಹಾನಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ವೇಶ್ಯಾವಾಟಿಕೆ ?

ದೊಡ್ಡ ನಗರದಲಿ ವೇಶ್ಯಾವಾಟಿಕೆ ಅತಿದೊಡ್ಡದಂಥೆ. ಹಳ್ಳಿಗಳಿಂದ ಊರುಗಳಿಂದ ಗ್ರಾಮಗಳಿಂದ ಬಂದಂತಹ ಬಡತನ ರೇಖೆಯ ಕುಮಾರಿಯರಿಗೆ ಹಣದಾಸೆ ತೋರಿಸಿ, ಕೆಲಸ ಕೊಡಿಸುವ ನೆವದಿ ಕದ್ದು ಸಾಗಿಸಿ ವೇಶ್ಯಾವಾಟಿಕೆಗೆ ಕದ್ದು ಮಾರುವ ದಳ್ಳಾಳಿ ಜಾಲವು ರಾಷ್ಟ್ರವ್ಯಾಪ್ತಿ. ಸುಂದರ ಉಡುಪು, ಅಲಂಕಾರ ವಸ್ತುವ ಅಮಾಯಕ ಹೆಣ್ಣುಗಳಿಗಿತ್ತು ಯಾವದೋ ನಗರದ ಯಾವುದೊ ಹೊಟೆಲಲ್ಲಿ ಒಂದೆರಡು ರಾತ್ರಿ ಬಿಡಾರ ಮಾಡಿ, ಆ ಹೆಣ್ಣು ಮಕ್ಕಳ ಶೀಲಭಂಗಮಾಡಿ, ಅತಿ ದೊಡ್ಡ ನಗರದ ವೇಶ್ಯಾವಾಟಿಕೆಗೆ ಬೆಲೆಗೆ ಮಾರುವರು. ವೇಶ್ಯಾವಾಟಿಕೆಯು ಪೋಲೀಸ್ ಕೃಪೆಯಿಂದ ಗುಟ್ಟಾಗಿ ನಡೆವುದು. ಅಲ್ಲಿ ಆ ಹೆಣ್ಣಿಗೆ ಎಲ್ಲಾ ಚಟಗಳ ಶಿಕ್ಷಣವಿತ್ತು ಪ್ರವಾಸಿ ಜನರಿಗೆ ಸುಖವ ಕೊಡುವಂಥ ಶಿಕ್ಷಣ ಕೊಡುವರು. ಬಾಗಿಲಲಿ ಕುಳಿತು ದಾರಿಹೋಕರನು ಆಕ್ಯಾಕರ್ಷಿಸಿ, ಅವರನು ಸೆಳೆದು ಜೇಬುಖಾಲಿ ಮಾಡಿ, ಸುಖವನ್ನಿತ್ತು ತನ್ನ ಪಾಲನ್ನು ಕಸಿದುಕೊಳ್ಳುವುದೆ ಹೆಣ್ಣಿನ ಕೆಲಸ. ವೇಶ್ಯಾವಾಟಿಕೆ ನಡೆಸುವವಳೂ ಮಹಾ ವೇಶ್ಯೆಯೇ. ಕಾನೂನು ಬಲ್ಲವಳು. ಲಾಯರ್ ಇಹನು, ಡಾಕ್ಟರಿಹನು, ಹೆಣ್ಣುಗಳ ಪರೀಕ್ಷಿಸಿ ಮದ್ದನು ಕೊಟ್ಟು, ಪರಪುರುಷನೊಡನೆ ಸುಖ ಸಂಗಕ್ಕೆ ನೆರವೀಯುವವನು. ಮುಂಬೈನಲ್ಲಿ ಕೆಂಪುದೀಪದ ಸರ್ಕಲ್ ಎಂದೇ, ಪ್ರಖ್ಯಾತವಾದ ವೇಶ್ಯಾವಾಟಿಕೆ ಪುರಾತನವಾದುದು. ಕುಡಿತಕು, ಕುಣಿತಕು, ಮನರಂಜನೆಗೂ ಮೋಜುಮಾಡಲಿಕು, ಸುಖದ ತಾಣವದು. ವ್ಯವಹಾರಕೆ ಬಂದ ಪ್ರವಾಸಿಗರು. ಹೊಟೇಲ್‌ನಲ್ಲಿ ಮೊಕ್ಕಾಂಮಾಡಿ, ಕೆಲಸಕಾರ್ಯಗಳು ಮುಗಿದ ನಂತರ ಮೋಜಿಗಾಗಿ ಇಲ್ಲಿಗೆ ಬರುವರು? ಬಯಸಿದ ಹುಡುಗಿಯ ಬೆಲೆಯನು ತೆತ್ತೂ ಒಂದು ರಾತ್ರಿಯ ಅನುಭವ ಪಡೆದೂ ಹಿಂದಿರುಗುವರು. ವೇಶ್ಯಾವಾಟಿಕೆ ನಮ್ಮ ಸಮಾಜಕೆ ಕಪ್ಪು ಚುಕ್ಕೆಯು ? ವೇಶ್ಯಾವಾಟಿಕೆ ಹೆಣ್ಣಿನ ಭಾಗಕೆ ಸೆಂಟ್ರಲ್ ಜೈಲು. ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ? ತರುಣನೊ ಮುದುಕನೊ, ಸುಂದರನೊ ಕುರೂಪಿಯೊ, ರೋಗಿಯೋ, ಭೋಗಿಯೊ, ಶಯ್ಯಾಗಾರದಿ ಮಲಗಲೇ ಬೇಕು ? ದೈಹಿಕ ಸುಖವನ್ನೀಯಲೇಬೇಕು ? ಬಾಳೆಹಣ್ಣಿನ ತಿರುಳು ಹೋದ ಮೇಲೆ ಸಿಪ್ಪೆಯಾಗುವಂತೆ ಹಲವರ್ಷಕಾಲ ಯೌವನ ಸುಖವ, ನೂರಾರು ಜನರಲಿ ಹಂಚಿಕೊಂಡು ಸಿಪ್ಪೆಯಾದ ಮೇಲೆ ಯಾರೂ ಬಯಸದ ಈ ಹೆಣ್ಣನ್ನು ವೇಶ್ಯಾವಾಟಿಕೆ ಯಜಮಾನೀ ಹೊರಗೆ ದಬ್ಬುವಳು. ಇವಳೀಗಾ ಅನುಭವ ಪಡೆದಾವೇಶ್ಯೆಯಾಗಿಹಳು ? ತನ್ನದೇ ಆದ ವೇಶ್ಯಾವಾಟಿಕೆ ಬೇರೆಡೆ ಪ್ರಾರಂಭಿಸಿ, ಮಧ್ಯವರ್ತಿಗಳಾದ ದಳ್ಳಾಳಿಗಳಿಂದ ಯೌವನದೆಳೆಯಾ ಹೆಣ್ಣುಗಳ ಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜಾರೋಷಾಗಿ ವೇಶ್ಯಾವಾಟಿಕೆ ತಾನೆ ಪ್ರಾರಂಭಿಸುವಳು? ಪೋಲೀಸು, ಡಾಕ್ಟರು ಇವರಿಗೂ ಪರಿಚಯ – ದುಡ್ಡನ್ನು ಸುರಿದು ದುಡ್ಡು ಮಾಡುವಳು ?

ಬಡತನ

ಬಡತನವೆಂಬುದು ಭಾರತೀಯರಿಗೇ ಅತಿ ದೊಡ್ಡ ಶಾಪ ? ಗಂಡು ಹೆಣ್ಣು ಸಮಾನರು ಭಾರತೀಯ ನಿಲುವು ? ಸ್ವತಂತ್ರ ಬಂದಿದೆ ಹೇಗೆ ಬೇಕಾದರೂ ಬಾಳವೆನೆಂಬುದು ಹೆಣ್ಣಿನ ನಿಲುವು? ಉದ್ಯೋಗವಿಲ್ಲದಿರೆ, ಯೌವನ ಬಂದಿರೆ, ಹಣದಾಸೆಯಿದ್ದರೆ, ಬಡತನವಿದ್ದರೆ ಆಕರ್ಷಣೆಯಿದ್ದರೆ ದಳ್ಳಾಳಿಗೆ ಅನುಕೂಲ ? ಮಾತಾ ಪಿತೃಗಳಿಗೆ ಹಣದಾಸೆ ತೋರಿಸಿ, ಕೆಲಸ ಕೊಡಿಸುವ ನೆಪವನ್ನೊಡ್ಡಿ ಬಡಹೆಣ್ಣುಮಗಳನ್ನು ನಗರಕೆ ಕದ್ದೊಯ್ದು, ವೇಶ್ಯಾವಾಟಿಕೆಗೆ ಹಣಕೆ ಮಾರುವರು. ಮುಂದಿನ ವಿಷಯ ಪರದೆಯ ಮೇಲೆ ? ದಳ್ಳಾಳಿ ನಾಪತ್ತೆ, ಹುಡುಗಿಯು ನಾಪತ್ತೆ ? ಪೋಲೀಸ್ ಕಂಪ್ಲೇಂಟ್ ಕೊಟ್ಟು, ದಳ್ಳಾಳಿ ಪತ್ತೆಯಾಗಿ, ಹುಡುಗಿ ಪತ್ತೆಯಾಗಿ, ಕಾನೂನಿನಡಿಯಲ್ಲಿ, ಹಣವನು ತೆತ್ತು, ಹುಡುಗಿಯನ್ನು ಸ್ವಸ್ಥಾನಕ್ಕೆ ಸೇರಿಸುವ ಹೊತ್ತಿಗೆ, ಹೆಣ್ಣಿನ ಮಾನ ಹರಾಜಾಗಿರುವುದು? ಅವಳ ಭವಿಷ್ಯ ಹಗಲು ಗನಸೇ ? ಅವಳ ಜೀವನ ನರಕ ವಾಸವೇ ?

ಯೌವನ (ಪ್ರೀತಿ ಪ್ರೇಮ)

ಯೌವನವೆಂಬುದು ಹೆಣ್ಣಿಗೆ ಗಂಡಿಗೆ ಪರೀಕ್ಷೆ ಸಮಯ, ಒಮ್ಮೆ ಎಡವಿದರೆ ತಿದ್ದಿಕೊಳ್ಳುವುದು ಅತಿಕಷ್ಟವಲ್ಲವೇ ? ಭವಿಷ್ಯದ ಬಗ್ಗೆ ಚಿಂತನೆ ಮಾಡದೆ, ಪ್ರಣಯದ ಬಗ್ಗೆ ಚಿಂತಿಸಿದಾಗ, ಅನಾಹುತವೋ, ಅನುಕೂಲವೋ ಎರಡೂ ಅಸ್ಪಷ್ಟ? ಗಂಡಿಗಿಂತ ಹೆಣ್ಣಿನ ಪಾತ್ರ ಯೌವನದೆಸೆಯಲಿ ಅತಿಮುಖ್ಯ ? ಪ್ರೇಮ ಪ್ರೀತಿಗಳು ಕಣ್ಣಿನ ಮೂಲಕ ಆಕರ್ಷಿಸಿದಾಗ ಮನಸ್ಸು ಮೈಗಳು ಒಂದಾಗುವುವು ? ಮನಸು ಮೈಗಳು ಒಂದಾದಾಗ ಜಾತಿ ಭೇದಗಳು, ಸ್ಥಾನಮಾನಗಳು ಗಣನೆಗೆ ಬಾರವು ? ಮೇರೆಯ ಮೀರಿ ಪ್ರೀತಿಸುವರವರು ? ಒರ್ವರಿಗೋರ್ವರು ಹೃದಯ ಅರ್ಪಿಸುವರು ? ಹೆಣ್ಣು ಗಂಡುಗಳು ಒರ್ವರೊರ್ವರನು ಸಂಶಯದಿಂದ ಅಳೆದು ಸುರಿವರು ? ಮಾತು ನಡವಳಿಕೆ ಅನುಮಾನವಿಲ್ಲದಾಗ ಒರ್ವರೊರ್ವರನು ಅತಿಯಾಗಿ ಪ್ರೀತಿಸುವರು ? ಇವರ ಪ್ರೇಮ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಷ್ಕಲ್ಮಶ? ಮೂರನೆ ವ್ಯಕ್ತಿಯ ಪ್ರವೇಶವಿಲ್ಲದಿರೆ ಇವರ ಬಾಂಧವ್ಯವತಿಮಧುರ? ದೈವವಶಾತ್ ಈರ್ವರ ಪ್ರೇಮವು ಪ್ರಥಮ ವಾಗಿದ್ದರೆ ಅವರ ದಾಂಪತ್ಯವು ನಿರಾಯಾಸ? ಚಾಡಿಯ ಮಾತಿಗೆ ಮರುಳಾಗದಿದ್ದರೆ ಈರ್ವರ ದಾಂಪತ್ಯವತಿ ಸೊಗಸು? ಆದರೆ ಅದುವೇ ಹೆಣ್ಣಿನ ಗಂಡಿನ ಪೂರ್ವಾಶ್ರಮದಲಿ ಮತ್ತೊಂದು ಹೆಣ್ಣಿನ ಇಲ್ಲವೇ ಗಂಡಿನ ಸಹವಾಸವಿದ್ದು ಸಾಬೀತಾದರೆ ಮುಗಿಯಿತು ದಾಂಪತ್ಯ. ಈರ್ವರ ಪ್ರೇಮವು ಭಗ್ನವಾಗುವುದು? ಹೆಣ್ಣು ಅತಿ ಜಾಣೆ, ಸದಾ ಸ್ವಾರ್ಥಿ, ತನ್ನ ಸುಖವನ್ನು ಕಡೆಗಣಿಸುವವಳಲ್ಲ? ತನ್ನ ಗಂಡನು ಹೆಚ್ಚು ಹೆಚ್ಚಾಗಿ, ತನ್ನನ್ನು ಪ್ರೀತಿಸಲು ಮಾರ್ಗ ಹುಡುಕುವಳು? ತನ್ನ ಸೌಂದರ್ಯ, ತನ್ನ ನಡವಳಿಕೆ, ತನ್ನ ಅಲಂಕಾರ ಅವನಿಗೆ ಮೀಸಲೆಂದು ತೀರ್ಮಾನಿಸಿದರೆ ದಾಂಪತ್ಯ ಸುಖವು? ಈ ವಿಷಯದಲ್ಲಿ ಸಂಶಯ ಕೂಡದೆಂದು ಮುಚ್ಚು ಮರೆಯಿಲ್ಲದೆ ಆಕೆ ನಡೆದರೆ ಸುಖದಾಂಪತ್ಯವು? ತನ್ನ ಪತ್ನಿಯು, ತನಗಾಗಿ ಕಾಯ್ವಳೆಂದು ಗಂಡನಾದವನು, ನಂಬಿಕೆಯಿಟ್ಟರೆ ದಾಂಪತ್ಯ ಸುಖವು? ತನ್ನ ಪತಿಯು ತನ್ನ, ಪಾಲಿನದೇವರು, ತನ್ನನ್ನು ಬಿಟ್ಟು ಅನ್ಯರನ್ನು ಪ್ರೀತಿಸನು ಎಂಬ ಭಾವನೆ ಹೆಣ್ಣಲಿ ಬಂದರೆ ಸುಖದ ದಾಂಪತ್ಯವು? ಪ್ರೀತಿ ಪ್ರೇಮಗಳೆ ಮುಂದಿನ ಪೀಳಿಗೆಗೆ ಮಾರ್ಗದರ್ಶನವು? ಆದರ್ಶ ದಾಂಪತ್ಯವೆ ಇತರ ಸಂಸಾರಕೆ ಬಲು ಆದರ್ಶವು?

ಯೌವನ ಸ್ಥಿತಿಯಲಿ ಗಂಡು ಹೆಣ್ಣುಗಳು ಎಚ್ಚರವಿದ್ದರೆ ಅದುವೆ ಸನ್ಮಾನ್ಯ? ಯೌವನವೆಂಬುದು ವಿಚಿತ್ರ ಬಯಕೆ? ಪ್ರಕೃತಿ ನಿಯಮದಿಂದ ಯೌವನ ದೆಸೆಯಲಿ ಹೆಣ್ಣು ಗಂಡುಗಳು ವಿಚಿತ್ರ ಬಯಕೆಗೆ ಒಳಗಾಗುವುವು? ಅಂಗಾಂಗಗಳು ಮಾಗಿದ ಹಣ್ಣಿನಂತೆ ರಸಭರಿತವಾಗಿ ಪರಸ್ಪರ ಕಣ್ಣುಗಳನಾಕರ್ಷಿಸುವುವು? ಚಾಪಲ್ಯದಿಂದ ಮನಸ್ಸು ಕೆಡುವುದು? ನಿದ್ರೆ ಬಾರದು! ನಿದ್ರೆ ಬಂದರೂ ವಿಚಿತ್ರ ಕನಸು? ಯಾರೊಡನೆಯೂ ಚರ್ಚಿಸುವಂಥ ವಿಷಯವಿದಲ್ಲ! ತಂದೆ ತಾಯ್ಗಳಿಗೆ, ನೆಂಟರಿಷ್ಟರಿಗೆ, ಅಣ್ಣ ತಮ್ಮಂದಿರಿಗೆ, ಅಕ್ಕ ತಂಗಿಯರಿಗೆ ಹೇಳ್ವ ವಿಷಯವಲ್ಲ! ಅತ್ಯಂತ ಅಗಾಧ ಒಡನಾಡಿಯಿದ್ದರೆ, ಗುಪ್ತ ಸಂಭಾಷಣೆ ಮಾಡಲು ಸಾಧ್ಯ! ಕಣ್ಣಾಕರ್ಷಿಸಿತು, ಮನಸು ಕೆಟ್ಟಿತು, ಮೈ ಒದ್ದಾಡಿತು, ಯಾರಿಗೆ ಹೇಳಲು ಆಗದ ಸ್ಥಿತಿಯದು! ಒಡನಾಡಿಯಿಂದಲೆ ಮೈಗಳು ಹತ್ತಿರ, ಮನಸೂ ಹತ್ತಿರ. ಅದುವೇ "ಪ್ರೀತಿ ಪ್ರೇಮ"ಕೆ ನಾಂದಿ. ಮನಸ್ಸಿನಲ್ಲಿರುವುದು ನನಸಾದಾಗ ಗಂಡು ಹೆಣ್ಣುಗಳ ಹಿಡಿವವರಾರು? ಕದ್ದು ಸೇರುವರು? ಕದ್ದು ಮಾತಾಡುವರು? ಕೆಲವು ದಿನಗಳೂ ಹಿರಿಯರ ಭಯ, ಕೆಲವು ದಿನಗಳೂ ಸಮಾಜದ ಭಯ? ಮಧುರ ಬೆಸುಗೆಗೆ ಹಿರಿಯರ ಒಪ್ಪಿಗೆ ದೊರೆಯದಿದ್ದರೆ, ಸಮಾಜ ಕೂಡ ವಿರೋಧಿಸುವುದಾದರೆ, ಹೆಣ್ಣು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಂಡಿಗೆ ಮದುವೆಯ ವಯಸ್ಸು ಮೀರಿದ್ದರೆ, ಇದ್ದೇ ಇದೇ ಕಲ್ಯಾಣ ಇಲಾಖೆ. ಹೆಣ್ಣು - ಗಂಡುಗಳು ಒಂದಾಗುವುವು. ಸ್ವಜನ ಹಿರಿಯರೂ ಸುಮ್ಮನಾಗುವರು. ಸಮಾಜ ಕೂಡ ಕಾಣದಂತಿರುವುದು. ಪ್ರೀತಿಪ್ರೇಮಗಳು ಬೆಸುಗೆಯಾದರೆ ಸಂಸಾರವಾದರ್ಶ.

ವಿಚ್ಛೇದನ

ಅಕಸ್ಮಾತ್ ಏನಾದರು ಒಡಕು ಬಂದರೆ ಆಯಿತು ವಿಚ್ಛೇದನ ? ವಿಚ್ಛೇದನವು ನಮ್ಮ ಸಮಾಜದಿ ಗಂಡಿಗಿಂತ ಹೆಣ್ಣಿನ ಮೇಲೆ ಅತಿ ದುಷ್ಪರಿಣಾಮ ? ಸಾಲದುದಕ್ಕೆ ಒಂದೋ ಎರಡೋ ಮಕ್ಕಳಿದ್ದರೆ, ಆಕೆಯ ಭವಿಷ್ಯ ನರಕವಾಗುವುದು ? ಗಂಡೀಗ ವಿಧುರನು. ಅವನ ಬಾಳುವೆಯೂ ಅಸಮರ್ಪಕವೇ ? ಪುನರ್ವಿವಾಹ ಅಷ್ಟು ಸುಲಭವಲ್ಲ ! ಯಾರನು ಕೇಳಲಿ ಸಂಶಯ ಪಿಶಾಚಿ. ಪ್ರಥಮ ವಿವಾಹ ಎಷ್ಟು ಕಟ್ಟು ನಿಟ್ಟು? ಹೆಣ್ಣಿನ ಹಾಗೂ ಗಂಡಿನ ಕಡೆಯವರು ಅಳೆದೂ ಸುರಿದೂ ವ್ಯವಹಾರ ಕುದುರಿಸಿ ಗಂಡು ಹೆಣ್ಣುಗಳ ವಿವಾಹಮಂಟಪಕ್ಕೆ ಕರೆದುತರುವರು ? ಎರಡೂ ಕಡೆಯ ನೆಂಟರಿಷ್ಟರ ಮಧ್ಯೆ 'ವರ'ನೆಂಬ ಗಂಡು 'ಧರ್ಮೇಚ ಅರ್ಥೇಚ ಕಾಮೇಚ, ನಾತಿಚರಾಮಿ' ಎಂದು ಮಂತ್ರ ಪಠಿಸಿ, ವಧುವೆಂಬ ಕನ್ಯೆಯ ಕೈ ಹಿಡಿಯುವನು ಅಗ್ನಿ ಸಾಕ್ಷಾತ್ತಾಗಿ. ಈರ್ವರ ಪ್ರೇಮಕೆ ಅಗ್ನಿದೇವನು ಸಾಕ್ಷಿಯಾಗಿಹನು. ಆದರು ಬಂದಿತು ಕೆಲವುವರ್ಷಗಳಲಿ ಇವರಲಿ ವಿರಸ. ಮಾಂಗಲ್ಯ ಭಾಗ್ಯವ ಉಳಿಸಿಕೊಳ್ಳಲು ಈರ್ವರಿಗಾಗದೆ - ವಿಚ್ಛೇದನ ತೀರ್ಮಾನಕೆ ಕಾನೂನಿನಡಿಯಲ್ಲಿ ಬಂದರವರು. ಭಾರತೀಯ ಸಮಾಜಕೆ ವಿಚ್ಛೇದನವು ಒಂದು ಅನಿಷ್ಟ. ಜಾಗತೀಕರಣದ ಪ್ರಮುಖ ಸಮಸ್ಯೆಯು ವಿಚ್ಛೇದನವು ? ಪಾಶ್ಚಾತ್ಯರನುಕರಣೆ ಮಾಡುವಂತಹ, ಭಾರತ ರಾಷ್ಟ್ರದ ವಧೂವರರು, ವಿದ್ಯಾಬುದ್ಧಿಗಳ ಸಾಕಷ್ಟು ಕಲಿತು, ಗಂಡುಹೆಣ್ಣುಗಳು ಸಮಾಜದಲ್ಲಿ ಸರ್ವ ಸಮವೆಂಬ ತೀರ್ಮಾನಕೆ ಬಂದು, ಮನಸು ಒಗ್ಗದಾಗ ವಿಚ್ಛೇದನಕೆ ತಲೆಬಾಗುವರು. ವಿಚ್ಛೇದನಕೆ ಕಾರಣ, ಪತಿಪತ್ನಿಯರಲಿ ಸಾಮರಸ್ಯವಿಲ್ಲದುದು. ಅಪಾರ ವಿದ್ಯೆ ಅತ್ಯುತ್ತಮ ಉದ್ಯೋಗ, ಕೈತುಂಬ ಸಂಬಳ, ಗಂಡು ಹೆಣ್ಣುಗಳ ಸಾಮರಸ್ಯ ಕೆಡಿಪುದು. ಅನುಸರಣೆಯೆಂಬುದು ಈರ್ವರಿಗಿಲ್ಲದೆ ವಿಚ್ಛೇದನಕೆ ದಾರಿಯಾಗುವುದು. ಈರ್ವರಿಗೂ ಪ್ರೇಮದ ಕುರುಹಾಗಿ ಸಂತಾನವಿಲ್ಲದಿರೆ ಅದೊಂದು ಸಮಾಧಾನ ? ಒಂದು ವೇಳೆ ತಾರುಣ್ಯದೆಸೆಯಲಿ ಅತಿಕ್ಷಿಪ್ರದಲಿ ಸಂತಾನವಾಗಿ ವಿಚ್ಛೇದನವಾದರೆ ಮಗುವಿನ ಭವಿಷ್ಯ ಈರ್ವರ ಕಾಡುವುದು ? ಕಾನೂನಿನಡಿಯಲಿ ಮಾತೃವಿಗೇ ಸಂತಾನ ರಕ್ಷಣೆ ಪ್ರಥಮ ಕರ್ತವ್ಯವು ಆದರೂ ದಾಂಪತ್ಯ ವಿಚ್ಛೇದನವೆಂಬುದು ಸಮಾಜದಡಿಯಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಘೋರವು ? ಪುನರ್ವಿವಾಹವು ಈರ್ವರಿಗೆ ಕಷ್ಟವು ? ವಿವಾಹವಾದರೂ ನೆಮ್ಮದಿ ಸಿಗುವುದು ಅತಿ ದುರ್ಲಭವು ? ಸಮಾಜವಿವರನು ಸಂಶಯದೃಷ್ಟಿಲೆ ವೀಕ್ಷಿಸುತಿರುವುದು ? ಭಾರತೀಯ ಸಮಾಜದಿ ಉನ್ನತವರ್ಗದಿ, ಮಧ್ಯಮವರ್ಗದಿ, ವಿಚ್ಛೇದನವು ಸಾಮಾನ್ಯವಾಗಿದೆ ? ಕನಿಷ್ಟವರ್ಗದಲಿ ಈ ಭಯವಿಲ್ಲ. ಅಕಸ್ಮಾತ್ ಗಂಡನು ಕುಡುಕನಾದರೆ, ಹೆಂಡತಿ ಸರಿಯಿಲ್ಲದಿದ್ದರೆ ಹೇಗೋ ಏನೋ ಸಂಸಾರ ನಡೆವುದು ? ಕನಿಷ್ಟ ವರ್ಗದಲಿ ವಿಚ್ಛೇದನವೆಂಬುದು ಬಲು ಅಪರೂಪ ? ವಿದ್ಯಾವಂತರಾಗಿ, ಧನಕನಕಸೇರೆ ಅವರಿಗೊಂದು ಬಗೆ ಗಾಳಿ ಬೀಸುವುದೇನೋ ? ವಿವಾಹ ವಿಚ್ಛೇದನವೂ ಜಾಗತೀಕರಣದ ಪ್ರಮುಖ ಅಂಗವೆಂದು ನನ್ನ ಅನಿಸಿಕೆ ? ಸ್ವಾತಂತ್ರ್ಯ ಪೂರ್ವದಲಿ ವಿದ್ಯಾವಂತರು ಕಡಿಮೆಯಾಗಿದ್ದು ಬುದ್ಧಿವಂತರು ಅಪಾರವಾಗಿದ್ದರು. ಸಮಾಜದಲ್ಲಿ ಬುದ್ಧಿ ಹೇಳುವಾ ಹಿರಿಯರಿದ್ದರು. ಅವರ ಮಾತಿಗೆ ಬೆಲೆಯೂ ಇದ್ದಿತು ? ಈಗ ಅಂತಲ್ಲ, ಹಿರಿಯರಿಗೇ ವಿವೇಕ ಬೋಧಿಸುವ ಯುವ ಜನರಿರುವರು. ''ಮಹಾಪ್ರಾಜ್ಞರು''-ಹೆಣ್ಣು ಮಕ್ಕಳು ಪುರುಷವರ್ಗ, ಎಲ್ಲಾ ವಿಷಯದಲಿ ಸರಿಸಮಾನರು. ಸ್ತ್ರೀಯರ ಪ್ರಧಾನ ಸಮಾಜ ವಿಂದು ? ಪುರುಷನು ತಪ್ಪನು ಮಾಡಲಿ, ಮಾಡದಿರಲಿ ಸ್ತ್ರೀಯ ಅಹವಾಲು ಸ್ವೀಕರಿಸುವಂತಹ ಪರಿಸ್ಥಿತಿಯೊದಗಿದೆ. ವಿದ್ಯೆ, ಉದ್ಯೋಗ, ಸಾಮರ್ಥ್ಯ, ಸಂಪಾದನೆ, ಸ್ತ್ರೀ ಅಬಲೆಯಲ್ಲ. ಪತಿ ಪತ್ನಿಯರಿಗೆ ಅತ್ಯವಶ್ಯಕ ಸಹನೆಯೆಂಬುದು. ಯಾವುದೊ ಕಾರಣದಿ ಸಹನೆ ಮೀರಿದರೆ ವಾಗ್ಯುದ್ಧ, ಅಶಾಂತಿ, ರಣರಂಗ, ಅದುವೇ ಮುಂದಕೆ ವಿಚ್ಛೇದನಕೆ ದಾರಿಯಾಗುವುದು. ವಿವಾಹ ನಂತರ ಪ್ರೀತಿಯೆಂಬುದು ಅಂದಿನ ಯುಗವು, ಪ್ರೀತಿಯ ನಂತರ ಒಬ್ಬರನೊಬ್ಬರು ಅರ್ಥೈಸಿಕೊಂಡರೆ ವಿವಾಹವೆಂಬುದು ಇಂದಿನ ಯುಗವು. ಪತಿಪತ್ನಿಯರಲಿ ದೈವಭಕ್ತಿ, ಗುರುಭಕ್ತಿ, ಮಾತೃಪ್ರೇಮ, ಪಿತೃಪ್ರೇಮ, ಎಲ್ಲರಿಗಿಂತ ಮಕ್ಕಳ ಪ್ರೇಮ ಅಮಿತವಾಗಿದ್ದರೆ ವಿಚ್ಛೇದನವೆಂಬ ಪದ ಸುಳಿಯಲಾರದು. ಗಂಡು ಹೆಣ್ಣುಗಳು ಒಂದೇ ಜಾಗದಲಿ ಕೆಲಸಮಾಡುವಾಗ ವ್ಯಕ್ತಿಯ ಪರಿಚಯ ಒಬ್ಬರನೊಬ್ಬರು ಅತ್ಯಂತ ಪ್ರೀತಿಸಿ ಒಬ್ಬರನೊಬ್ಬರು ಅರ್ಥೈಸಿಕೊಂಡು ವಿವಾಹವಾದರೆ ವಿಚ್ಛೇದನವು ಮನದಲಿ ಬಾರದು? ಪರಿಚಯವಿಲ್ಲದೆ ವಿದ್ಯೆ, ಉದ್ಯೋಗ, ಸ್ಥಾನಮಾನದಿಂದ ವಿವಾಹನಿಶ್ಚೈಸಿ ಒಬ್ಬರನೊಬ್ಬರು ಅರ್ಥಮಾಡಿಕೊಳ್ಳದೆ ಹೆಣಗುತಲಿದ್ದರೆ ವಿಚ್ಛೇದನವು ಅನಿವಾರ್ಯ ವೇನೋ ?

ಪುಟ್ಟ ಸಂಸಾರಕೆ ದುಡಿಮೆ ಇರಲೀ, ಇಲ್ಲದಿರಲೀ, ಉದ್ಯೋಗವಿರಲೀ, ಇಲ್ಲದಿರಲೀ, ವ್ಯಾಪಾರಮಾಡಲಿ, ವ್ಯವಸಾಯ ಮಾಡಲಿ, ನ್ಯಾಯ ಸಂಪಾದನೆಗಿಂತ, ಅಧಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಸ್ತಿಯು ಕಾನೂನು ದೃಷ್ಟಿಯಲಿ ಅಧಿಕವಾದರೆ, ಅನ್ಯಾಯದ ಆಸ್ತಿಯು ಸರ್ಕಾರದ್ದೆಂದು ಕಾನೂನು ಮಾಡಿದರೆ, ದುರಾಲೋಚನೆಯು ಜನತೆಗೆ ಸಾಧ್ಯವಿಲ್ಲ? ಅವರವರ ವಿದ್ಯೆ, ಅವರವರ ಅಂತಸ್ತು, ಅವರವರ ಭೋಗವಿಲಾಸಗಳಿಗೆ, ಅಡ್ಡಿಯಿಲ್ಲದ ಕಾನೂನು ಬಂದರೆ ದುರಾಸೆ ಇರದು, ರಾಷ್ಟ್ರಕ್ಕೆ ಹಿತವು ? ಕನಿಷ್ಠ, ಮಧ್ಯಮ, ಉನ್ನತವರ್ಗವ ತಪ್ಪಿಸಲಾಗದು, ಆದರೂ ಅವರಿಗೆ ವಿದ್ಯೆ, ಉದ್ಯೋಗ, ಸಂಪಾದನೆ, ಬಟ್ಟೆ ಬರೆ, ವಾಸಕ್ಕೊಂದು ಮನೆ, ಎರಡು ಹೊತ್ತು ಊಟಕೆ, ಕಾನೂನು ಮಾಡಿದರೆ ಸಮತಾವಾದವ ಸಮರ್ಥಿಸಬಹುದೇನೋ ? ಭ್ರಷ್ಟಾಚಾರಕೆ ಕಾನೂನು ರೀತ್ಯಾ ಮರಣ ದಂಡನೆಗೆ ಹಾಗಿಲ್ಲವಾದರೆ ಅತಿದೊಡ್ಡ ಶಿಕ್ಷೆಗೆ ಕಾನೂನು ಮಾಡಿದರೆ ರಾಷ್ಟ್ರ ಉಳಿಯುವುದು ? ಇಂದಿನ ಕಾನೂನಲಿ ಭ್ರಷ್ಟಾಚಾರಿಯು ತಪ್ಪಿಸಿಕೊಳ್ಳಲೂ ಕಾಲ ತಳ್ಳಲೂ ಅವಕಾಶವಿದೆಯೇನೋ ? ಉಗ್ರರಿಗೆ ಕೊಡುವ ಶಿಕ್ಷೆ ಭ್ರಷ್ಟಾಚಾರಿಗೂ ಕೊಡವಂತಾದರೆ, ಭಯಬರುವುದೇನೊ ? ಉಗ್ರರಿಂದ ಪ್ರಾಣಹಾನಿ, ಪ್ರಕೃತಿಹಾನಿ ! ಭ್ರಷ್ಟಾಚಾರಿಯಿಂದ ಖಜಾನೆಗೆ ಹಾನಿ, ಸಮಾಜಕ್ಕೆ ಹಾನಿ ! ಉಗ್ರರಾದವರು ಬೆಳಸಿದ ರಾಷ್ಟ್ರವ ನಾಶಮಾಡುವರು? ಭ್ರಷ್ಟಾಚಾರಿಗಳು ಬೆಳೆಯುವ ರಾಷ್ಟ್ರಕೆ ಮುಳ್ಳಾಗಿಹರು ? ಸಮಾಜವನ್ನು ಶೋಷಣೆ ಮಾಡುವ, ಸಮಾಜಕ್ಕೆ ಮಾರಕವಾಗುವ ಯಾವ ವ್ಯಕ್ತಿಯೂ ಕ್ರಿಮಿನಲ್ ಅಪರಾಧಿ. ಆ ಶಿಕ್ಷೆ ಕೊಡಲು ಹತ್ತರಿಂದ ಹನ್ನೆರಡುವರ್ಷಬೇಕೇ ಬೇಕೇ? ಭಾರತರಾಷ್ಟ್ರದಲ್ಲಿ ಎಂತೆಂತಹಾ ಬುದ್ಧಿವಂತರಿರುವರು ? ಕಾನೂನಿನ ಸಲಹೆಗೆ ನಿಷ್ಣಾತರಿರುವರು. ವಿಶೇಷ ನ್ಯಾಯಾಲಯದಿ ಅತಿ ಶೀಘ್ರ ಮೊಕದ್ದಮೆಯ ವಿಲೇವಾರಿಗೆ ಸಾಧ್ಯವಿಲ್ಲವೇ ? ಶ್ರೀರಾಮಚಂದ್ರನು ಘಂಟಾನಾದ ಕೇಳಿ ಮಾರನೆಯ ದಿನವೇ ಬುದ್ಧಿವಂತರಾದ ಸಚಿನರೊಡನೆ ವಿಷಯವ ಚರ್ಚಿಸಿ, ಸಭಿಕರ ಮಧ್ಯೆ ಅಹವಾಲು ಸ್ವೀಕರಿಸಿ, ಧರ್ಮಸಮ್ಮತವಾದ ತೀರ್ಪೀಯುತ್ತಿದ್ದನು. ಆದರೆ ನೋಡಿ ರಾಮರಾಜ್ಯವಿದು, ನಮ್ಮ ಮೊಕದ್ದಮೆ ತೀರ್ಪನು ನೀಡಲು ವರ್ಷಗಟ್ಟಲೆ ನ್ಯಾಯಾಸ್ಥಾನಕೆ ತಿರುಗಲೇಬೇಕು. ಲೋಕಾಯುಕ್ತರು ಸಾಕ್ಷ್ಯಾಧಾರದಿ ಕೋರ್ಟಿಗೊಪ್ಪಿಸಿದ ಮೊಕದ್ದಮೆಯಿದ್ದು, ಮೇಲ್ನೋಟಕ್ಕೇ ನೈಜ ದುಡಿಮೆಗಿಂತ, ಹೆಚ್ಚು ಆಸ್ತಿಯನು, ಹೆಚ್ಚು ಹಣವನ್ನು ಭ್ರಷ್ಟಾಚಾರಿ ಶೇಖರಿಸಿರಲು ಪ್ರಮುಖ ದಾಖಲೆಯಿದೆ. ಆಸ್ತಿ, ನಗದು, ಷೇರ್ ಸರ್ಟಿಫಿಕೇಟ್, ನಗನಾಣ್ಯ ದಾಖಲೆ ಪತ್ರಗಳು ಅವನ ಹಾಗೂ ಸಂಸಾರದ ಹೆಸರಿನಲ್ಲಿವೆ. ನೆಂಟರಿಷ್ಟರ ಹೆಸರಿನಲ್ಲಿ ಮಾಡಿದ ಆಸ್ತಿಗೆ ಸಾಕ್ಷ್ಯ ಪುರಾವೆ ಬೇಕೇಬೇಕು. ಇದರ ತೀರ್ಪಿಗೆ ವರ್ಷಗಳು ಉರುಳುವುವು ? ನ್ಯಾಯಾಸ್ಥಾನದಲಿ ಇಷ್ಟು ವಿಳಂಬಕೆ ಕಾರಣವೇನು ? ಇದ ಸರಿಪಡಿಸಲು ಕಾನೂನು ಬಲವರಿಗೆ ಅಸಾಧ್ಯವೇ ಇದು ? ಕೋಟಿಕೋಟಿ ಕಪ್ಪುಹಣವೂ,

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಟಿ ಕೋಟಿ ಕಳ್ಳ ಆಸ್ತಿಯೂ ಸರ್ಕಾರದಾವಶದಲ್ಲಿದ್ದು - ತೀರ್ಪಿಗಾಗಿ ಕಾಯಲೂ ವರುಷಗಳುರುಳುವುವು. ಇದಾವ ನ್ಯಾಯ? ರಾಜತಾಂತ್ರಿಕ ಬುದ್ಧಿವಂತರು ಭಾರತ ರಾಷ್ಟ್ರದಿ ದೊರೆಯಲು ಕೊರತೆಯೆ? ಭ್ರಷ್ಟಾಚಾರವೆಂಬ ಅನಿಷ್ಟ ನಿರ್ಮೂಲನೆಗೆ, ವರ್ಷಗಟ್ಟಲೆ ಕಾಯಬೇಕೇ? ಭಗವಂತನ ಸೃಷ್ಟಿಲಿ ಎಲ್ಲರೂ ಬದುಕಲು ಅವಕಾಶವಿದೆ. ನ್ಯಾಯ ಮಾರ್ಗದಲಿ ಬದುಕು ಸಾಗಿಸಲು ನಾವೇ ಸೃಷ್ಟಿಸಿದ ಸಮಾಜದಲ್ಲಿನ ನೀತಿ ನಿಯಮಗಳು ಲೆಕ್ಕವಿಲ್ಲದಷ್ಟಿವೆ? ನ್ಯಾಯಾನ್ಯಾಯಗಳು, ಸತ್ಯಾಸತ್ಯಗಳು, ಧರ್ಮಾ ಧರ್ಮಗಳು ಬೆರೆತುಕೊಂಡೇ ಸಮಾಜವಿರುವುದು? ಸಮಾಜದಲ್ಲಿನ ಹೊಲಸು ನಿವಾರಿಸಿ ರಕ್ಷಣೆ ಕೊಡಲು ಪ್ರಜಾಸರ್ಕಾರ? ಸರ್ಕಾರಕೂಡಾ ತಪ್ಪುಮಾಡಬಹುದು. ಸರ್ಕಾರ ಹಾಗೂ ಸಮಾಜದಲ್ಲಿನ ಹೊಲಸು ನಿವಾರಣೆ ನ್ಯಾಯಾಲಯದ್ದು? ಕಾರ್ಯಾಂಗ. ಶಾಸಕಾಂಗ ವ್ಯಾಪ್ತಿಯಿಂದ, ಸ್ವತಂತ್ರವಾಗಿರುವುದೆ ನ್ಯಾಯಾಂಗವೆನ್ನುವುದು. ನ್ಯಾಯಾಂಗ ವೆನ್ನುವುದು ಕಾರ್ಯಾಂಗ, ಶಾಸಕಾಂಗಗಳ ಪ್ರಭಾವಕ್ಕೆ ಒಳಪಟ್ಟುದಲ್ಲ? ನ್ಯಾಯಾಂಗ ವೆನ್ನುವುದೇ ರಾಷ್ಟ್ರರಕ್ಷಣೆಗಾಗಿ, ನಿರ್ಮಿತವಾದ, ಪ್ರತ್ಯೇಕ ಅಂಗ ಸಂಸ್ಥೆ. 'ನ್ಯಾಯಾಂಗ' ವೆಂಬುದು ಕಾರ್ಯಾಂಗ ಶಾಸಕಾಂಗ ಕೃಪಾಪೋಷಿತ, ಅಂಗವಾದರೆ ಸಮಾಜಕ್ಕೇ ಅಮಿತ ತೊಂದರೆ, ನ್ಯಾಯಾಂಗ ವಿಭಾಗಕ್ಕೆ ಯಾರ ಶಿಫಾರಸು ಅನಗತ್ಯವಲ್ಲವೇ? ಇದುವೇ ನಮ್ಮಯ ಪ್ರಜಾಸರ್ಕಾರ?

Sri Vidyabharathi Book Centre, Sringeri

CC-O. In Public Domain. Digitized by eGangotri

ಓದುಗರಲ್ಲಿ ಸವಿನಯ ಪ್ರಾರ್ಥನೆ :

ಹಿರಿಯ ನಾಗರೀಕನ ಅನುಭವಸಾರವಿದು. ಮೂರು ತಲೆಮಾರಲಿ ನಾ ಕಂಡ ಸತ್ಯವನು ನಿವೇದಿಸಿರುವೆನು. 'ಲಾವಣಿ' ರೂಪದಲಿ - ಹಿಂದಿನ ಬರೆಹ ಸತ್ಯವಂತರಿಗಿದು ಕಾಲವಲ್ಲಾ - ಭಾರತೀಯರಿಗೆ ದಾರಿದೀಪ (ಯುವಕರಿಗೆ ಮಾರ್ಗದರ್ಶಿ) ನಿಮ್ಮ ಕೈ ಸೇರಿದೆ. ಭಾರತರಾಷ್ಟ್ರಕ್ಕೆ (ಭಾರತಕಥನ) ಸಂಬಂಧಿಸಿದ ಮೂರನೇ ಹೊತ್ತಗೆ ಇದುವೇ ಆಗಿದೆ. ಹಿರಿಯನು ಬರೆದ ಕಂತೆ ಪುರಾಣವೆಂದು ಉದಾಸೀನ ಮಾಡದೆ ಓದಿ ಉತ್ತರಿಸಿದರೆ ನಾನು ಧನ್ಯ. ಇಂದಿನ ಭಾರತದ ಸತ್ಯಕಥೆಯನು ವಿವರಿಸಿಹೆನಿಲ್ಲಿ. ವೈಯಕ್ತಿಕ ದ್ವೇಷದಿಂದ ಬರೆದ ಕಥೆಯಲ್ಲ, ಪ್ರಕೃತಿಯಿದ್ದರೆ ನಮ್ಮಯ ಬದುಕು ? ರೈತನಿದ್ದರೇ, ವ್ಯವಸಾಯ, ಪಶುಪಾಲನೆ ? ಏನೂ ಅರಿಯದ ಮುಗ್ಧರೈತ, ವ್ಯವಹಾರಕ್ಕಿಳಿದ - ಹಣದ ಆಸೆಯು ಅವನಿಗೂ ಬಂದಿತು. ಮಧ್ಯವರ್ತಿಗಳು, ಸರ್ಕಾರೀ ಅಧಿಕಾರಿಗಳು, ರಾಜಕೀಯ ಪಟುಗಳು ಅವನನ್ನು ವಂಚಿಸಿ ರಾಷ್ಟ್ರವು ಇಂತಹ ದುಸ್ಥಿತಿಗೆ ಬಂದಿದೆ. ಪ್ರಜಾಸರ್ಕಾರದ ನೈಜ ಧ್ಯೇಯಗಳು ಪ್ರಜೆಗಳಿಗೆ ದೊರೆಯದೆ, ಸ್ವಾರ್ಥಿಗಳ ದೆಸೆಯಿಂದ ಇಡೀ ರಾಷ್ಟ್ರವೇ ಅಲ್ಲೋಲಕಲ್ಲೋಲ ? ಇದು ರಾಮರಾಜ್ಯವೇ ? ರಾವಣರಾಜ್ಯವೇ ? ನೀವೇ ತೀರ್ಮಾನಿಸಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದು ಒಂದು ಕಲ್ಪನಾ ಜಾನಪದ ಲಾವಣಿ

ಲೋಕಾಯುಕ್ತರೆಂಬೊ ಪ್ರಚಂಡ ಮಾರುತ

ಅತಿ ಆಸೆ - ಗತಿಗೇಡು

ರಾಗ - ಶುದ್ಧಧನ್ಯಾಸಿ ಆದಿತಾಳ

ಪಲ್ಲವಿ: ಹಣಾ! ಹಣಾ! ಹಣಾ! ಹಣಾ!
ಎಲ್ಲಿಂದ ಬಂದಿತು ಅಷ್ಟುಹಣಾ ?
ಏನು ಮಾಡುವಿರಿ - ಅಷ್ಟೂಹಣಾ ?
ಯಾರಿಗಾಗೀ - ಅಷ್ಟುಹಣಾ ?
ಬಿಟ್ಟುಹೋಗುವಿರಿ - ಅಷ್ಟೂಹಣಾ!

(ಹಿನ್ನೆಲೆ) ಗದ್ಯ:

ಭ್ರಷ್ಟಾಚಾರದಿಂದ ಅಷ್ಟುಹಣ, ಅಷ್ಟು ಆಸ್ತಿ ಸಂಪಾದಿಸಿದ್ದಾಯ್ತು. ತಾತನೋಡಿದರೆ ಕಡು ಬಡವ - ಒಪ್ಪೊತ್ತಿಗಿದ್ದರೆ ಒಪ್ಪೊತ್ತಿಗಿಲ್ಲ. ತಂದೆ ನೋಡಿದರೆ ಅವಿದ್ಯಾವಂತ, ಆದರೂ ಅವನಿಗೆ ಸರ್ಕಾರಿ ಉದ್ಯೋಗ - ಆರು ಮಕ್ಕಳು - ನಾಲ್ವರು ಗಂಡು ಮಕ್ಕಳು, ಈರ್ವರು ಹೆಣ್ಣು ಮಕ್ಕಳು - ಮೂರು ವರುಷಕೊಮ್ಮೆ ಬೇರೆ ಬೇರೆ ಸ್ಥಳಕ್ಕೆ ವರ್ಗಾವಣೆ. ಹೋದಕಡೆಯಲ್ಲೆಲ್ಲಾ ಸಂಸಾರ ಸಮೇತ ಪ್ರಯಾಣ. ಬಡತನದ ಬೇಗೆ ಬರುವ ಸಂಬಳ ಸಾಲದು - ಆದರೂ ನಿಸ್ಪೃಹ. ಭ್ರಷ್ಟಾಚಾರಿಯಾಗಲೇ ಇಲ್ಲ. ''ಸರ್ಕಾರೀ ಕೆಲಸ ದೇವರ ಕೆಲಸ''ವವನಿಗೆ. ಗ್ರಾಮದಲ್ಲಿ ಅತ್ಯಂತ ಹಳೆಯ ಮನೆಯೇ ಅವನ ಆಸ್ತಿ. ಹೆಣ್ಣು ಮಕ್ಕಳ ವಿವಾಹಕ್ಕಾಗಿ, ಗಂಡು ಮಕ್ಕಳ ವಿದ್ಯೆಗಾಗಿ, ಇದ್ದ ಭೂಮಿ ಮಾರಿ, ಮೂವರು ಗಂಡು ಮಕ್ಕಳಿಗೆ ಸಾಕಷ್ಟು ವಿದ್ಯಾದಾನ ಮಾಡಿ, ಅವರೆಲ್ಲರಿಗೂ ಸರ್ಕಾರದಲ್ಲಿ ಉತ್ತಮ ಉದ್ಯೋಗ. ಕಿರಿಯವನು - ದಡ್ಡ - ವಿದ್ಯೆ ಇಲ್ಲದವ ಆದರೂ ಅವನು ಸಮಾಜ ಸೇವಕ - ಪತ್ನಿ ಹಾಗೂ ಈ ಪುತ್ರನೊಡನೆ ಹಳ್ಳಿಯ ಮುರುಕಲುಮನೆಯಲ್ಲೇ ವಾಸ. ವಿದ್ಯಾವಂತ ದುಡಿಮೆಯ ಮೂರು ಮಕ್ಕಳಿಂದ ಅಂತಹ ಸಹಕಾರವಿಲ್ಲ. ಕಿರಿಯ ತಮ್ಮನು ದಡ್ಡನೆಂದೂ, ಗಮಾರನೆಂದೂ ಅಸಹಕಾರ ಅಣ್ಣಂದಿರಿಂದ. ಮಾತಾಪಿತೃಗಳಿಗೆ ಇವನದೇ ಚಿಂತೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ : ಶುದ್ಧ ಧನ್ಯಾಸಿ

ಪಲ್ಲವಿ : ಹಣಾ ! ಹಣಾ ! ...... (ಪುನರುಕ್ತಿ) ...... ಬಿಟ್ಟು ಹೋಗುವಿರಿ ಅಷ್ಟೂ ಹಣಾ !

(ಪದ್ಯ ಮುಂದುವರಿಯುವುದು)

ನಿಮ್ಮಯ ತಾತ – ಅತ್ಯಂತ ಬಡವಾ ! ಅಹನ್ಯಹನಿ – ಆತನ ಜೀವನ !
ನಿಮ್ಮಯ ತಂದೆಯು ಸರ್ಕಾರಿ ಕಾರಕೂನ ! ಕರ್ತವ್ಯವೆಂಬುದು – ದೇವರು ಅವನಿಗೆ

ಆರು ಮಕ್ಕಳನು – ಸಾಕಿದನವನು ! ಹೊಟ್ಟೆ ಬಟ್ಟೆ ಕಟ್ಟಿ ಮಕ್ಕಳನ್ನೋದಿಸಿದ !

ಭ್ರಷ್ಟಾಚಾರಿಯು – ಆಗಲೇ ಇಲ್ಲ! ಸರ್ಕಾರಿ – ಕೆಲಸ ದೇವರ ಕೆಲಸ – ಆತನ ಪಾಲಿಗೆ !

ಹೋದ ಊರಿನಲಿ – ಬಾಡಿಗೆ ಮನೆಯೆ – ಆತನ ವಾಸಾ

ಮೂರು ವರುಷಕೊಮ್ಮೆ ಬೇರೆ ಊರಿಗೆ – ವರ್ಗವಾಗುವುದು ! ಬಾಡಿಗೆ ಮನೆಯೇ ಗಟ್ಟಿಯವನಿಗೆ !

ಆದರು ಹೇಗೋ – ನಿಭಾಯಿಸಿದ – ಮಕ್ಕಳ ಭವಿಷ್ಯಕೆ – ಹಳ್ಳಿಯ ಭೂಮಿಕಾಣಿ ಮಾರಿಕೊಂಡ। ಇರುವುದೊಂದು – ತಾತನ ಕಾಲದ ಮುರುಕುಮನೆಯನ್ನು – ಉಳಿಸಿಕೊಂಡನವ।

ಮಕ್ಕಳ ಬಟ್ಟೆ – ಮನೆಯ ಬಾಡಿಗೆ ದವಸಧಾನ್ಯಗಳು – ಶಾಲಾಕಾಲೇಜ್ ಫೀಸೂ – ಹೆಣ್ಣುಮಕ್ಕಳ ಮದುವೆ – ಎಲ್ಲವೂ ಆದರಲೆ.

ಹಣದ ಅಭಾವ ! ಮನಕೆ ಕಿರಿಕಿರಿ। ಸಾಲ ಮಾಡಿ ಸಂ। ಸಾರನಿರ್ವಹಿಸಿದ। ಆದರೂ ಅವನು। ಭ್ರಷ್ಟಾಚಾರೀ। ಯಾಗಲೇ ಇಲ್ಲ! ಪಾಪದ ಹಣಕೆ। ಕೈ ಚಾಚಲಿಲ್ಲ॥

ನಿವೃತ್ತನಾದಾಗ। ಬಂದ ಹಣದೀ। ಸಾಲ ತೀರಿಸಿ। ಹಳ್ಳಿಯ ಹಳೆ ಮನೆ। ರಿಪೇರಿ ಮಾಡೀ। ಮೂವರು ತನಯರ। ವಿವಾಹ ಮುಗಿಸಿದ। ಆದುವೇ ಅವನಿಗೆ। ಜೀವನದ ತೃಪ್ತಿ ॥

ಬರುವ ಪಿಂಚಣಿಯಲಿ। ಕಿರಿಯ ಮಗನೊಡನೆ – ಹೆಂಡತಿಯೊಡನೆ। ಹಳ್ಳಿಯವಾಸಾ। ಆರಂಭಿಸಿದ ॥

ಸಂಸಾರದೊಡನೆ ಮನೆ ದೇವರಿಗೆ – ಹರಕೆ – ಪೂರೈಸಿ – ತೃಪ್ತಿ ಪಟ್ಟನವ।

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂವರು ತನಯರು – ವಿದ್ಯಾವಂತರು – ಓರ್ವನು ಡಾಕ್ಟರ್ – ಓರ್ವನು ಇಂಜಿನಿಯರ್ – ಮತ್ತೋರ್ವ ಪೋಲೀಸ್ ಅಧಿಕಾರಿಯಾದ ॥

ಉಳಿದವ – ಕಡೆಯವ – ವಿದ್ಯೆ ಅಂಟದೆ – ಹಳ್ಳಿಯೊಳಗೇ – ಪುಡಾರಿಯಾದ ॥

ಬುದ್ಧಿವಾದ :

ಪದ್ಯ: ತಂದೆಯಾದವನು – ಮಕ್ಕಳ ಕರೆದು ಮುಂದೆ ಕೂರಿಸಿಕೊಂಡು ಬುದ್ಧಿ ಹೇಳಿದ ।

ನನ್ನಂತೆ ನಿಮಗೆ – ಸರ್ಕಾರಿ ಕೆಲಸ. ''ಸರ್ಕಾರಿ ಕೆಲಸ – ದೇವರ ಕೆಲಸ'' ।
ದೈವಭಕ್ತಿತುಂಬಿರಲೀ ನಿಮಗೆ, ಮರೆಯದಿರಿ ನೀವು – ನಿಮ್ಮ ಶ್ರಮದಿಂದ ವಿದ್ಯೆ – ಉದ್ಯೋಗ । ನಿಮ್ಮ ವೃತ್ತಿಯು – ಜನಸೇವೆಗಾಗಿ – ಮೀಸಲಾಗಿರಲಿ ।

ಭ್ರಷ್ಟಾಚಾರಕೆ ಕೈ ಹಾಕದೇ – ನಿಮ್ಮ ಸಂಬಳ ನಂಬಿ – ಬಾಳಿರಿ ನೀವು । ನಮ್ಮ ಕಾಲಕ್ಕಿಂತ ನಿಮ್ಮ ಕಾಲವು ಉತ್ತಮವಾಗಿದೆ – ನೀವೆಲ್ಲ ಉತ್ತಮ ಉದ್ಯೋಗದಲಿರುವಿರಿ ।

ನಿಮ್ಮ ಪತ್ನಿಯರು – ವಿದ್ಯಾವತಿಯರು – ಉದ್ಯೋಗದಲ್ಲಿಹರು – ಸಂತಸನಮಗೆ ।
ನಿಮ್ಮ ದುಡಿಮೆಯು – ನಿಮಗೆ ಸಾಕಲ್ಲವೇ ? ಕೂಡಿಹಾಕಲೂ – ಸಾಧ್ಯವಾಗುವುದು ।

ನೀವು ಮೂವರೂ – ಗಟ್ಟಿಯಾಗಿರುವಿರಿ । ನಾಲ್ಕನೆಯವನು – ಅವಿದ್ಯಾವಂತ ।

ಏನೋ ಹೊಲಸು, ರಾಜಕೀಯ ಮಾಡುವ । ಆತನ ರಕ್ಷಣೆ ನಿಮ್ಮದಾಗಿದೆ ॥

ನಿಮ್ಮ ವಿದ್ಯೆಗಾಗಿ – ಹೊಲಗದ್ದೆ ಮಾರಿದೆ – ಈಗಿರುವುದೊಂದು ಮುರುಕಲು ಮನೆಯು ।

ನನ್ನ ಪಿಂಚಣಿಯು – ನಮ್ಮಯ ಬದುಕಿಗೆ – ಹೆಚ್ಚೂ ಕಮ್ಮಿ – ಸಾಕಾಗುವುದು ।

ಒಳ್ಳೆಯ ರೀತಿಲಿ – ಸಂಪಾದನೆ ಮಾಡಿ, ಸಾಲ ಸೋಲ ಮಾಡದೆ, ಭ್ರಷ್ಟಾಚಾರಿಗಳಾಗದೆ ಬದುಕಿರಿ ನೀವು'' ಎಂದಾಶೀರ್ವದಿಸಿ – ಮಕ್ಕಳ ಬೀಳ್ಕೊಟ್ಟ

ಅಸಹನೆ :

ತಮ್ಮನ ಕಂಡರೆ – ಅಣ್ಣಂದಿರಿಗೆ – ಅತ್ಯಂತ ಅಸಹ್ಯ । ಅವನ ಜವಾಬ್ದಾರಿ ತಂದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ವಹಿಸಿದರು । ಪೋಲಿಯು ಅವನೆಂದು ತಾತ್ಸಾರವಿವರಿಗೆ । ಮೂವರು ತನಯರು - ಬಡ್ತಿ ಪಡೆಯುತ ಭ್ರಷ್ಟಾಚಾರ ಹಣದೀ - ಮನೆಯ ಕಟ್ಟಿದರು - ದೊಡ್ಡ ಪಟ್ಟಣದಿ ॥ ಸೈಟು, ಬಂಗ್ಲೆಗಳು ಲೆಕ್ಕವಿಲ್ಲದಷ್ಟು। ಕಪ್ಪು ಹಣವೂ - ಎಣಿಕೆಗೆ ಸಿಗದು । ಬ್ಯಾಂಕ್ ಲಾಕರಿನಲಿ - ಆಭರಣವೆಷ್ಟೋ? ಎಲ್ಲವೂ ಗುಟ್ಟು। ತಂದೆ ತಾಯಿಗಳ - ಕರೆಸಿಕೊಂಡರು । ನಾಲ್ಕನೆಯವನಿಗೆ - ಆಮಂತ್ರಣವಿಲ್ಲ॥ ಸ್ವಾಭಿಮಾನಿಯವ ಬರಲೇ ಇಲ್ಲ॥

ವಿದ್ಯೆ ಇಲ್ಲದಿರೆ ಬುದ್ಧಿವಂತನವ :

ನಾಲ್ಕನೆಯ ಮಗನು ವಿದ್ಯೆ ಇಲ್ಲದಿರೆ - ಬುದ್ಧಿವಂತನವ ।

"ಹಳ್ಳಿಯೊಳಗೆ ಅವ ಪುಡಾರಿಯಾದ । ಪುಡಾರಿ ಪಟಾಲಂಗೆ ಯಜಮಾನನಾದ ।

ತಂದೆ ತಾಯ್ಗಳಿಗೆ ಇವನದೆ ಚಿಂತೆ । ಹಳ್ಳಿಯ ಜನತೆಗೆ ಇವನೇ ಆಧಾರ ।

ಯಾವ ಕೆಲಸಕೂ ಇವನೇ ಮುಂದು । ಎಲ್ಲರ ಸಹಾಯಕು - ಇವನಿರಬೇಕು ।

ಹಬ್ಬಹರಿದಿನಗಳು - ಸಾವು ನೋವುಗಳು - ಗ್ರಾಮದೇವತೆ ಹಬ್ಬ- ಉತ್ಸವ ಮೆರವಣಿಗೆ । ಎಲ್ಲ ಕೆಲಸಕೂ - ಇವನೇ ಮುಂದಾಳು ॥

ಹಳ್ಳಿಗೆ ರಸ್ತೆ, ಹಳ್ಳಿಗೆ ಶಾಲೆ, ಹಳ್ಳಿಗೆ ಅಂಚೆ ಹಳ್ಳಿಗೆ ಆಸ್ಪತ್ರೆ - ಎಲ್ಲದರ ಸುಪರ್ದು ಈ ವ್ಯಕ್ತಿಯದೆ । ಅಷ್ಟು ಪರಿಶುದ್ಧ - ಅಷ್ಟು ಪ್ರಾಮಾಣಿಕ - ಅಷ್ಟು ಧೈರ್ಯಶಾಲಿ - ಇವನಾಗಿಹನು ।

ಓದಿಲ್ಲದಿದ್ದರು - ವಾಚಾಳಿಯವನು । ಹಳ್ಳಿಯ ಜನತೆಗೆ ದೇವರಾಗಿಹನು ।

ಯಾರದೊ -ಮೋಟಾರ್ ಸೈಕಲ್ । ಊರೂರು ಸುತ್ತುತ - ಸುತ್ತಲ ಗ್ರಾಮಕೆ ಉಪಕಾರಿಯಾದ ।

ಯಾರದೋ ಮುಂಜಿ - ಯಾರದೊ ಮದುವೆ ? ಯಾರದೊ ಸಾವು ? - ಯಾರದೊ ವೈಕುಂಠ ? ಇಲ್ಲವೇ ಕೈಲಾಸ ! ಎಲ್ಲಕು ಇವನು - ಇವನ ಪಟಾಲಂ ।

ಯಾವ ರಸ್ತೆಯಲಿ - ಇವನಿಲ್ಲದಿರೆ - ಕೆಲಸವೇ ಇಲ್ಲ। ಇವನಿಗಾಗಿಯೇ - ಕಾಯುವರವರು? ಶ್ಯಾನುಭೋಗ - ಪಟೇಲ। ಮಾಸ್ತರು - ಅಧಿಕಾರಿ। ಡಾಕ್ಟರು - ಪೋಲೀಸ್ । ಯಾರೇ ಬರಲಿ - ಇವನ ಕರೆವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದೃಷ್ಟದೇವತೆ : (ಹಣವಲ್ಲ ಮುಖ್ಯ - ಪ್ರೀತಿಯೆ ಆಯುಧ)

ಹುಡುಗುತನದಿಂದ - ಯೌವನ ದೆಸೆಗೆ - ಕಾಲಿಟ್ಟನವನು - ನಾಲ್ಕನೆಯವನು, ಹೇಗೋ ಏನೋ ಗ್ರಾಮಸ್ಥರೊಲುಮೆ - ಗ್ರಾಮಪಂಚಾಯಿತಿ - ಸದಸ್ಯನಾದ - ಅಧ್ಯಕ್ಷನಾದ।

ಬರಬರುತ ಹಾಗೆ - ಜಿಲ್ಲಾ ಪರಿಷತ್ - ಅಧ್ಯಕ್ಷನಾದ।

ಆಶ್ಚರ್ಯ ! ಆಶ್ಚರ್ಯ ! ತಂದೆ ತಾಯಿಗಳಿಗೆ !

ಅಣ್ಣಂದಿರಾಶ್ರಯ ಕೊಂಚವೂ ಇಲ್ಲದೆ - ಇಂಥಾ ಹಿರಿತನ ಸಂಪಾದಿಸಿದುದೇ
ಪೂರ್ವಪುಣ್ಯವೆಂದು ಅವರು ಬಗೆದರು ॥

ಹಳ್ಳಿ ಮುರುಕುಮನೆ - ಬಂಗಲೆಯಾಗಿ ನೂತನ ಸೌಕರ್ಯಗಳನೆಲ್ಲ ಹೊಂದಿ।
ಹೆಮ್ಮೆಯಿಂ ಮೆರೆಯಿತು - ಅಣ್ಣಂದಿರ ಮುಂದೆ।

ಸುಮ್ಮನಿರಲಿಲ್ಲ - ಅಮ್ಮ ಅಪ್ಪಂದಿರು।

''ನೋಡಿದಿರೇನೋ ಹಿರಿಯ ಮಕ್ಕಳಿರ ? ದಡ್ಡನೆಂದವನ - ಹಳಿಯುತಲಿದ್ದಿರಿ। ನಿಮ್ಮ ಸಹಕಾರ ಕೊಂಚವೂ ಇಲ್ಲದೆ - ಹೇಗೆ ಮೇಲೇರಿದ - ನಿಮ್ಮಯ ತಮ್ಮ ?''

ಹಣವಲ್ಲಮುಖ್ಯ - ಪ್ರೀತಿಯೊಂದಿದ್ದರೆ - ಏನನ್ನಾದರೂ ಸಾಧಿಸಬಹುದು'' ಎಂದು ಕಿರಿಯನನು ಹಾಡಿ ಹೊಗಳಿದರು.

ಎಂ. ಯಲ್. ಎ. ಪದವಿ :

ಕಾಲ ಮಿಂಚಿತು - ವಿಧಾನಸಭಾ ಚುನಾವಣೆ ಕೂಡಾ ಹತ್ತಿರ ಬಂದಿತು। ಆಡಳಿತ ಪಕ್ಷವು ಕಿರಿಯ ತಮ್ಮನನು ಈ ಕ್ಷೇತ್ರದಲಿ ಅಭ್ಯರ್ಥಿಯಾಗಿ ಘೋಷಿಸಿಬಿಟ್ಟಿತು। ಅಂಗಲಾಚಿದಾ ಪಕ್ಷ ಪ್ರಮುಖರನು। 'ಪ್ರೀತಿ'ಯ ಬಿಟ್ಟರೆ - ತನ್ನಲ್ಲಿ ಮತ್ತಾವ - ಶಕ್ತಿ ಸಾಮರ್ಥ್ಯವಿಲ್ಲವೆಂದು ॥ ಎಂ. ಯಲ್. ಎ. ಪದವಿಗೆ ಗೆಲುವು ಸಾಧಿಸಲು - ಹಣ - ಹೆಂಡ - ಹೊಳೆಯನೆ ಹರಿಸಲು ಬೇಕು। ಈ ತಿರಿಬೋಕಿಯ ಕೇಳುವರ್ಯಾರು'' ಎಂದು ಅಪಹಾಸ್ಯ ಮಾಡಿ ನಕ್ಕರು - ಮೂವರು ಅಣ್ಣಂದಿರು। ಪರಿಸ್ಥಿತಿ ನೋಡಿ ಕಂಗಾಲಾದರು ಅಮ್ಮ ಅಪ್ಪಂದಿರು.

Sri Vidyabharathi Book Centre, Sringeri

CC-O. In Public Domain. Digitized by eGangotri

''ಗುಟ್ಟಾಗಿ ಹೇಳಿದ – ಕಿರಿಯ ತಮ್ಮನು – ಈ ಬಾರಿ ಖರ್ಚು – ಪಕ್ಷದವರದೆಂದು – ತಾನೊಂದು ಪೈಸವ ಖರ್ಚು ಮಾಡಲಾರೆನೆಂದು.''

ಚುನಾವಣೆ ಬಂದಿತು – ಜನ ಭೋರ್ಗರೆದರು. ಪಕ್ಷವು ನಿಂತಿತು ಇವನ ಗೆಲವಿಗೆ। ಜಾತಿ ಪ್ರಚಾರದಿ – ಹಣ– ಹೆಂಡ ಹಂಚಿದರು ಪಕ್ಷ ಸದಸ್ಯರು – ಪಕ್ಷ ಪ್ರಮುಖರು। ಮಗನ ಗೆಲವಿಗಾಗಿ – ಕಂಡ ಕಂಡ ದೇವರಿಗೆ ಹರಕೆ ಹೊತ್ತರು – ಅಮ್ಮ ಅಪ್ಪಂದಿರು। 'ಗೆಲುವುದಿಲ್ಲವೆಂದು – ನೊಂದ ಮನದಲ್ಲಿ – ಮನೆಯಲೆ ಕುಳಿತಿರ್ದ – ನಾಲ್ಕನೆಯ ಮಗನು। ಹಿಂಬಾಲಕರೆಲ್ಲ ಸಪ್ಪೆ ಮುಖ ಹಾಕಿ। ಬಾಗಿಲಿನಲ್ಲೇ ಕಾದಿರ್ದರವರು। ಪ್ರತಿಪಕ್ಷದವನು – ಘಟಾಂಗಟಿಯು। ಮೂರು ಬಾರಿ ಕ್ಷೇತ್ರವ ಅಧಿಕ ಅಂತರದಿಂದ ಪ್ರತಿನಿಧಿಸಿದ್ದನು। ''ಅವನ ಸೋಲು –ಕನಸಲೂ ಇಲ್ಲ'' ಇಂತಹ ಪರಿಸ್ಥಿತಿ ? ಈ ಯುವಕನನ್ನು ಕೇಳುವವರಾರು ?

ಫಲಿತಾಂಶ ಬಂದಿತು.

ಇದ್ದಕಿದ್ದಂತೆ ಪಟಾಕಿ ಶಬ್ದ ಆಡಳಿತಪಕ್ಷದಿಂದ। ಇಪ್ಪತ್ತೈದು ಸಹಸ್ರ ಅಂತರದಿಂದ – ಗೆಲುವು ಸಾಧಿಸಿದ ವೀರ ಸುಪುತ್ರನು। ಅಪ್ಪ ಅಮ್ಮಂದಿರನು ಹಿಡಿವವರಾರು ? ಅಪ್ಪಿ ಮುದ್ದಾಡಿದರು ಕಿರಿಯ ಸುಪುತ್ರನ ವಿದ್ಯೆ ಇಲ್ಲದ ದಡ್ಡ ಶಿಖಾಮಣಿಯ।

ಪಟಾಲಂ ಸೈನ್ಯ – ಪಟಾಕಿ ಹಚ್ಚುತ। ಗಗನ ತಲ್ಪುವಂತೆ – ಜೈಕಾರ ಮಾಡಿದರು। ಇಷ್ಟವಿಲ್ಲದಿರೆ ಹಾರವ ಹಾಕಿ – ಅಪ್ಪಿಕೊಂಡರು – ಮೂವರು ಅಗ್ರಜರು ॥ ಪಕ್ಕದ ಊರಿನ – ಜಮೀನ್ದಾರರಾ – ಓರ್ವ ಪುತ್ರಿಯು – ಕೈಹಿಡಿದಳಿವನ – ಭರ್ಜರಿ ವಿವಾಹ ॥

ಸಚಿವನ ಉಡುಗೆ :

ಖಾದಿಪೈಜಾಮ। ಖಾದೀ ಜುಬ್ಬ। ಖಾದೀ ವೈಸ್ಟ್‌ಕೋಟ್ – ಖಾದೀ ಟೋಪಿ। ಖಾದೀಹಾರ – ಗದಗ ಚಪ್ಪಲಿ। ಮಿರಿ ಮಿರಿ ಮಿಂಚಿದ ಆ ಕಿರಿಯ ಮಗನು। ತಾಯಿಯಂತೂ – ಪೊರಕೆ ನೀವಳಿಸಿ – ಬೆಂಕಿಯ ತಗುಲಿಸಿ। ಚಟಚಟ ಶಬ್ದಕೆ ಅವಾಕ್ಕಾಗಿ। ಮಸಿಯ ಬಳಿದಳು – ಕಂದನ ಕೆನ್ನೆಗೆ।

॥ ಹರುಷ ಉಮ್ಮಳಿಸಿ – ಆನಂದಬಾಷ್ಪದಿ। ನಮಸ್ಕರಿಸಿದನು – ನಾಲ್ಕನೆಯಮಗನು. ಮಾತಾಪಿತೃಗಳ್ಗೆ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹಳ್ಳಿಯ ಹೈದನಿಗೆ - 'ಸಿಟಿ'ಲಿ ಮೆರವಣಿಗೆ। ಹಾರ ತುರಾಯ್ಗಳು - ಸಹಸ್ರಾರು। ತೆರೆದ ಕಾರಿನಲಿ - ನಿಂತು ನಮಿಸಿದನು - ಅಕ್ಕಪಕ್ಕ ಜನರಿಗೆ - ಹಳ್ಳಿಯ ಹೈದನು। ಆಡಳಿತಪಕ್ಷದ - ಸದಸ್ಯರ ಜೈಕಾರ - ಆಕಾಶಮಾರ್ಗದಿ - ಭೋರ್ಗರೆಯುತಿತ್ತು॥ ದೇವಸ್ಥಾನದಲಿ - ಗಣೇಶ ಮೂರ್ತಿಗೆ - ಬೃಹತ್ ಪೂಜೆ - ಮಹಾಮಂಗಳಾರತಿ - ವಿಶೇಷ ಚಪ್ಪರ। ಗ್ರಾಮದೇವತೆಗೆ - ಸರ್ವಾಲಂಕಾರ - ವಿಶೇಷ ಪೂಜೆ - ಕೋಳಿ ಕುರಿಯರ್ಪಣೆ। ಗ್ರಾಮದಲೆಲ್ಲಾ ಸಸ್ಯಾಹಾರದ। ಪಾಯಸದ ಊಟ। ತಾಯ್ತಂದೆಯರನು ಹಿಡಿವವರಾರು ? ದೊಡ್ಡ ಸಮಾರಂಭ। ಭಾಷಣ ಬಾರದ - ಯುವಕಪುಡಾರಿ - ಹರಕು ಕನ್ನಡದಿಂದ ಜನತೆಗೆಲ್ಲ ಶುಭವನು ಕೋರುತ ''ನಿಮಗೆ ನಾನು - ಸದಾ ಆಭಾರಿ - ನನ್ನ ಕರ್ತವ್ಯ - ನಿರ್ವಹಿಸುವೆನೆಂದು ದೇವರ ಹೆಸರಲಿ - ಪ್ರಮಾಣ ಮಾಡುವೆ'' - ಎನ್ನುತ ಬೆವರುತ ಭಾಷಣ ಮುಗಿಸಿದ। ಹೆಚ್ಚಿನ ಪ್ರತಿನಿಧಿ - ಗಳಿಕೆಯಿಂದ - ಈ ಬಾರಿಯೂ ಆಳಿದ ಪಕ್ಷವೆ - ರಾಜ್ಯಾಡಳಿತದ ಸೂತ್ರವಹಿಸಿತು.

ಸಚಿವನ ಪಟ್ಟ:

ಗೊತ್ತಾದ ದಿವಸ - ವಿಧಾನಸೌಧಕೆ - ತನ್ನಹಳ್ಳಿಯಿಂದ - ಸುಂದರಕಾರಲಿ ಆಗಮಿಸಿದನು. ಯುವಕ ಪ್ರತಿನಿಧಿ। ಎಲ್ಲರಂತೆಯೇ ಅವನೂ ಕೂಡಾ ದೇವರ ಹೆಸರಲಿ - ಪ್ರಮಾಣ ಮಾಡಿದ। ಸಚಿವರುಗಳಾರೆಂದು ನಿರ್ಣಯಿಸಿದ ಪಕ್ಷ - ಹಳ್ಳಿಯ ಹೈದನಿಗೆ - ಲೋಕೋಪಯೋಗಿ ಖಾತೆಯನ್ನೇ ನಿಗದಿ ಮಾಡೋಣವೇ ?

ಹಳ್ಳಿಯ ರಸ್ತೆ - ಹಳ್ಳಿಯ ಸ್ಕೂಲು - ಹಳ್ಳಿಯ ಸೇತುವೆ - ಹಳ್ಳಿಯ ನೀರಾವರಿ - ಅಚ್ಚುಕಟ್ಟಾಗಿ ನಿರ್ಮಾಣ ಮಾಡಿದ್ದ ಯುವ ಪುಡಾರಿಗೆ - ''ಲೋಕೋಪಯೋಗಿ'' ಸಂತಸವಾದರೂ ಅದರ ಕೆಳಗಡೆ ರಾಜ್ಯ - ಕೇಂದ್ರಗಳ ಕೋಟ್ಯಂತರ ಹಣ ಓಡಾಡುವುದೆಂದು - ಖಾತ್ರಿಯಾದಾಗ ಹೌಹಾರಿದನು ಕಿರಿಯ ಸಚಿವನು.

ಪಕ್ಷದ ಪ್ರಕ್ರಿಯೆ :

''ದೇವರದಯದಿಂದ ನಮ್ಮ ಸಹಕಾರದಿಂದ - ನೀನು ಗೆದ್ದು ಬಂದೆ'' ಪಕ್ಷ ಹೇಳಿತು. ಪಕ್ಷ ಪ್ರಮುಖರು ಗುಟ್ಟಾಗಿ ಹೇಳಿದರು . ''ನಿನ್ನ ಕೈಕೆಳಗೆ - ಇಡೀ ಇಲಾಖೆ। ಜವಾನನಿಂದ ಐ.ಎ.ಯಸ್ ಅಧಿಕಾರಿ ನಿನಗೆ ಸಲಾಮು. ದುಡ್ಡು ಮಾಡುವುದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲಿಸುವರವರು। ನಿನ್ನ ಮನೆ ಬಾಗಿಲಿಗೆ ನಿನ್ನ ಸಹಿಗಾಗಿ ಬ್ರೀಫ್‌ಕೇಸುಗಳಲಿ ಹಣ ತಾನೆ ಬರುವುದು॥ ಪರ್ಸೆಂಟೇಜಲಿ ಅದ ಲಪಟಾಯಿಸು. ಐದು ವರ್ಷಕಳೆದರೆ 'ಪುನಃ ನಿಲ್ಲಬೇಕು॥ ಆರ್ಥಿಕ ಸಹಾಯ ಮಾತೃಪಕ್ಷಕೆ ಮರೆಯದಿರು.''

ದಿಗ್ಭ್ರಾಂತನಾದನು - ಕಿರಿಯ ಸಚಿವನು. ತಂದೆಯ ಬುದ್ಧಿವಾದ ಮನಕೆ ಗೋಚರಿಸಿತು.. ''ಏನೇ ಆದರೂ ಭ್ರಷ್ಟಾಚಾರಿಯಾಗಬೇಡ, ನೈಜ ಸಂಪಾದನೆ ಮಾಡಿ ಬದುಕು'' ತಲ್ಲಣಿಸಿತು ಮನ. ನಿದ್ರೆ ಬಾರದು. ಅತ್ತಿತ್ತಹೊರಳುತ ಸರಿರಾತ್ರಿಯಾಯಿತು ''ಹೇಗಾದರಾಗಲಿ, ಹಿರಿಯ ಸಚಿವರ ಸಲಹೆ ಒಳ್ಳೆಯದು'' ಎಂದುಕೊಳ್ಳುತ, ಲೋಕೋಪಯೋಗಿ ಹಿಂದಿನ ಸಚಿವರ್ಗೆ, ದೂರವಾಣಿ ಮೂಲಕ ತನ್ನ ನಿರ್ಧಾರ, ಗುಟ್ಟಾಗಿ ತಿಳಿಸಿದ.

ಖಜಾನೆಯನ್ನೆಲ್ಲ - ಲೂಟಿಮಾಡಿದಾ ಮಾಜೀ ಸಚಿವರು - ತನ್ನನ್ನು ಕೂಡಲೆ ಸಂದರ್ಶಿಸಬೇಕೆಂದು - ದೂರವಾಣಿ ಮೂಲಕ ಸಂದೇಶ ತಿಳಿಸಿದರು.

ಏನೋ ಲಾಭ - ವಾದಂತೇ - ರಾತ್ರೋರಾತ್ರಿಯೇ ತನ್ನ ಕಾರಿನಲಿ - ಹಿರಿಯ ಸಚಿವನಾ - ಬಂಗಲೆಗೇ - ಕಿರಿಯ ದೌಡಾಯಿಸಿದ. ಈರ್ವರೇ ಸಣ್ಣ ಕೊಠಡಿಲಿ ಕುಳಿತು ವಿಷಯ ಪರಸ್ಪರ ಹಂಚಿಕೊಂಡರು।

ಐದು ವರ್ಷಮಾತ್ರಾ ನಿನ್ನ ಆಯುಸ್ಸು-ಇನ್ನೈದು ವರ್ಷಕೆ ಸಿದ್ಧಮಾಡಿಕೊ।

ಹಿರಿಯ ಸಚಿವನು ದಿಟ್ಟನಾಗಿಯೇ ಬುದ್ಧಿ ಹೇಳಿದ - ''ಹಳ್ಳಿಯ ಮಂಕೇ - ಮೊದಲ ಬಾರಿಗೆ - ಗೆದ್ದು ಬಂದಿರುವೆ. ನಿನ್ನ ಗೆಲುವಿಗೆ ನೀನು ಕಾರಣವೊ ? ಪಕ್ಷ ಕಾರಣವೊ ?'' ಎಂದು ಕೇಳಿದನು। ''ನನ್ನ ಗೆಲುವಿಗೆ ಪಕ್ಷವು ಹಾಗೂ ಕಾರ್ಯಕರ್ತರೆಂದು'' ಒಪ್ಪಿಕೊಂಡನು - ಆ ಯುವ ಸಚಿವನು. ಹಿರಿಯ ಸಚಿವನು ಇನ್ನೂ ಮುಂದರಿದು ''ಇನ್ನೈದು ವರ್ಷವೆ, ನಿನ್ನಾಯುಸ್ಸು! ಅಧಿಕಾರಿ ಹಾಗೂ ನೌಕರ ವರ್ಗವು ಮೂವತ್ತು ವರುಷ ಸರ್ವೀಸ್ ಮಾಡುವುದು - ಮುಂದಿನ ಚುನಾವಣೆಗೆ ನಮ್ಮಯ ಪಕ್ಷವು - ನಿನ್ನ ಗೆಲುವಿಗಾಗಿ ದಮ್ಮಡಿಕೂಡಾ ಖರ್ಚುಮಾಡಲಾರದು। ಪಕ್ಷಕೆ ಕೊಟ್ಟು ನೀನು ಬದುಕಬೇಕು - ಸಚಿವ ದರ್ಬಾರು ಐದು ವರ್ಷ ಸಾಕೇ ? ನಿನ್ನ ಕೆಲಸವು ಸಹಿಹಾಕುವುದು. ಅಧಿಕಾರಿ ವರ್ಗವು - ಮಿಕ್ಕ ಜವಾಬ್ದಾರಿ - ನಿರ್ವಹಿಸುವುದು। ನಿನಗೆ ಪರ್ಸೆಂಟೇಜ್ ವ್ಯವಸ್ಥೆ ಮಾಡಿ - ಯೋಜನೆ, ಟೆಂಡರ್, ಕಾಮಗಾರಿ, ಹಣವಿಲೇವಾರಿ -

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲ ಕೆಲಸಗಳು ಅಧಿಗಾರಿವರ್ಗದ್ದು। ನಿನ್ನ ಕೆಲಸವು ಮೀಟಿಂಗ್ ಕರೆವುದು - ಮಾಮೂಲಿನಂತೆ ಬಿಲ್ಲುಗಳಿಗೆಲ್ಲ ಸಹಿ ಹಾಕುವುದು। ಐ.ಎ.ಎಸ್. ಸಾಹೇಬರು - ವರದಿ ಒಪ್ಪಿಸುವರು। ಇಷ್ಟು ಕೋಟಿ ಯೋಜನೆಗೆ - ನಿನ್ನಯ ಕಿಮ್ಮತ್ತು ಇಪ್ಪತ್ತೈದರಿಂದ ಮೂವತ್ತು ಪರ್ಸೆಂಟ್। ನೀನು ಕೆದಕುವುದು - ಸುತರಾಂ ಇಲ್ಲ ಗುಮಾಸ್ತನಿಂದ್ಹಿಡಿದು - ಅತ್ಯಂತ ಮೇಲಿನ ಅಧಿಕಾರಿವರೆಗೂ ಎಲ್ಲರು ಮೋತಿಖಾನೆ - ಹೆಗ್ಗಣಗಳೇ! ಮೂವತ್ತು ವರುಷ ಅವರ ಆಯುಸ್ಸು। ಇಷ್ಟು ಹೊತ್ತಿಗೆ ಹತ್ತಿಪ್ಪತ್ತು ವರುಷ - ಸರ್ವಿಸ್ ಮುಗಿಸಿ ಕೋಟಿ ಕೋಟಿ ಹಣ ದಾಟಿರುವರವರು. ಅವರ ಕಿಮ್ಮತ್ತೂ ಇಪ್ಪತ್ತೈದರಿಂದ ಮೂವತ್ತು ಪರ್ಸೆಂಟ್. ಉಳಿದಿರುವಾ ನಲವತ್ತು ಸರ್ಸೆಂಟ್. ಕಂಟ್ರಾಕ್ಟರ ಹಾಗೂ ಕಾರ್ಯನಿರ್ವಾಹಕರಿಗೆ ಅವರು ಬಳಸುವ ಪದಾರ್ಥಗಳಿಗೆ। ಮುಂದಿನ ಸಾರಿ - ನೀನು ಗೆದ್ದರೆ - ಮತ್ತಾವ ಖಾತೆಯೊ ? ಬಲ್ಲವರಾರು ? ಒಂದಂತೂ ಸತ್ಯ. ಇದೇ ಅಧಿಕಾರಿಗಳು - ಬೇರೆ ಬೇರೆ ಖಾತೆಲಿ - ಮುಂದುವರಿಯುವರು। ಬೇಕಾದವರನು - ನಿನ್ನ ಖಾತೆಗೆ ಬದಲಾಯಿಸುವುದೂ ಸುಲಭವಲ್ಲವೇ ? ಪಕ್ಷಗೆಲ್ಲದಿದ್ದರೆ. ನಾವೆಲ್ಲ ಕೂರಬೇಕು ಪ್ರತಿಪಕ್ಷ ಸಾಲಿನಲಿ ॥ ನಿನ್ನಯ ಕಾರ್ಯಕ್ರಮ ಕ್ರಮಬದ್ಧವಾಗದೆ, - ಯಾವುದೋ ಸೇತುವೆ ಒಡೆದು ಹೋದರೆ, - ಯಾವುದೋ ಕೆರೆಯು ಕೊಚ್ಚಿಹೋದರೆ - ಯಾವುದೊ ಗ್ರಾಮವು ಮುಳುಗಡೆಯಾದರೆ, ಮಾಧ್ಯಮಗಳೂ ದೊಡ್ಡ ಗಲಾಟೆಯನೆಬ್ಬಿಸುವುವು। ಪ್ರತಿಪಕ್ಷದವರು. ಹಳೆಯ ಸಚಿವರನು - ಇಕ್ಕಟ್ಟಿಗೇ ಸಿಕ್ಕಿಹಾಕುವರು। ಆಡಳಿತಪಕ್ಷವು ನಾವೇ ಆದರೆ ಗೆಲುವು ಸುಲಭವು। ಪ್ರತಿಪಕ್ಷ ಸಾಲಿನಲಿ ನಾವು ಕುಳಿತರೆ - ಆಡಳಿತ ಪಕ್ಷವು ಮಾಜಿ ಸಚಿವರನ್ನು - ಹಿಗ್ಗಾ ಮುಗ್ಗಾ - ಎಳೆದಾಡುವುದು ॥ ಮಾಧ್ಯಮಗಳಿಗೆ ಇದುವೇ ಮೃಷ್ಟಾನ್ನ - ಆಗಿರಬೇಕಾದುದು ಗಾಂಧೀಜಿ ಹೇಳಿದ ಶಾಂತಿಮಂತ್ರ। ಪ್ರತಿಪಕ್ಷ ನಮ್ಮನು ಅಲ್ಲಾಡಿಸುತ್ತಿರಲಿ। ದಿನ ನಿತ್ಯಪತ್ರಿಕೆ - ದೂರದರ್ಶನದಲಿ - ನಮ್ಮ ವಿಷಯವೇ ಬರುತ್ತಲಿರಲಿ - ಜಗ್ಗಕೂಡದು - ಹೆದರಕೂಡದು।

ಎಲ್ಲಾ ಜವಾಬ್ದಾರಿ ಅಧಿಕಾರಿವರ್ಗದ್ದು। ಅವರ ಸಸ್ಪೆಂಡು ಅವರ ವರ್ಗಾವಣೆ। ನಮ್ಮ ಮೇಲೆ - ಕಾನೂನಿನಂತೆ ಕ್ರಮ ಕೈಗೊಳ್ಳಲು - ಲೋಕಾಯುಕ್ತರಿಗೆ ಅಧಿಕಾರವಿಲ್ಲ ಇವೆಲ್ಲ ಮಾಮೂಲು ಹೆದರುವುದೇಕೆ ?

ನಾನು ನೋಡಯ್ಯಾ। ಎಂಟು ಚುನಾವಣೆಗಳನ್ನು ಎದುರಿಸಿ ''ಅಪರಾಧ, ಅಪವಾದ'' ಸಾವಿರವಿದ್ದಾಗ್ಯೂ ಒಂಭತ್ತನೇ ಚುನಾವಣೆಯಲ್ಲಿ - ಅಧಿಕ ಅಂತರದಿಂದ ಗೆದ್ದು ಬಂದಿರುವೆ। ಜನತೆ ನನ್ನನು ಗೆಲಿಸುತಿರುವಾಗ, ಯಾವ ಕಾನೂನಿಗೂ ಹೆದರದ ನಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ಬೊಗಳಿಕೆಗ್ಗೆದರದೆ ಪುನಃ ಸಚಿವನಾಗಿ ಮುಂದುವರಿದಿರುವೆ। "ಜೈಕಾರ – ಅಪವಾದ" – ಮಾಮೂಲು – ನನಗೆ। ಅರವತ್ತೈದು ವರುಷ ತುಂಬಿದ ನನಗೆ ಈಗ ಇರುವುದು ಒಂದೇ ಆಸೆ। ನನ್ನ ಮಗನನ್ನು ಬುದ್ಧಿವಂತಿಕೆಯಿಂದ – ಪಕ್ಷದಾಸರೆಯಿಂದ – ಪಾರ್ಲಿಮೆಂಟ್. ಸ್ಥಾನಕೆ ಗೆಲ್ಲಿಸಿರುವೆ। ನಾನಿದ್ದಾಗಲೊ, ನನ್ನ ನಂತರವೊ, ಅವನೂ ಸಚಿವನೆ ! ಇದೇ ಮಾಧ್ಯಮಗಳು ಬಾಯಿಗೆ ಬಂದಂತೆ ಹೊಗಳುವುವು ಇಲ್ಲವೆ ತೆಗಳುವುವು "ವಾತಾಪೀ ಜೀರ್ಣೋಭವ" ಮಂತ್ರ ಕಲಿತುಕೊ। ನಾನೀಗ ಈ ರಾಜ್ಯದಲಿ – ಅತ್ಯಂತ ಹಿರಿಯಾ ಸಚಿವನಾಗಿರುವೆ। ನನ್ನ ಪ್ರಭಾವವು ರಾಜ್ಯ ಮಾತ್ರವಲ್ಲ – ಕೇಂದ್ರದಲ್ಲಿಯೂ ಮಹತ್ತಾಗಿ ನಡೆವುದು। ನನ್ನ ಸಂಪಾದನೆ – ಕಪ್ಪು ಹಣವು ನನಗೇ ತಿಳಿಯದು। ಗುಟ್ಟಾಗಿ ಹೇಳುವೆ – "ಸ್ವಿಸ್" ಬ್ಯಾಂಕಿನಲೂ – ಗುಟ್ಟಾಗಿ ಇಟ್ಟಿರುವೆ. ನಮ್ಮ ಪಕ್ಷದವರು ನನ್ನನ್ನೇನಾದರು – ಹೆದರಿಸುವುದಾದರೆ – ನಾನೇ ಒಂದು ಪಕ್ಷ ಕಟ್ಟುವೆ. ನೀನೂ ಬರುವೆಯಂತೆ॥ ಹೇಗಿದ್ದರೂ – ನನ್ನ ಮಗನೀಗ – ಪಾರ್ಲಿಮೆಂಟ್ ಸದಸ್ಯನು.

ಇನ್ನೊಂದು ವಿಷಯ ಜ್ಞಾಪಕವಿಟ್ಟುಕೊ। ನನಗೂ – ನಿನಗೂ, ಜನದ ಬಲವಿದೆ – ಜಾತಿಯ ಬಲವಿದೆ। ನಾ ಕಂಡ ಸತ್ಯ – 'ಭಾರತೀಯರು – ಅತ್ಯಂತ ಮುಗ್ಧರು। ಓಟು ಮಾಡುವವರು – ಕನಿಷ್ಟರು ಹಾಗೂ ಮಧ್ಯಮ ವರ್ಗ। ಅವರಿಗೆ ಬೇಕು – ಒಂದು ದಿನದ ಸುಖ' ಹಣ ಹಾಗೂ ಹೆಂಡ। ವಿದ್ಯಾವಂತರು – ಓಟು ಮಾಡಲಾರರು। ವೋಟು ಮಾಡಲಿಕಾಗಿ – ರಜಾ ದೊರೆತರೆ – ಮಜಾ ಮಾಡುವರು। ಚುನಾವಣಾ ಆಯೋಗ ಎಂಥೆಂಥ ಕಾನೂನು – ಅಳವಡಿಸಿದರೂ – ನಮ್ಮಯ ಶಿಷ್ಯರು – ಅತಿಬುದ್ಧಿವಂತರು। ಆಯೋಗವು ಚಾಪೆ ಕೆಳಗೇ ತೂರಿದರೇ – ನಮ್ಮಯ ಶಿಷ್ಯರು – ರಂಗೋಲಿ ಕೆಳಗೇ ತೂರುವರು। ಒಂದು ಜಾತಿಯ ಯಜಮಾನನೆಂಬುವಗೆ ನಂಬಿಕೆಯಾಧಾರದಿ – ಜಾತೀ ಓಟು ಲೆಕ್ಕ ಹಾಕಿ – ಇಷ್ಟು ಹಣ ಅಡ್ವಾನ್ಸ್ ಕೊಟ್ಟರೆ, ಆ ಜಾತಿ ಓಟು ನಮ್ಮಯ ಪಕ್ಷಕೆ। ಇನ್ನೂ ಕೆಳಹಂತದ ಮತದಾರರಿಗೆ ಮನೆಯ ಓಟನ್ನು ಲೆಕ್ಕ ಹಾಕಿ – ಗುಣಾಕಾರ ಮಾಡಿ – ಓಟಿಗಿಷ್ಟೆಂದು – ಅಷ್ಟೂ ಹಣವನ್ನು ಲೆಕ್ಕಾಚಾರಮಾಡಿ – ಆರತಿ ತಟ್ಟೆಗೆ ಹಾಕಿ – ಕೈ ಮುಗಿದರೆ – ನಮ್ಮಯ ಗೆಲುವು ಖಚಿತವಲ್ಲವೇ ? ಎಲ್ಲ ರಾಜ್ಯಗಳಲ್ಲಿ – ನಲವತ್ತು ವರ್ಷದಿಂದ – ಓಟು ಮಾಡಿದಾ ವಿವರ ನೋಡಿದರೆ ಕನಿಷ್ಠ ನಲವತ್ತು ಶತ – ಗರಿಷ್ಠ ಎಪ್ಪತ್ತು ಶತ. ಹಾಗೇನೆಂದರೆ ವಿದ್ಯಾವಂತರು – ಅಧಿಕಾರಿಗಳು – ವೃತ್ತಿಪರರೂ ಓಟು ಮಾಡಲಾರರು। ಓಟಿನಿಂದ ಅವರಿಗೆ ಲಾಭವೇನು ? ಯಾವ ಪಕ್ಷಗೆದ್ದರೂ ಅವರಿಗೆ ಲಾಭವೇ ? ಹೆದರಿ ಅವರ ಅನುಕೂಲ ಗಮನಿಸುವುದು। ಪಕ್ಷ ಪ್ರತಿಪಕ್ಷಗಳಿಗೆ ಅವರ

Sri Vidyabharathi Book Centre, Sringeri

CC-O. In Public Domain. Digitized by eGangotri

ಓಟೇ ತಲೆನೋವಾಗುವುದು। ಕಾರ್ಮಿಕರ ವೋಟು ಕಮ್ಯೂನಿಸ್ಟ್ ಸದಸ್ಯನಿಗೆ ಮೀಸಲಾಗಿದ್ದು ಅದರ ಪರಿಣಾಮ ಹಿರಿಯ ಪಕ್ಷಗಳಿಗೆ - ಲೆಕ್ಕಕ್ಕೆ ಬಾರದು। ಹಾಗೇಕೆಂದರೆ ಇದರರ್ಥವೇನು? ''ಸ್ವತಂತ್ರ'' ಬಂದು ಅರವತ್ತು ವರ್ಷ ದಾಟಿಹೋಯಿತು. ಇನ್ನೂ ಅರವತ್ತು ವರ್ಷ ದಾಟಿದರೂ ವಿದ್ಯಾವಂತರು - ಓಟು ಮಾಡಲಾರರು। ಹೆಂಡದ - ಹಣದ - ಜಾತಿಯ ಓಟೇ ಪರಮಪವಿತ್ರವು - ನಮ್ಮ ಭವಿಷ್ಯಕೆ। ಓಟು ಮಾಡುವವರು - ಓಟು ಮಾಡಿದವರು ನಮ್ಮವರೆಂಬುದ ಮರೆಯದಿರು - ಹಣ, ಹೆಂಡ, ಜಾತಿಗಳು ನಮ್ಮ ಬದುಕಿಗೆ ಪ್ರಭಾವ ಬೀರಿವೆ? ''ಮತ್ತೊಮ್ಮೆ ನಿನಗೆ ಬುದ್ಧಿ ಹೇಳುವೆ। ಐದು ವರ್ಷವೇ ನಿನ್ನಾಯಸ್ಸು! ಐವತ್ತು ವರ್ಷ - ರಾಜ್ಯಭಾರಮಾಡಲು - ನನ್ನಂತೆಯೇ ಈಗಿನಿಂದಲೇ - ಯೋಜನೆ ಮಾಡು'' ಎಂದುಸಿರಿದನು - ಹಿರಿಯ ಸಚಿವನು। ಕಿರಿಯ ಸಚಿವನು - ಅರೆಮನಸ್ಸಿನಲ್ಲಿ ಹಿಂದಿರುಗಿದನು.

ಕಾರ್ಯವೈಖರಿ :

ಕಿರಿಯ ಸಚಿವನಿಗೆ - ಲೋಕೋಪಯೋಗಿ ಅಧಿಕಾರವರ್ಗದಿಂದ - ಹಣ ಬರತೊಡಗಿತು। ಆತನು ವಿಷಯವ - ಗುಟ್ಟಾಗೆ ಇಟ್ಟನು॥ ಮನಸು ಒಪ್ಪದೆ - ಭವಿಷ್ಯ ಬಾಧಿಸಿತು। ಹೆಂಡತಿಯೂ - ಶಾಮೀಲಾದಳು॥ ಒಂದೆರಡು ವರ್ಷದಲಿ - ಸಾವಿರ ನೋಡದವ - ಲಕ್ಷಾಧಿಕಾರಿಯಾದ। ಐದು ವರ್ಷದಲಿ - ಕೋಟ್ಯಾಧಿಪತಿಯಾದ॥ ಅಷ್ಟು ಹೊತ್ತಿಗೆ - ಅವನ ಸಂಸಾರವು - ಒಂದೆರಡು ಮಕ್ಕಳ ಪುಟ್ಟ ಸಂಸಾರವಾಗಿ - ತಾಯ್ತಂದೆಯರಿಗೆ, ಹೆಂಡತಿ ಮಕ್ಕಳಿಗೆ - ಶ್ರೇಷ್ಠಮಟ್ಟದಾ - ಉಡುಗೆ ತೊಡುಗೆಗಳು। ಮೈತುಂಬ ಆಭರಣ - ಮಕ್ಕಳೀರ್ವರಿಗು ಆಂಗ್ಲ ಖಾಸಗಿ ಶಾಲೆ। ಅರಿವಿಲ್ಲದೆಯೇ - ಮಹಾಲಕ್ಷ್ಮಿ ಬಂದರೆ - ತಳ್ಳಲು ಸಾಧ್ಯವೇ? ತಾನಾಗಿ ಬಂದ ಮಹಾಲಕ್ಷ್ಮಿಯನು - ಆದರದಿಂದಲೆ ಆಹ್ವಾನಿಸತೊಡಗಿದ। ಹರಕಲು, ಮುರುಕಲು ಇಂಗ್ಲೀಷ್ ಕಲಿತ॥ ಗಂಡ ಹೆಂಡಿರು ಕ್ಲಬ್ ಸದಸ್ಯರು - ಕುಡಿತ, ಜೂಜುಗಳು ತಾವಾಗಿ ಬಂದುವು॥ ಸಾಕೆನಿಸಿದರೂ - ಲಕ್ಷ್ಮಿಯಾಗಮನ॥ ಬಂಗಲೆಯಾಯಿತು - ಸೈಟುಗಳಾದುವು। ಪೆಟ್ರೋಲ್ ಬಂಕಾಯಿತು. ವಾಣಿಜ್ಯ ಸಂಕೀರ್ಣ ಹೆಂಡತಿಯ ಹೆಸರಲ್ಲಿ। ನೂರಾರು ಎಕರೆ ತೋಟ ಗದ್ದೆಯಾಯಿತು॥ ತಾಯ್ತಂದೆ ಹಾಗೂ ಮಕ್ಕಳ ಹೆಸರಲಿ ಬಂಗಲೆ, ಸೈಟು ಕೊಂಡದ್ದಾಯಿತು। ಬ್ಯಾಂಕಿನ ಪತ್ರ, ಷೇರುಗಳ ಪತ್ರ ಮೇರೆ ಮೀರಿತು। ಅಪಾರ ಒಡವೆ, ರತ್ನಾಭರಣಗಳು ಕಣ್ಣು ಕುಕ್ಕುವಂತಾಯಿತು - ಸಚಿವಗೆ।

Sri Vidyabharathi Book Centre, Sringeri

CC-O. In Public Domain. Digitized by eGangotri

ಸಚಿವನ ಮಾತು ವೇದವಾಕ್ಯವೀಗ। ರಾಜ್ಯದಿಂದ ಕೇಂದ್ರದವರೆಗೂ - ಸುಪ್ರಸಿದ್ಧನವ॥ ತಾಯ್ತಂದೆಯರು ಇಷ್ಟು ಆಸ್ತಿಗೆ ಕಾರಣ ಕೇಳಿದರೆ - ಸುಳ್ಳು ಹೇಳುವನವ॥ ತಾಯ್ತಂದೆಯರನು ಸಂತೈಸಲು - ಕಪ್ಪು ಹಣದಲ್ಲಿ ಯಾತ್ರೆ ಮಾಡಿಸಿದ। ಕಾಶಿವಿಶ್ವನಾಥ - ಬದರಿ, ಹರಿದ್ವಾರ - ಪೂರಿ ಜಗನ್ನಾಥ - ವೈಷ್ಣವಿ ದೇವಾಲಯ - ಅಲಹಾಬಾದ್, ಗಯಾ - ಗುಜರಾತ್ - ಸೋಮನಾಥ್, ತಿರುಪತಿ ತಿಮ್ಮಪ್ಪ - ಮೈಸೂರು ಚಾಮುಂಡಿ - ನಂಜನಗೂಡು ನಂಜುಂಡ, ಬೇಲೂರು - ಹಳೇಬೀಡು, ಕನ್ಯಾಕುಮಾರೀ - ರಾಮೇಶ್ವರ, ಮಧುರೆ ಮೀನಾಕ್ಷಿ - ಕಂಚಿ ಕಾಮಾಕ್ಷಿ - ಎಲ್ಲಾ ದರ್ಶನ ಕಾರಲಿ, ಬಸ್ಸಲಿ, ಏರೋಪ್ಲೇನಲಿ। ಸಾಲದುದಕ್ಕೆ ಅಂಡಮಾನ್ ನಿಕೋಬಾರ್ ದ್ವೀಪದರ್ಶನ। ಸುಂದರನಗರ ಮುಂಬೈ, ಚೆನ್ನೈ, ದೆಹಲಿ, ಕಲ್ಕತಾ, ಆಗ್ರಾ, ಅಯೋಧ್ಯ - ಪಟ್ಟಣದರ್ಶನ. ಪವಿತ್ರ ನದಿಗಳ ಸಂಗಮಸ್ನಾನ - ನದಿಗಳ ಪೂಜೆ - ಚಕಿತರಾದ ತಾಯ್ತಂದೆಯರು ಪುನೀತರಾದರು - ದೈವದರ್ಶನದಿ।

ತಾನು ಹೊರಗುಳಿದು - ತಾಯ್ತಂದೆಯರಿಗೆ ಪವಿತ್ರಸ್ನಾನ ದೇವರ ದರ್ಶನ ? ಇಷ್ಟು ಹಣವೂ ಹೇಗೆ ಬಂತೆಂದು ಕೇಳಿದ ಪ್ರಶ್ನೆಗೆ - ''ತನ್ನ ಸ್ಥಾನಕೆ - ಸರ್ಕಾರದುಡು ಗೊರೆ' ಎಂದು ಸುಳ್ಳಿನ ಚಟಾಕಿ ಹಾರಿಸಿದ । ಆದರೂ ಅವನ ಅಂತರಂಗವು - ಸತ್ಯವನ್ನೇ ಹುಡುಕುತಲಿತ್ತು ॥

ಪಂಚವರ್ಷ ಕಳೆಯಿತು :

ಐದು ವರ್ಷ ಕಳೆಯಿತು - ಪುನಃ ಚುನಾವಣೆ - ಇವನಿಗೇ ಟಿಕೆಟ್। ಆಸ್ತಿ ಘೋಷಣೆ. ಸರ್ಕಾರದ ಗಮನಕೆ ನೂರೈವತ್ತು ಕೋಟಿ। ಕೇಳುವವರಾರು ? ಚುನಾವಣಾ ಫಲಿತಾಂಶ ಈ ಬಾರಿಯೂ ಇದೇ ಪಕ್ಷವು ಆಡಳಿತ ಪಕ್ಷ॥ ಸ್ವಂತ ಹಣದಲ್ಲಿ ಪ್ರಚಾರ ಮಾಡಿ - ಹಣ, ಹೆಂಡ ಹೊಳೆಗಳ ಸಂಪೂರ್ಣ ಹರಿಸೀ - ಗೆದ್ದನಿವನು॥ ಸಚಿವನಾದಾಗ, ಸ್ವಜನರು ಹಾಗೂ ಅಲ್ಪಸಂಖ್ಯಾತರಿಗೆ ಅವನ ಸಹಾಯ ಅತ್ಯಧಿಕವಾಗಿ ಈ ಬಾರಿ ಗೆಲುವು - ಒಂದು ಲಕ್ಷ ಅಂತರ। ಈ ಬಾರಿಯೂ - ಭೂ ವಿಜ್ಞಾನ ಇಲಾಖೆ। ಹಳೆಯ ಹುಲಿಗಳೇ ಅಧಿಕಾರಿಗಳು। ಹೊಸಬರ ಸ್ನೇಹಕೆ ಒಂದು ಸ್ನೇಹ ಕೂಟ। ಮಾಧ್ಯಮಗಳಿಗೆ - ಸ್ವಂತ ಖರ್ಚಿನಲ್ಲೆ ಸಾಧನೆಯ ಪಟ್ಟಿ। ಅವರೂ ಇವನನು ಬಾಯ್ತುಂಬ ಹೊಗಳಿದರು. 'ರೊಟ್ಟಿಯು ಜಾರಿ ತುಪ್ಪಕ್ಕೆ ಬಿದ್ದಿತು' ಗಣಿ ಎಂದ ಮೇಲೆ ಕೇಳಬೇಕೇ ಕಿಮ್ಮತ್ತು। ಟೆಂಡರ್‌ಗಳೆಲ್ಲಾ ವಿವಿಧ ಹೆಸರಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

- ಬೇಕಾದವರಿಗೆ। ಬೇರೆ ಬೇರೆ ಕಂಪೆನಿ ಹೆಸರಲಿ ಬಂದಿತು. ಹಲವಾರು ಟೆಂಡರ್ ಮಂತ್ರಿ ಸಮ್ಮುಖಕೆ। ಅಧಿಕಾರಗಳೊಡನೆ, ಸಮಾಲೋಚಿಸಿ - ತನ್ನ ಪರ್ಸೆಂಟೇಜ್ - ಖಾತ್ರಿ ಮಾಡಿಕೊಂಡು ಕುಳಿತಲ್ಲಿಯೇ - ಟೆಂಡರ್‌ಗೆ ದಸ್ಕತ್ತು॥ ಸರ್ಕಾರ ಹಾಗೂ ಸಾರ್ವಜನಿಕರಿಗೆ ಮಣ್ಣುಮುಕ್ಕಿಸಲು ನಾಮಕಾವಸ್ಥೆ ಅಧಿಕೃತ ಮೀಟಿಂಗ್ ॥ ಇವನಿಗಿಂತ ಹುಷಾರು - ಅಧಿ ಕಾರಿವರ್ಗ। ಕೆಲವು ವೇಳೆ - ಅದಿರು ನಿಕ್ಷೇಪ ಅತಿಯಾಗಿದ್ದಿದ್ದರೆ ಒಂದು ದಸ್ಕತ್ತಿಗೆ - ಲಕ್ಷ ಲಕ್ಷ ಹಣ। ಆದಾಯ ತೆರಿಗೆಗೆ ಲೆಕ್ಕ ಸಿಗದಂತೆ ಕಪ್ಪುಹಣವನ್ನು - ಸ್ವಿಸ್ ಬ್ಯಾಂಕಿನಲ್ಲಿಯು ಇಟ್ಟಾಯಿತು ॥ ಹಣದ ಪ್ರಭಾವದಿಂದ - ಮುಖ್ಯಮಂತ್ರಿ ಸ್ಥಾನವು - ಈ ಸಚಿವನಿಗೇ - ದೊರೆಯಬೇಕೇ ? ಹೊಟ್ಟೆಯುರಿಯಿಂದ ಬಾಯ್ ಬಡಿದುಕೊಂಡರು - ಮೂವರು ಅಣ್ಣಂದಿರು ॥

ಲೋಕಾಯುಕ್ತರ ಬಲೆಗೆ :

ಚಕ್ರ ಉರುಳಿತು - ಎಂದೋ ಒಂದು ದಿನ 'ಗಣಿ' ಹಾಗೂ ಭೂ ವಿಜ್ಞಾನ - ಅಧಿ ಕಾರಿಗಳು ಲೋಕಾಯುಕ್ತರ ಬಲೆಗೆ ಸಿಕ್ಕಿಬಿದ್ದರು। ಬಂಡವಾಳ ಬಯಲು। ಹತ್ತು ಹದಿನೈದು - ವರ್ಷಗಳಲ್ಲಿ ಕೋಟ್ಯಂತರ ಹಣವು - ಇವರದಾಗಿತ್ತು। ನೈಜ ಸಂಪಾದನೆಗೂ - ಕಳ್ಳ ಆಸ್ತಿಗೂ ಅಜಗಜಾಂತರ। ಇದಕೆ ಕಾರಣ - ಲೋಕೋಪಯೋಗಿ ಹಾಗೂ ಗಣಿಯ ಸಚಿವರು। ಅಧಿಕಾರಿಗಳಿಗೆ - ಸಸ್ಪೆಂಡ್ ಆಯಿತು - ಕಳ್ಳ ಆಸ್ತಿಯು ತೀರ್ಪು ಬರುವವರೆಗೆ ನ್ಯಾಯಾಲಯದ ಅಧೀನವಾಯಿತು। ತೀರ್ಪು ಬರುವವರೆಗೆ - ನ್ಯಾಯಾಲಯದ ದೃಷ್ಟಿಯಲ್ಲಿ - ಸಸ್ಪೆಂಡ್ ಆದವರು ಅಪರಾಧಿಗಳೇ ॥ ಅವರ ಮುಖವು - ಹರಳೆಣ್ಣೆ ಕುಡಿದಂತೆ ॥ ಮಾಧ್ಯಮದಲ್ಲಿ - ವಿಶೇಷ ಬರಹ - ಸಾರ್ವಜನಿಕರೆಲ್ಲ ಕಿಡಿಕಿಡಿಯಾದರು।

॥ ಆದರೇನು ? ಲೋಕಾಯುಕ್ತರಿಗೆ ಸರ್ಕಾರಿ ಅಧಿಕಾರಿಗಳ ಮೇಲೆ ಮಾತ್ರಾ - ಸರ್ವಾಧಿಕಾರ। ಆದರೆ ರಾಜಕೀಯ - ಭ್ರಷ್ಟಾಚಾರಿಗಳ। ಅಲ್ಲಾಡಿಸುವ ಶಕ್ತಿ ಸರ್ಕಾರವಿವರಿಗೆ ದಯಪಾಲಿಸಲೆ ಇಲ್ಲ॥

ಮುಖ್ಯಮಂತ್ರಿಯ - ಮೂವರು ಅಣ್ಣಂದಿರು - ಡಾಕ್ಟರ್, ಇಂಜಿನಿಯರ್ ಪೋಲೀಸ್ ಅಧಿಕಾರಿ - ಲೋಕಾಯುಕ್ತರ - ವಿಶೇಷ ಬಲೆಗೆ ಸಿಕ್ಕಿ ಬಿದ್ದು - ಸಸ್ಪೆಂಡ್ ಆಗಿ - ನ್ಯಾಯಾಲಯದಲಿ - ಮೊಕದ್ದಮೆ ಎದುರಿಸಿ ತಮ್ಮನ ಸಹಕಾರಕೆ - ಅಂಗಲಾಚಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬರಬರುತ್ತಲೇ - ಮೂರನೆ ಚುನಾವಣೆ - ಬಂದೇ ಬಂದಿತು. ಈ ಬಾರಿ ತನ್ನನು "ಡಿಕ್ಲೇರ್" ಮಾಡಿಕೊಂಡ - ಅಧಿಕೃತ ಆಸ್ತಿ - ಮುನ್ನೂರ ಐವತ್ತು ಕೋಟಿ ರೂ. । ಈ ಬಾರಿಯೂ ಅವನೇ ಗೆದ್ದನು ॥

ಈ ಬಾರಿ ಖರ್ಚು - ಕೋಟಿಗಟ್ಟಲೆ. ಎಂದಿಗಿಂತಲೂ - ಹೆಚ್ಚು ಮತಗಳಿಸಿ ಗೆದ್ದೇ ಬಿಟ್ಟನು । ಈ ಬಾರಿ ಅವನ ಖಾತೆ 'ಗಣಿ ಕೈಗಾರಿಕೆ ಹಾಗೂ ಆರ್ಥಿಕವಲಯ'.

ಇಷ್ಟು ಹಣವು ಎಲ್ಲಿಂದ ಬಂದಿತು? ಹೇಗೆ ಗೆದ್ದನಿವ? ಪ್ರತಿಪಕ್ಷದವರ ಪ್ಲಾನುಗಳೆಲ್ಲ ವ್ಯರ್ಥವಾಯಿತು ॥ ಗೆಲುವಿಗೆ ಕಾರಣ - ಸಚಿವಗೆ ಗೊತ್ತು ॥ ಹಿರಿ ಸಚಿವನ ಮಾತು - ನೆನಪಿಗೆ ಬಂದಿತು ॥ ಓಟು ಮಾಡುವವರು - ಸ್ವಜಾತಿ ಬಾಂಧವರು ಹಾಗೂ ಸಮಾಜದಲ್ಲಿನ ಸಾಮಾನ್ಯ ಹಾಗೂ ಕನಿಷ್ಟ ವರ್ಗ -? ಅವರಿಗೆ ಬೇಕಾದ ಹಣ - ಹೆಂಡಗಳ ಈ ಯುವ ಸಚಿವನು ಸಿದ್ಧ ಮಾಡಿದ್ದ। ಆರತಿ ತಟ್ಟೆಗೆ ಲೆಕ್ಕವಿಲ್ಲದಷ್ಟು ಹಣ। ವಿದ್ಯಾವಂತರು - ನೆನಸಿದಂತೆ ಓಟು ಮಾಡಲಿಲ್ಲ॥ ಓಟಾದುದೇ ಶೇಕಡ ನಲವತ್ತಾರು। ಆತನ ಗೆಲುವು - ಅತೀ ಹೆಚ್ಚಿನ ಅಂತರ ವೀಬಾರಿ ॥

ಇವನ ಗೆಲವಿಗೆ ಯಾರು ಕಾರಣ। ಸರ್ಕಾರವೋ? ಸಮಾಜವೋ? ಅಧಿಕಾರಿಗಳೋ? ಓಟು ಮಾಡಿದವರೋ? ವೈಯಕ್ತಿಕ ಪ್ರತಿಷ್ಠೆಯೋ? ನಮ್ಮ ರಾಷ್ಟ್ರದ ಜಟಿಲ ಕಾನೂನೋ? ಹಣ, ಹೆಂಡಗಳೋ? ಯೋಚನೆ ಮಾಡಿ?

ಉಪಸಂಹಾರ :

ಲೋಕಾಯುಕ್ತರ ಅಧಿಕಾರವು - ಎಷ್ಟೇ ಬೃಹತ್ತಾಗಿ ವ್ಯಾಪಿಸಿದ್ದರೂ। ರಾಜಕೀಯ ಪ್ರಭುಗಳು - ಲೋಕಾಯುಕ್ತ ವ್ಯಾಪ್ತಿಗೆ - ಬಾರದಿರುವುದು ತುಂಬ ಅನ್ಯಾಯ.

ಇದುವರೆವಿಗೂ ಲೋಕಾಯುಕ್ತರ ಬಲೆಯಲಿ ಬಿದ್ದ - ಖದೀಮರಿಂದ - ಸಿಕ್ಕ ಕಪ್ಪು ಹಣ ನೂರಾರು ಕೋಟಿ ॥ ಹೀಗೆಯೆ ಎಲ್ಲಾ - ಖಾತೆಗಳ ಮೇಲೆ ಧಾಳಿ ನಡೆಸಿದರೆ ಸಿಗುವ ಕಪ್ಪು ಹಣ ಸಹಸ್ರಾರು ಕೋಟಿ ॥ ಅರವತ್ತು ವರ್ಷದಿಂದ ರಾಜ್ಯವಾಳಿದಾ - ವಿವಿಧ ಪಕ್ಷಗಳ ಭ್ರಷ್ಟಾಚಾರೀ - ರಾಜಕೀಯ ಪ್ರಭುಗಳ ಆಸ್ತಿಯ ಮೇಲೆ ಲೋಕಾಯುಕ್ತರಿಗೆ ಅಧಿಕಾರ ಸಿಕ್ಕು ಧಾಳಿ ನಡೆಸಿದರೆ - ಆ ಕಪ್ಪು ಹಣವು - ಲಕ್ಷಾಂತರ ಕೋಟಿ ಆಗಬಹುದಲ್ಲವೇ?

Sri Vidyabharathi Book Centre, Sringeri

CC-O. In Public Domain. Digitized by eGangotri

ಪರದೇಶಿ ಸಾಲದ ಹಣ

ಪುಕ್ಕಟೆ ಯಾರೂ ಹಣ ಕೊಟ್ಟಿಲ್ಲ - ಅಲ್ಪ ಬಡ್ಡಿಯಾ ಕೋಟಿ ಕೋಟಿ ಹಣ। ಬಡ್ಡಿ ತೆರುವವರು - ಭಾರತೀಯರು। ಸಾಲ ಹೊತ್ತಿರುವವರು ಭಾರತೀಯರು। ಸಾಲ ಹೊರುವವರು ಮುಂದಿನ ಪೀಳಿಗೆ। ಭ್ರಷ್ಟಾಚಾರದ ಹಣ, ಸರ್ಕಾರದಿಂದಾ - ಮುಟ್ಟುಗೋಲು। ನ್ಯಾಯಾಲಯ ತೀರ್ಪಿಗೆ ಹಲವರ್ಷಬೇಕು। ಭಾರತ ಕಾನೂನು ಎಷ್ಟು ಸಡಿಲ ? ಕಠಿಣವಾಗಲು ಸಾಧ್ಯವಿಲ್ಲವೇ।

ಯಾವ ಸರ್ಕಾರ ಜನತೆಗೆ ಹಿತವೋ - ಯೋಚಿಸಬೇಕಾಗಿದೆ ? ಪ್ರಜಾಪ್ರಭುತ್ವವೊ ? ಸರ್ವಾಧಿಕಾರವೊ ? ಅಧ್ಯಕ್ಷಾಡಳಿತವೊ ? ಮಿಲಿಟರಿ ಆಡಳಿತವೊ। ಬ್ರಿಟಿಷರಾಡಳಿತವೊ ? ಮುಸಲ್ಮಾನ್ ದರ್ಬಾರೊ ? ರಾಜರಾಡಳಿತವೊ ? ರಾಮರಾಜ್ಯವೊ ?

ಭಾರತೀಯರೇ ನೀವೇ ನಿರ್ಧರಿಸಿ

ಇತೀ ಲಾವಣಿಕಾರ

ಲಕ್ಷ್ಮೀಕಾಂತ್ ಕಡಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿಚಿತ್ತ ಸತ್ಯ - ನರ ಚಿತ್ತಲವಲೇಶವಿಲ್ಲವಯ್ಯ

ಎರಡು ಸತ್ಯ ಕಥೆಗಳು - ಗದ್ಯಕಾವ್ಯ

(ನನ್ನ ಮಿತ್ರರು ನನಗೆ ಹೇಳಿದಾ ಅವರ ಜೀವನದ ಸತ್ಯ ಕಥೆಗಳು - ನಂಬಿದರೆ ನಂಬಿ - ಬಿಟ್ಟರೇ ಬಿಡಿ)

ಎರಡು ಕತೆಗಳೂ ಅವರ ಮನೆಗೆ ಸಂಬಂಧಪಟ್ಟದ್ದೆ - ಅವರೀಗಿರುವರು - ಎಂಬತ್ತೈದು ದಾಟಿಹರು. ನನ್ನ ವಯಸಿಗಿಂತ ನಾಲ್ಕೈದು ವರ್ಷ ಮುಂದಿರುವರು. ನಾವೀರ್ವರೂ ಕಲ್ಲೂರು ಶ್ರೀರಾಮನಿಗೆ ಪರಮಭಕ್ತರು. ಕಲ್ಲೂರಿರುವುದು, ತುಮಕೂರು ಜಿಲ್ಲೆ ಗುಬ್ಬಿಯ ತಾಲ್ಲೋಕ್, ಸಾಮಾನ್ಯ ಗ್ರಾಮ. ದೇವಾಂಗದವರೇ ಪ್ರಮುಖ ಜಾತಿಯಲ್ಲಿ. ವಿದ್ಯುಚ್ಛಾಲಿತ ಮಗ್ಗಗಳೇ ಲೆಕ್ಕವಿಲ್ಲದಷ್ಟು. ಅಲ್ಲಿನ ರೇಷ್ಮೆ ಕಲಾಪತ್ ಸೀರೆ ಅತ್ಯಂತ ಶ್ರೇಷ್ಠ. ಮಗ್ಗವೇ ಪ್ರತಿ ಸಂಸಾರದ ಮುಖ್ಯ ಜೀವನ. ರೇಷ್ಮೆಯ ಜೊತೆಗೆ ಕಾಟನ್ ಸೀರೆಗಳೂ ತಯಾರಾಗುವುವು. ಕರ್ನಾಟಕ ಸರ್ಕಾರ ರೇಷ್ಮೆ ವ್ಯಾಪಾರಕ್ಕೆ ಒತ್ತು ಕೊಡಲಿಕಾಗಿ 'ಪ್ರಿಯದರ್ಶಿನಿ' ಆಫೀಸ್ ಒಂದನ್ನು ತೆರೆದು 'ರೇಷ್ಮೆ ಕೈಗಾರಿಕೆ' ಉಳಿಸಿರುವರಲ್ಲಿ. ಮಗ್ಗದ ಕೆಲಸ ಮುಗಿಯಿತೆಂದರೆ ದೇವಾಂಗದವರಿಗೆ ಸಾಯಂ ಸಮಯದಿ ಭಜನೆ-ಸಂಗೀತ ಬಹು ಆಸಕ್ತಿ.

ಕಲ್ಲೂರಿನ ಮತ್ತೊಂದು ಪ್ರಮುಖ ಆಕರ್ಷಣೆ ಅಮೃತಶಿಲಾ ಕೋದಂಡರಾಮರು ಅಲ್ಲಿದ್ದುದೇ - ಹದಿಮೂರುಮನೆ ಬ್ರಾಹ್ಮಣ್ಯ. 2-3 ಮನೆಗಳ ಬಿಟ್ಟರೆ ಮಿಕ್ಕವರೆಲ್ಲಾ ಮಧ್ಯಮವರ್ಗವೆ. 70 ವರ್ಷದಿಂದ ಅವರಲ್ಲಿದ್ದುದು ಅಪ್ರತಿಮ ಒಗ್ಗಟ್ಟು. 70 ವರ್ಷದ 'ಹಿಂದೆ ಪ್ರತಿವರ್ಷ ಶ್ರೀರಾಮನವಮಿ 9 ದಿನಕಾಲ ಚಪ್ಪರದ ಕೆಳಗೆ. ಸದಸ್ಯರೆಲ್ಲರೂ ಸರ್ಕಾರೀ ನೌಕರರಾಗಿ ಅವರಿಗೆ ವಿರಾಮ 'ಮೇ, ಜೂನ್' ತಿಂಗಳಲ್ಲಿ. ಆಗಲೇ ನಮ್ಮ ಶ್ರೀರಾಮನವಮಿ. ಮುಂಗಾರುಮಳೆಯು ಏಪ್ರಿಲ್‌ನಿಂದ ಪ್ರಾರಂಭ. ಒಮ್ಮೊಮ್ಮೆ ಮಳೆ ಬಂದು ನಮ್ಮ ಕಾರ್ಯಕ್ರಮ ನಿಂತುಹೋಗುವುದು. ಹದಿಮೂರು ಮನೆಯ ಒಗ್ಗಟ್ಟೆಂದರೆ ಪಟ್ಟಣದವರೆಲ್ಲ ಹಳ್ಳಿಗೆ ಸಂಭ್ರಮದಿಂದ ಬಂದು ಶ್ರೀರಾಮನವಮಿ ಮಾಡಿ ಪ್ರತಿನಿತ್ಯವೂ ಪಾನಕ ಕೋಸಂಬರಿ, ನವಮಿ ಪಟ್ಟಾಭಿಷೇಕ ಊರಿಗೆಲ್ಲಾ ಭೋಜನ.

ನಮಗೆ ಸಂಕಟ ಶಿವದೇವಾಲಯದ ಮುಂದೆ ಚಪ್ಪರಹಾಕಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀರಾಮನವಮಿಯನ್ನು ಆಚರಿಸುತ್ತಿದ್ದುದು. 60 ವರ್ಷದ ಹಿಂದೆ ಏನೋ ಒಂದು ಹುರುಪು. ನಮಗ್ಯಾರೋ ದಾನಿ ಜಾಗಕೊಟ್ಟರು. ನಮ್ಮ ಹುಚ್ಚು - ''ಲಾಟರಿ ನಡೆಸಿ ಶ್ರೀರಾಮಮಂದಿರ ಕಟ್ಟಬೇಕೆಂದು'' ಬೆಂಗಳೂರು ಸಿಟಿ ವ್ಯವಹಾರಕ್ಷೇತ್ರ. ಒಳ್ಳೊಳ್ಳೆ ಸಂಗೀತ ಕಛೇರಿಗಳನ್ನು ನಡೆಸುತ್ತಿದ್ದ ಹೆಮ್ಮೆ ನಮ್ಮಗಳದು. ಆ ಕಾಲಕ್ಕೆ ಪಿಟೀಲು ವಿದ್ವಾನ್ ಶ್ರೀ ಚೌಡಯ್ಯ ಹೆಸರಾಂತ ವಿದ್ವಾಂಸರು. ಶ್ರೀ ಬದರಿನಾರಾಯಣ್ ಆದರ್ಶಮಂತ್ರಿಗಳು ನಮ್ಮ ಊರಿನಾ ಶ್ರೀ ಚೌಡಯ್ಯನವರ ಕಛೇರಿಗೆ ಹಳ್ಳಿಯ ಹಾಗೂ ತಾಲ್ಲೋಕ್ ಜನ 50 ಸಹಸ್ರ. ದಂಗು ಬಡಿದರು ಚೌಡಯ್ಯನವರು. ನಮ್ಮ ಒಗ್ಗಟ್ಟು, ಕಛೇರಿಗೆ ಜನ, ಏನು ಬಂದಿತೋ ಅವರಿಗೆ ಮನಸ್ಸು, ''ಈ ಕ್ಷೇತ್ರದಲ್ಲಿ ಶ್ರೀ ರಾಮಮಂದಿರ ಕಟ್ಟಿರಿ'' - ಒಂದು ಪೈಸೆ ಕೇಳದೆ ಕಛೇರಿ ನುಡಿಸುವೆ. ಶ್ರೀ ಬದರಿನಾರಾಯಣ್ ನನಗೆ ಪರಿಚಯ. ಅವರ ಸಹಕಾರ ನಿಮಗೆ ಒದಗಿಸುವೆ' ಎಂದರು ಶ್ರೀ ಚೌಡಯ್ಯನವರು. ಅವರ ಆತ್ಮವಿಶ್ವಾಸ ನಮಗೆ ಅತಿ ಸ್ಫೂರ್ತಿ. ನಮ್ಮಲ್ಲಿ ಕೆಲವರು ಹಿರಿಯರು, ಕಿರಿಯರು ಎಲ್ಲರೂ ಬೃಹತ್ತಾದ ಕಪಿ ಸೈನ್ಯವೇ ! ಬೆಂಗಳೂರಿಗೆ ಹೋಗಿ - ಬದರೀನಾರಾಯಣ್ ಕಂಡೆವು. ಶ್ರೀ ಚೌಡಯ್ಯ ಉಪಾಧ್ಯಕ್ಷರು, ಶ್ರೀ ಕೆ.ಯಸ್. ಜೋಯ್ಸ್, ಕಾರ್ಯದರ್ಶಿಗಳು. 1952-53 ನಮ್ಮ ಯೋಜನೆ ಕಾರ್ಯಗತ. 'ಒಂದು ರೂ.ಗೆ ಒಂದು ಟಿಕೆಟ್ ಲಾಟರಿ ಮುಖ ಬೆಲೆ'. ಆಗಿನ ಕಾಲದಿ ಮನೆ ಮನೆ ತಿರುಗಿ, ಖರ್ಚುಗಳೆಲ್ಲಾ ನಮ್ಮ ಸ್ವಂತದ್ದೆ. 28 ರಿಂದ 30 ಸಹಸ್ರ ರೂಪಾಯಿ ವಸೂಲ್ ಮಾಡಿದೆವು. ಬಹುಮಾನ ಹಣವನ್ನು ಕೆಲವರು ಪಡೆಯದೆ ಶ್ರೀರಾಮಮಂದಿರಕ್ಕೆ ದಾನವಾಗಿ ಕೊಟ್ಟರು. ಖರ್ಚೆಲ್ಲ ಹೋಗಿ 25 ಸಹಸ್ರ ಹಣ ನಮಗೇ ಉಳಿಯಿತು. ಆಗಿನ ಕಾಲಕ್ಕೆ 25 ಸಹಸ್ರಕ್ಕೆ ದೊಡ್ಡ ಸಭಾಂಗಣ ಸುಂದರಗರ್ಭಗುಡಿ ಸಿದ್ಧವಾಗಿ ಸುಂದರ ಗೋಪುರ ನಿರ್ಮಾಣವಾಯಿತು. ಗರ್ಭಗುಡಿಯ ಸ್ಥಳವನ್ನು ಅಗೆದಾಗ, ಒಂದು ಬಿಂದಿಗೆ ದೊರೆತು, ಅದರಲ್ಲಿ ಹದಿನಾಲ್ಕು ಸಾಲಿಗ್ರಾಮ, ಆಂಜನೇಯ, ಅನ್ನಪೂರ್ಣ ಹದಿನಾಲ್ಕು ನಕ್ಷತ್ರಮಾಲಿಕೆಗಳು ದೊರೆತು ಶ್ರೀರಾಮಮಂದಿರದ ಭವಿಷ್ಯಕ್ಕೆ ಕಾರಣವಾದುವು. ಶ್ರೀರಾಮ ಪಟ್ಟಾಭಿಷೇಕ ಫೋಟೋ ಇಟ್ಟು ಪೂಜೆ ಮಾಡುವುದು ಮನಸಿಗೆ ತಾಗದೆ ಶ್ರೀರಾಮವಿಗ್ರಹ ಪ್ರತಿಷ್ಠೆ ಮಾಡಲು ಎಲ್ಲರ ಮನಸೂ ಹಾತೊರೆಯುತ್ತಿತ್ತು. ಕಲ್ಲೂರ ಪುಣ್ಯವೇನೋ ? ಶ್ರೀರಾಮಚಂದ್ರನೇ ದಾರಿ ತೋರಿಸಿದ. ಕತೆಗಾರ ನಾನು ಅಂದಿನ ದಿವಸದಿ ಪ್ರಾಯದ ಹುಡುಗ. ಬಡತನದಿಂದ ವಿದ್ಯೆ ಸಾಗದೆ ಇಂಟರ್ ಮುಗಿಸಿ ಖಾಸಗಿ ಮಾಧ್ಯಮಿಕ ಶಾಲೆಯ ಉಪಾಧ್ಯಾಯ. ಯಾರೋ ಮಿತ್ರರು ನನಗೊಂದು ಖಾಸಗಿ ಮನೆಯ ಪಾಠವನ್ನು ಗೊತ್ತು ಮಾಡಿಕೊಟ್ಟರು. ಅವರ್‍ಯಾರೂ ಬೇರಲ್ಲ(ಶ್ರೀ ಎಂ.ಯಸ್. ರಾಮಯ್ಯನವರ ಬೀಗರು) ಶ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಆರ್.ಪಿ.ಎಂ. ಮುನಿಶಾಮಪ್ಪನವರು. ಈರ್ವರು ಪತ್ನಿಯರು, ನಾಲ್ಕು ಗಂಡು, ಎರಡು ಹೆಣ್ಣುಮಕ್ಕಳು - ಮುನಿಶಾಮಪ್ಪನವರಿಗೆ. ಆಗಿನ ಕಾಲಕೆ ಮುನಿಶಾಮಪ್ಪ ಎಂದರೆ ಅತಿ ದೊಡ್ಡ ಹೆಸರು ತರಗು ಪೇಟೆಯಲ್ಲಿ. ಎಣ್ಣೆ ಹಾಗೂ ದಿನಸಿಯ ಮಂಡಿ ಆ ಯಜಮಾನರದು. ಕಲ್ಲೂರ ಪುಣ್ಯ ನಾಸವರ ಮಕ್ಕಳಿಗೆ ಖಾಸಗಿ ಉಪಾಧ್ಯಾಯನಾಗಿ ಪಾಠ ಹೇಳುವುದು। ಅತ್ಯಂತ ಶ್ರೇಷ್ಠ - ಶ್ರೀರಾಮ ಭಕ್ತರು ಶ್ರೀ ಆರ್.ಪಿ.ಯಂ. ಮತ್ತು ಕುಟುಂಬ.

ಅವರ ಮನೆಯ ಎದುರಿಗೇ ಶ್ರೀ ಬದರೀನಾರಾಯಣ್‌ರವರ ಸ್ವಗೃಹ. ಬೆಂಗಳೂರಿನಿಂದ ಕಲ್ಲೂರಿಗೆ ಸುಮಾರು 100 ಕಿ.ಮೀ. ನಮ್ಮ ಹಳ್ಳಿಯಲ್ಲಿ ರಾಮಕಟ್ಟಡವಾಗಿ ನಾಲ್ಕು ವರ್ಷ ಕಳೆಯಿತು. ಪ್ರತಿವರ್ಷ ತಪ್ಪದೆ ಶ್ರೀ ಆರ್.ಪಿ.ಯಂ.ರಿಗೆ ಶ್ರೀರಾಮನವಮಿಯ ಆಹ್ವಾನಪತ್ರಿಕೆ ಕೊಡುತ್ತಲೆ ಇದ್ದೆ. ಪಟ್ಟಾಭಿಷೇಕದ ದಿನ ''ಬರುವೆನೆನ್ನುವರು ಕಾರ್ಯನಿಮಿತ್ತ ಬಾರದಾದರು''. ನಾಲ್ಕನೆಯ ವರ್ಷವೂ ಮಾಮೂಲ ಆಹ್ವಾನಪತ್ರಿಕೆಯಿತ್ತೆ. ''ಬರುವೆನೆಂದರು - ಬಾರಲೆ ಇಲ್ಲ''. ಪಟ್ಟಾಭಿಷೇಕದ ದಿನ ಸುಮಾರು 12 ಗಂಟೆ. ಕಲ್ಲೂರಿನಲ್ಲಿ ಮಹಾ ಮಂಗಳಾರತಿಗೆ ನಾವೆಲ್ಲ ಸಿದ್ಧ. 2ನೇ ಮಹಾಮಂಗಳಾರತಿ ಆಗಬೇಕು. ಯಾರೋ ಹೇಳಿದರು 'ಕಾರು' ಬಂತೆಂದು. ಮಂಗಳಾರತಿನಿಲ್ಲಿಸಿ ಕಮಿಟಿಯವರೆಲ್ಲ ಕಾರಿನ ಬಳಿ ದೌಡಾಯಿಸಿದೆವು. ನೀಲ ವರ್ಣದ ಜರತಾರಿ ಪೇಟದ ಅತ್ಯಂತ ಎತ್ತರದ, ಕಚ್ಚೆ ಪಂಚೆಯ ನಿಗರ್ವಿ ಆರ್.ಪಿ.ಎಂ. ನಮ್ಮ ತಂದೆ ಕಡಬ ಶಾಮಣ್ಣರೊಡಗೂಡಿ ಕಾರಿನಲ್ಲಿ ಬಂದಿಳಿದರು ಆಕುಗ್ರಾಮಕೆ. ಶ್ರೀರಾಮ ಸೈನ್ಯಕೆ ಅಪಾರ ಆನಂದ, ಜೈಕಾರ ಹಾಕಿದರು। ಊರ ಪ್ರಮುಖರು, ಸಮಿತಿಯವರು ಪೂರ್ಣಕುಂಭದೊಡನೆ ಅವರನ್ನಾದರಿಸಿ, ಮಾಲಾರ್ಪಣೆ ಮಾಡಿ, ಶ್ರೀರಾಮನ ಮಂದಿರದ ವಿಶ್ರಾಂತಿ ಗೃಹಕೆ ಕರೆದೊಯ್ದರು. ಕೆಲ ನಿಮಿಷಗಳಲ್ಲಿಯೇ ಅವರು ತಯಾರಾಗಿ ಶ್ರೀರಾಮಮಂದಿರದ ಸಭಾಂಗಣದ ಹಜಾರ ತಲ್ಪಿದರು. ಸುಮ್ಮನೆ ಕಟ್ಟಡವ ವೀಕ್ಷಿಸಿದರು. ಗರ್ಭಗುಡಿಯನ್ನು ಗಮನಿಸಿದರು. ಪ್ರತಿಮೆಗಳಿಲ್ಲದೆ ಬೃಹತ್ ಶ್ರೀರಾಮ ಪಟ್ಟಾಭಿಷೇಕದ ಪೋಟೋ ದರ್ಶಿಸಿ ಭಕ್ತಿಯಿಂದ ಕೈಮುಗಿದರು. ನಾನೊಬ್ಬನೇ ಅವರಿಗೆ ಪರಿಚಯ. ಮಂಗಳಾರತಿ, ತೀರ್ಥಪ್ರಸಾದ, ಸುಖೀ ಭೋಜನ ನಡೆದ ಮೇಲೆ, ವಿಶ್ರಾಂತಿ ಪಡೆಯದೆ ರಾಮಸೇವಾ ಕಮಿಟಿಯ ಸದಸ್ಯವರ್ಗವನ್ನೆಲ್ಲಾ ಸಂಧಿಸಲಿಚ್ಛಿಸಿದರು. ಕಮಿಟಿಯವರಲ್ಲದೆ ಊರಿನ ಹಿರಿಯರು ಶ್ಯಾನುಭೋಗ, ನನ್ನ ಸೋದರಮಾವ ಅಂದಿನಕಾಲದ (ಎಂ.ಎಲ್.ಎ) ಶ್ರೀರಾಮಕೃಷ್ಣಯ್ಯ, ಮೆಂಬರ್, ಪಟೇಲ್, ಡಾಕ್ಟರು, ಮಾಸ್ತರು ಎಲ್ಲರನ್ನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಆರ್.ಪಿ.ಯಂ. ಅವರ ಭಾಷೆ ತೆಲುಗು. ನನಗೂ ಪರಿಚಯ ತೆಲುಗುಭಾಷೆ. ನಮ್ಮ ಒಗ್ಗಟ್ಟು ಅವರಿಗೆ ಹಿಡಿಸಿತು. ಕೈಮಗ್ಗದ ಸಿಲ್ಕ್ ಸೀರೆ ಒಂದೆರಡು ಕೊಂಡರು. ಎಲ್ಲರೊಡನೆಯೂ ಸರಳವಾಗಿ, ಯೋಗಕ್ಷೇಮ ವಿಚಾರಿಸಿದರು. ಅಂದು ಭಾನುವಾರ - ನನ್ನನ್ನು ಕುರಿತು ತೆಲುಗಿನಲ್ಲಿ ''ನಾಳೆ ಸೋಮವಾರ ನಿಮ್ಮ ಕಮಿಟಿಯ ಹಿರಿಯ ಸದಸ್ಯರು ನಿನ್ನೊಡನೆ ನನ್ನನ್ನು ನೋಡಲು ಬೆಂಗಳೂರಿಗೆ ಬರಲಿ'' ಎಂದು ಹೇಳುತ್ತಾ ಹಸ್ತಲಾಘವವಿತ್ತು ಬೆಂಗಳೂರಿಗೇ ಹಿಂದಿರುಗಿದರು.

ಕಮಿಟಿಯವರ ಸಂತೋಷಕ್ಕೆ ಪಾರವೇ ಇಲ್ಲ. ದೇವರು ಪ್ರತ್ಯಕ್ಷನಾದ - ಏನು ಕೇಳುವುದು? ಎಲ್ಲರ ಪ್ರಶ್ನೆ. ಅಂದು ರಾತ್ರೆ ತುಂಬಾ ಯೋಚಿಸಿ ನಿರ್ಧರಿಸಿದರು ಕಮಿಟಿಯವರೆಲ್ಲ. ನನ್ನನ್ನು ಕುರಿತು 'ನೋಡಪ್ಪಾ' ನೀನು ಅವರ ಮಕ್ಕಳಿಗೆ 3-4 ವರ್ಷದಿಂದ ಗುರು. ಹೇಗಾದರೂ ಮಾಡಿ ಅವರು ನಮ್ಮ ಮಂದಿರಕ್ಕೆ 'ಕಾಶಿಯಿಂದ ಅಮೃತಶಿಲಾ ಕೋದಂಡರಾಮ, ಸೀತಾ ಲಕ್ಷ್ಮಣ, ಆಂಜನೇಯರನ್ನು ತರಿಸಿಕೊಡುವಂತೆ ಒತ್ತಾಯಿಸು' ಎಂದರು. ನನಗೂ ಭಯ, ಸಂಕೋಚ. 'ಆಗಲಿ! ನೋಡೋಣ' ಎಂದದೆ. ಮಾರನೆಯ ದಿನ ಸುಮಾರು 10-10.30ಕ್ಕೆ ಅವರ ಮನೆಗೆ ನಾವೆಲ್ಲರೂ ಹಾಜರ್. ಚಾಮರಾಜಪೇಟೆ ಅಪ್ಪೂರಾವ್ ರಸ್ತೆ ಅವರ ಬೃಹತ್‌ಮನೆ. ನಾವು 8-10 ಜನ ಎಲ್ಲರಿಗೂ ಪ್ರಕಾಶ್‌ಕೆಫೆಯಿಂದ ಕೇಸರಿಭಾತ್, ಮಸಾಲೆದೋಸೆ, ಉತ್ತಮ ಕಾಫಿ. ಅವರೂ ಸ್ನಾನ ಪೂಜೆ, ಉಪಾಹಾರ ಮುಗಿಸಿ ಸುಮಾರು ಬೆಳಗಿನ 11-11.30ರ ಸಮಯಕ್ಕೆ ನಮ್ಮೊಡನೆ ಕುಳಿತರು. ಅವರ ಈರ್ವರು ಪತ್ನಿಯರೂ ಹಾಜರ್. ನನ್ನನ್ನು ಕುರಿತು, 'ಏಯ್ ಮೇಷ್ಟ್ರೇ! ಏನ್ ತೀರ್ಮಾನ?' ಅಂದರು. ನಾನು ನನ್ನ ಸಮಿತಿಯ ಹಿರಿಯರ ಮುಖ ನೋಡುತ್ತಾ ''ಯಜಮಾನರೇ ! ಬೃಹತ್ ಶ್ರೀರಾಮಮಂದಿರ ಕಟ್ಟಿದ್ದೇವೆ. ನೀವೂ ವೀಕ್ಷಿಸಿದ್ದೀರಿ. ನಮ್ಮೆಲ್ಲರ ಅಭಿಮತ ನೀವು ನಡೆಸಿ ಕೊಡುವುದಾದರೆ ಆಚಂದ್ರಾರ್ಕವಾದ ಸೇವೆ. ಕಾಶಿಯಲ್ಲಿ ಅಮೃತಶಿಲಾ ಶ್ರೀರಾಮ, ಲಕ್ಷ್ಮಣ, ಸೀತಾ, ಆಂಜನೇಯ ವಿಗ್ರಹಗಳನ್ನು ತರಿಸಿಕೊಟ್ಟರೆ, ನಿಮಗೂ, ನಿಮ್ಮ ಕುಟುಂಬಕ್ಕೂ ನಿಮ್ಮ ಮಕ್ಕಳು, ಮೊಮ್ಮಕ್ಕಳ ಕಾಲಕ್ಕೂ ಅದು ಜ್ಞಾಪಕದಲ್ಲಿರುವುದು'' ಎಂದೆ. ಅವರು ನಸುನಗುತ್ತಾ ಈರ್ವರು ಪತ್ನಿಯರ ಮುಖ ನೋಡಿ, 'ಏಯ್! ಮೇಷ್ಟ್ರೇ? ಎಂತಹ ದೊಡ್ಡ ಏಟು ಹಾಕಿದಿರಿ' ಎಂದರು. ನಾನು ಸುಮ್ಮನಿದ್ದೆ, ಈರ್ವರು ಪತ್ನಿಯರೂ ದನಿಗೂಡಿಸಿದರು (ತೆಲುಗಿನಲ್ಲಿ) ಯಜಮಾನ್ರು ಹೇಳಿದ್ರು. ಶ್ರೀ ರಾಮಮಂದಿರ ತುಂಬಾ ಚೆನ್ನಾಗಿದೆಯಂತೆ ಅಲ್ಲಿಗೆ ಕರೀಶಿಲೆಯ ವಿಗ್ರಹಯೋಚನೆ ಮಾಡಿದ್ದರು. ಈಗ ನಮ್ಮ ಮೇಷ್ಟು 'ಅಮೃತ ಶಿಲಾ ವಿಗ್ರಹ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳುತ್ತಿದ್ದಾರೆ, ನಮಗೆ ತುಂಬಾ ಸಂತೋಷ' ಎಂದರು. ಯಜಮಾನ್ರು ಒಂದೇ ಮಾತಿನಲ್ಲಿ ಸಮಿತಿಯವರನ್ನು ಕುರಿತು 'ನೀವೆಲ್ಲಾ ಒಗ್ಗಟ್ಟಿನಿಂದ ಶ್ರೀರಾಮ ಸೇವೆ ಮಾಡುತ್ತಿರುವಿರಿ. ನನ್ನದೊಂದು ಕಿರುಕಾಣಿಕೆ ಅಲ್ಲಿ. ನೀವು ಕಾಶಿಯಿಂದ ಮಾಹಿತಿ ಪಡೆದು ನನಗೆ ತಿಳಿಸಿ. ಈರ್ವರಿಗೆ ರೈಲು ಛಾರ್ಜು, ಊಟೋಪಚಾರಕೊಡುವೆ. ವಿಗ್ರಹಗಳಾದ ಮೇಲೆ ನನಗೆ ಮಾಹಿತಿ ಕೊಡಿ. ಆಗಾಗ್ಗೆ ಅದಕ್ಕೆ ಸಂಬಂಧಿಸಿದ ವಿಷಯ ನನ್ನೊಡನೆ ಚರ್ಚಿಸಿ, ನಾನೂ ನಿಮ್ಮ ಸಮಿತಿಯಲ್ಲೊಬ್ಬ'' ಎಂದರು. ಸಮಿತಿಯವರು ಹರ್ಷೋದ್ಗಾರಮಾಡಿ, ಜೈಕಾರ ಮಾಡಿದರು. ನಾಲ್ಕಾರು ಮಾಸದಲ್ಲಿ ನಾಲ್ಕೂಮೂರ್ತಿಗಳು ಬಂದುವು. ಜಲಾಧಿವಾಸಾ - ಧಾನ್ಯಾದಿವಾಸಾ - ಪರ್ಣಾಧಿವಾಸಾ ಮುಗಿದು, ಪುನಃ ಪ್ರತಿಷ್ಠಾಪನೆಗೆ ಹಣದ ಮುಗ್ಗಟ್ಟು. ವಿಗ್ರಹಗಳು ಬಂದಾಯಿತು ಈ ಬಾರಿ ಪ್ರತಿಷ್ಠಾಪನೆಗೆ ದ್ವಿಪತ್ನಿಯರನ್ನು ಹಿಡಿದೆ ''ವಿಗ್ರಹಕ್ಕೆ ಹಣಕೊಟ್ಟವರು ನೀವು, ಪ್ರತಿಷ್ಠೆ ಯಾರೋ ಮಾಡಿದರೆ, ಪುಣ್ಯ ಯಾರಿಗೆ ?'' ಎಂಬ ಸಮಸ್ಯೆಯನ್ನು ತಂದು ಜಯಶಾಲಿಯಾದೆ. ಶ್ರೀ ಆರ್.ಪಿ.ಯಂ. ಮತ್ತು ಅವರ ಅಣ್ಣ ಶ್ರೀ ವೆಂಕಟಶಾಮಪ್ಪನವರ ಸನ್ನಿಧಿಯಲ್ಲಿ ಸೀತಾ-ರಾಮ- ಲಕ್ಷ್ಮಣ-ಆಂಜನೇಯರ ಅಮೃತ ಶಿಲಾವಿಗ್ರಹ ಪ್ರತಿಷ್ಠಾಪನೆಯಾಯಿತು. ನಂತರ ಗೋಪುರಕುಂಭಾಭಿಷೇಕ, ಬದರಿ ನಾರಾಯಣ್ ಮುಖೇನ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹಾದ್ದೂರ್‌ರವರ ಆಗಮನ ಈ ಕುಗ್ರಾಮಕ್ಕೆ. ಶ್ರೀ ಆರ್.ಪಿ.ಯಂ. ಸಹೋದರರಿಗೆ ಬಿನ್ನವತ್ತಳೆ, ಶಾಲು ಹಾಗೂ ಮಾಲಾರ್ಪಣೆ ಮಹಾರಾಜರವರಿಂದ.

ಹಣವಿಲ್ಲದಿದ್ದ ಶ್ರೀರಾಮಮಂದಿರ ಇಂದು ಆರ್ಥಿಕ ಸುಸ್ಥಿತಿಯನ್ನು ಪಡೆದಿದೆ. ಶ್ರೀ ಆರ್.ಪಿ.ಯಂ ಸೋದರರು - ಅವರ ಕುಟುಂಬ ವಿಧಿವಶರಾದರೂ, ಶ್ರೀ ಆರ್.ಪಿ.ಯಂ. ಮಕ್ಕಳು ಶ್ರೀರಾಮಮಂದಿರದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಆ ಕಮಿಟಿಯ ಅಂದಿನ ಅಧ್ಯಕ್ಷರೂ, ಹಿತೈಷಿಗಳೂ ಅದೃಶ್ಯವಾಗಿದ್ದಾರೆ. ಆದರೆ ಯುವ ಸಮೂಹ ಇಂದಿಗೂ ಶ್ರೀರಾಮ ಸೇವಾನಡೆಸುತ್ತಿದೆ. ಅತಿಥಿಮಂದಿರ, ಕಲ್ಯಾಣಮಂದಿರ, ಬಡಮಕ್ಕಳಿಗೆ ಪ್ರತಿನಿತ್ಯ ಊಟ, ವರ್ಷಕ್ಕೊಮ್ಮೆ ವಿದ್ಯಾರ್ಥಿವೇತನ, ಶ್ರೀ ರಾಮಕೃಷ್ಣಾಶ್ರಮ (ತುಮಕೂರು) ಸೇವಾ ಕೈಂಕರ್ಯವೂ ನಡೆಯುತ್ತಿದೆ.

ಈ ಸಮಿತಿಯ ನಿಸ್ಪೃಹ ಸೇವಕ ಅತ್ಯಂತ ಹಿರಿಯ ವ್ಯಕ್ತಿಯ ಜೀವನದ ಕತೆಯೇ ಈ ಮುಂದೆ. ಅವರು ಜೀವನದಲ್ಲಿ ಕಂಡ ಎರಡು ಬದುಕುಗಳನ್ನು ನನಗೆ ನಿವೇದಿಸಿದರು. ನಾನು ಓದುಗರಿಗೆ ನಿವೇದಿಸುವೆ. ಅವರ ಹೆಸರು ಅನಾವಶ್ಯಕ ಕತೆ ಮಾತ್ರ ಕಹಿ-ಸಿಹಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಥಮ ಕಥೆ (ದುಃಖಾಂತ)

ಅವರು ನನ್ನನ್ನು ಕುರಿತು 'ನೋಡೀ' ನಾವೆಲ್ಲಾ ಶ್ರೀ ರಾಮನ ಪರಮಭಕ್ತರು. ನನ್ನ ಜೀವನದಲ್ಲಿ ನಾನು ಅನುಭವಿಸಿದ ಸತ್ಯಕತೆ ನಿಮಗೆ ತಿಳಿಸುವೆ. ಇದು ದೈವದ ತಪ್ಪೇ, ಮಾನವ ತಪ್ಪೇ? ನೀವೇ ಹೇಳಿ' ಎಂದರು.

ಇವರೂ ಕನ್ನಡ ದೇವಾಂಗದವರೇ. ತಂದೆತಾಯಿಗಳಿಗೆ ಇವರೂ, ಇವರ ತಮ್ಮ ಈರ್ವರ್ರೇ ಮಕ್ಕಳು. ಅಣ್ಣತಮ್ಮಂದಿರಿಗೆ ವಯೋವ್ಯತ್ಯಾಸ ನಾಲ್ಕಾರು ವರ್ಷಗಳು, ಅತ್ಯಂತ ಬಡ ಕುಟುಂಬ ತಂದೆ ತಾಯಿಗಳಿಗೆ ಈ ಮಕ್ಕಳೆಂದರೆ ಪಂಚ ಪ್ರಾಣ. ಇವರಿದ್ದುದು ಚಾಮರಾಜಪೇಟೆ ಬೆಂಗಳೂರು ಬಡಾವಣೆ. ತಂದೆಯ ಕಾಲದಿಂದ ದೇವರಲ್ಲಿ ಶಾಸ್ತ್ರದಲ್ಲಿ, ಜ್ಯೋತಿಷ್ಯದಲ್ಲಿ ಅಪಾರ ನಂಬಿಕೆ. ಆಗಿನ ಕಾಲಕ್ಕೆ ಚಾಮರಾಜಪೇಟೆಯ ಜ್ಯೋತಿಷ್ಯರತ್ನ ರಾಮಚಂದ್ರಶಾಸ್ತ್ರಿಗಳು (ಹೆಸರು ಜ್ಞಾಪಕವಿಲ್ಲ) ಅಪಾರ ಪ್ರಸಿದ್ಧ ಜ್ಯೋತಿಷಿ. ಅವರಿಗೆ ಅಪಾರ ಶಿಷ್ಯಂದಿರು. ಇವರ ತಾಯ್ತಂದೆಗಳೂ, ಅಣ್ಣತಮ್ಮಂದಿರೂ ಅವರ ಪಕ್ಕಾ ಶಿಷ್ಯರೇ. ಅವರ ಮಾತು ಇವರಿಗೆ ವೇದವಾಕ್ಯ. ತಮ್ಮನಿಗೆ ಹುಡುಗುತನ, ಅಷ್ಟಾಗಿ ಜ್ಯೋತಿಷ್ಯದಲ್ಲಿ ನಂಬಿಕೆಯಿಲ್ಲ. ಅಣ್ಣ ಅಂದರೆ (ನನ್ನ ಮಿತ್ರರು) ತುಂಬಾ ದೈವ ಭಕ್ತರು, ಎಲ್ಲಾ ವಿಷಯಕ್ಕೂ ಗುರುಗಳಾಜ್ಞೆಯನ್ನು ಶಿರಸಾವಹಿಸಿಮಾಡುವರು.

ನನ್ನ ಮಿತ್ರರೂ ಡಿಗ್ರಿ ಮುಗಿಸಿ (ಬಿ.ಕಾಂ.) ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಇಲಾಖೆಯಲ್ಲಿ ಗುಮಾಸ್ತ. ಜ್ಯೋತಿಷಿಗಳು ಹೇಳಿದ್ದರು. 'ತಾಳ್ಮೆಯಿಂದಿರು, ಶ್ರದ್ಧೆಯಿಂದ ಕೆಲಸ ಮಾಡುತ್ತಿರು' ಎಂದು. ಇವರ ಜಾತಕದ ಪ್ರಕಾರ 'ನಿನಗೆ ಇದೇ ಇಲಾಖೆಯಲ್ಲಿ ಬಹುಬೇಗ ಬಡ್ತಿಯಿದೆ' ತಮ್ಮನು ಬಾರದಿದ್ದರೂ ಅವನ ಜಾತಕವನ್ನು ತೋರಿಸಿದಾಗ 'ಅವನು ಮಹಾ ಪ್ರಚಂಡ, ಅತಿ ಬುದ್ಧಿಬಂತ, ಆದರೆ ಯೌವನದಲ್ಲಿ ಅವನ ಗ್ರಹಗತಿಗಳು ಸರಿಯಿಲ್ಲ- ಆಗ ಎಚ್ಚರಿಕೆ ! ನಾನು ಹೇಳಿದಂತೆ ಮಾಡು' ಎಂದಿದ್ದರು. ಆ ಮಾತು ನನ್ನ ಮಿತ್ರರ ಮನಸ್ಸಿಗೆ ಕಸಿವಿಸಿಯಾಗಿ ತಮ್ಮನಿಗೂ ತಂದೆತಾಯಿಗಳಿಗೂ ಎಚ್ಚರಿಕೆ ಕೊಟ್ಟಿದ್ದರು. ತಮ್ಮನ ಜಾಣತನ ವಿದ್ಯಾಭ್ಯಾಸ, ಅವನ ಚುರುಕುತನ ಅಣ್ಣನಿಗೆ ಹೆಮ್ಮೆ. ಆದರೂ ಮೈಯೆಲ್ಲಾ ಕಣ್ಣಾಗಿ ಅವನನ್ನು ನೋಡಿಕೊಂಡು, ಬುದ್ಧಿ ಹೇಳುತ್ತಿದ್ದರು. ಅವನು ಮಾತ್ರಾ ''ಎಲ್ಲವೂ ಶಾಸ್ತ್ರದಂತೆ ಆಗುತ್ತದಾ? ನನ್ನ ಹಣೆಯ ಬರೆಹ ಕೆಟ್ಟರೆ ನನ್ನ ಜಾತಕ ಏನು ಮಾಡುವುದು?'' ಎಂದು ಒರಟುತ್ತರ ಕೊಡುತ್ತಿದ್ದನು. ಅಣ್ಣ ಸಾಕಷ್ಟು ಬುದ್ಧಿ ಹೇಳುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಿಗ್ರಿ ಪಡೆದು ಅತ್ಯಂತ ಹೆಚ್ಚು ಅಂಕ ಪಡೆದವರಿಗೆ 'ಚಿನ್ನದ ಮೆಡಲ್ ಬಹುಮಾನ'. ಕಪ್ಪು ಪೋಷಾಕಿನಲ್ಲಿ ಮಹಾರಾಜರ ದರ್ಬಾರಿನಲ್ಲಿ ಇವರಿಗೆ ಗೌರವ. ತಮ್ಮನು ಅತ್ಯಂತ ಹೆಚ್ಚು ಅಂಕಗಳಿಸಿ, ಪ್ರಥಮ ರ್‍ಯಾಂಕ್ ಪಡೆದು 'ಸ್ವರ್ಣಪದಕ' ಪಡೆಯಲು ಸಿದ್ಧನಾದ. ಅಣ್ಣನಿಗೆ ಕಾತುರ - ತನ್ನ ತಮ್ಮನ ವಿದ್ಯಾಭಿವೃದ್ಧಿಗೆ ಶಾಸ್ತ್ರಿಗಳೇ ಕಾರಣವೆಂದು, ಆ ಗುರುಗಳಿಗೆ ವಿಷಯ ತಿಳಿಸಲು, ತಮ್ಮನ ಜಾತಕದೊಡನೆ ಗುರುಗಳ ಬಳಿಗೆ ಹೋದರು. 'ಸ್ವರ್ಣ ಪದಕ'ದ ಗೆಲುವಿಗೆ ಜ್ಯೋತಿಷಿಗಳಿಗೆ ತೃಪ್ತಿಯಾದರೂ, ಗ್ರಹಗತಿಗಳನ್ನು ನೋಡಿ, ಅಣ್ಣನಿಗೆ 'ಬೆಂಗಳೂರಿನಿಂದ ಮೈಸೂರಿಗೆ ಹೋಗದಿದ್ದರಾಗದೇ? ಸ್ವರ್ಣಪದಕ ಇಲ್ಲಿಯೇ ಪಡೆಯಲಿ' ಎಂದರು. ಏಕೆಂದು ಗಾಬರಿಯಿಂದ 'ಅಣ್ಣ' ಪ್ರಶ್ನಿಸಿದಾಗ ಶಾಸ್ತ್ರಿಗಳು ಗಂಭೀರವಾಗಿ 'ನೋಡು! ನಾಳೆ ನಿಮ್ಮ ಕಾರ್ಯಕ್ರಮ ಮುಂದುವರಿಸಿ ಮಧ್ಯಾಹ್ನದೊಳಗೆ ಬೆಂಗಳೂರಿಗೆ ರೈಲಿನಲ್ಲಿ ಹಿಂದಿರುಗಬೇಕು. ಏಕೆಂದು ಕೇಳಬೇಡ. ಬೇರಾವ ಕಾರ್ಯಕ್ರಮ ಮೈಸೂರಿನಲ್ಲಾಗಲೀ, ಮತ್ತೆಲ್ಲಾದರಾಗಲೀ, ಖಂಡಿತಾ ಕೂಡದು ಎಂದು ಎಚ್ಚರಿಕೆ ಕೊಟ್ಟರು. ಆತಂಕ ಅನುಮಾನಗಳಿಂದ ಅಣ್ಣ ಹಿಂದಿರುಗಿದರು. ವಿಷಯವನ್ನು ತಂದೆ ತಾಯಿಗಳಿಗಾಗಲೀ, ತಮ್ಮನಿಗಾಗಲೀ ತಿಳಿಸದೇ ಜಾಗರೂಕರಾಗದ್ದು, ಮಾತಾಪಿತೃಗಳನ್ನು ಕರೆದುಕೊಂಡು ತಮ್ಮನ ಜತೆ ಮೈಸೂರಿಗೆ ಅಂದು ರಾತ್ರೆಯೇ ಪ್ರಯಾಣ ಬೆಳಸಿದರು. ಮಾರನೆಯದಿನ 11.00 ರಿಂದ 3.00 ಗಂಟೆಯ ಒಳಗೆ ಕಾರ್ಯಕ್ರಮ ಮುಗಿಯಿತು. ಎಲ್ಲವೂ ಸುಸೂತ್ರ. ಎಲ್ಲರಿಗೂ ಹಿರಿ ಹಿಗ್ಗು. ಅಣ್ಣನಿಗೆ ಮಾತ್ರಾ ಆತಂಕ. ಆದಷ್ಟು ಬೇಗ ಬೆಂಗಳೂರಿಗೆ ಹಿಂದಿರುಗೋಣವೆಂದ. ಆದರೆ ತಮ್ಮ ಒತ್ತಾಯಮಾಡಿದ, 'ಅಣ್ಣಾ ! ಇಷ್ಟು ದೂರ ಬಂದಿದ್ದೇವೆ, ಮನೆ ದೇವರು ನಂಜನಗೂಡು ನಂಜುಂಡೇಶ್ವರನ ದರ್ಶನ ಮಾಡಿ ಹೋಗೋಣ. ತಂದೆ ತಾಯಿಗಳೂ ದನಿ ಗೂಡಿಸಿದರು. 'ಲೋ ಮಗೂ ಇಷ್ಟು ದೂರ ಬಂದಿದ್ದೇವೆ. ಹೇಗೂ ನಂಜುಂಡೇಶ್ವರ ನಮ್ಮ ಮನೆ ದೇವರು. ಆತನನ್ನು ನೋಡಿಕೊಂಡು ನಾಳೆ ಬೆಂಗಳೂರಿಗೆ ಹೋಗೋಣ' ಎಂದರು. ಅನಿವಾರ್ಯವಾಗಿ ಅಣ್ಣ "ತಂದೆತಾಯಿಗಳಿಗೂ, ತಮ್ಮನಿಗೂ ಗುರುವಾಕ್ಯ ತಿಳಿಸಿ ಮೈಸೂರಿನಿಂದ ಎಲ್ಲೂ ಹೋಗಕೂಡದು. ತಕ್ಷಣವೇ ಸಾಯಂಕಾಲದೊಳಗೆ ಹಿಂದಿರುಗಿ" ಎಂದಿದ್ದಾರೆ ಎಂದರು. ಆದರೆ ತಮ್ಮನ ಒತ್ತಾಯ : ಅಣ್ಣಾ! ದೇವರ ದರ್ಶನಕ್ಕೂ ಗುರುಗಳು ಬೇಕೆ? ದಯಮಾಡಿ ಹೋಗೋಣ ನಡಿ' ಎಂದು ಒತ್ತಾಯಿಸಿದ - ತಂದೆ ತಾಯಿಗಳಿಗೂ ಗುರುಗಳ ಮಾತು 'ತೆಗೆದುಹಾಕುವಂತಿಲ್ಲ' ಎನ್ನಿಸಿದರೂ, ಮನೆದೇವರ ದರ್ಶನ ಬಾಧಿಸಿತು. 'ನಂಜನಗೂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ನಂಜುಂಡನನ್ನು ನೋಡಲೇ ನಾವು ಹೋಗುತ್ತಿರುವಾಗ ಆತನೇ ನಮಗೆ ರಕ್ಷಕ' ಎಂಬ ಉದ್ಗಾರ ತೆಗೆದು ಹೊರಟೇ ಬಿಟ್ಟರು. ಸಾಯಂಕಾಲ ಯಾವುದೋ ಹೋಟೆಲ್‌ನಲ್ಲಿ ತಂಗಿದ್ದು, ರಾತ್ರೆಯೇ ಸ್ವಾಮಿಯ ದರ್ಶನಮಾಡಾಯಿತು. 'ಬೆಳಿಗ್ಗೆ ಎದ್ದು ಹೊರಡುವಾ ಎಂದು ಅಣ್ಣ ಹೇಳಿದರು. ತಂದೆ ತಾಯಿಗಳು 'ಎಲ್ಲಾದರೂ ಉಂಟೆ, ಇಷ್ಟು ದೂರ ಬಂದಿದ್ದೇವೆ, ಬೆಳಗಿನ ಝಾವವೇ ಪವಿತ್ರ ನದಿಯಲ್ಲಿ ಮಿಂದು ಪುನಃ ನಂಜುಂಡನನ್ನು ದರ್ಶಿಸಿ ಹೋಗೋಣ' ಎಂದರು. ತಮ್ಮನೂ ದನಿಗೂಡಿಸಿದ. ಅವನಿಗೆ ಈಜುವ ಇಷ್ಟ. ತುಂಬಿದ ಕಪಿಲೆಯಲ್ಲಿ ಮನಸಾರೆ ಈಜುವ ಚಟ. ಆದರೆ ಅಣ್ಣ ಒಂದು ನಿಬಂಧನೆ ಮುಂದಿಟ್ಟರು. 'ಯಾವುದೇ ಕಾರಣಕ್ಕೂ ಈಜಕೂಡದು. ತಂಬಿಗೆಯಲ್ಲಿ ತಲೆಗೆ ಸ್ನಾನಮಾಡಿ, ಹಿಂದಿರುಗಬೇಕು – ಈ ಆಶ್ವಾಸನೆ ಕೊಟ್ಟರೆ ನದಿಯ ಸ್ನಾನ' ಎಂದರು. ತಮ್ಮ ಮೇಲ್ನೋಟಕ್ಕೆ 'ಹೂಂ' ಎಂದ.

ನಾಲ್ವರೂ ಒಟ್ಟಿಗೆ ಕಪಿಲಾ ನದೀ ದಡಕ್ಕೆ ಸಾಗಿದರು. ತಂದೆತಾಯಿಗಳನ್ನು ಒಂದು ಸ್ನಾನಘಟ್ಟದಲ್ಲಿ ಬಿಟ್ಟು, ಅಲ್ಲಿ ಜನ ಜಾಸ್ತಿ ಇದ್ದು, ಅಣ್ಣ ತಮ್ಮಂದಿರು ಮುಂದೆ ಸಾಗಿದರು. ಅಲ್ಲಿ ಬರಿಯ ಹೆಣ್ಣುಮಕ್ಕಳು, ಅದೂ ಕೂಡದೆಂದು ಇನ್ನೂ ಮುಂದಕ್ಕೆ ಸಾಗಿದರು. ಅಲ್ಲಿ ತಿಳಿಯ ಪ್ರವಾಹ, ನಿರ್ಮಲ ನೀರು, ಯಾರೂ ಇಲ್ಲ ಈರ್ವರೇ' – ಅಲ್ಲಿ ಸ್ನಾನಮಾಡುವ ಎಂದುಕೊಂಡರು. ಅದು ಮಣಿಕರ್ಣಿಕಾ ಸ್ನಾನಘಟ್ಟ. ಇನ್ನೇನು ಬಟ್ಟೆ ಬಿಚ್ಚಿ ಸ್ನಾನಕ್ಕಿಳಿಯಬೇಕು, ದನಕಾಯುವ ಯಾವುದೋ ಹುಡುಗ ಹತ್ತಿರ ಬಂದು 'ಅಣ್ಣಾ! ಇಲ್ಲಿ ಸ್ನಾನ ಮಾಡಬ್ಯಾಡಿ – ಇಲ್ಲಿ ಸುಳಿವಿದೆ – ಈಜಿದರೆ ಸುಳಿವು ಎಳೆದೊಯ್ಯುತ್ತೆ – ಒಂದು ವಾರದ ಹಿಂದೆ ಒಬ್ಬ ಮುಳುಗಿ ಹೆಣವಾದ' ಎಂದು ಎಚ್ಚರಿಕೆ ಕೊಟ್ಟ. ನನ್ನ ಮಿತ್ರರು ಗುರುಗಳ ವಾಕ್ಯ ನೆನೆದು ತುಂಬಾ ಗಾಬರಿಯಿಂದ ತಮ್ಮನಿಗೆ 'ಲೋ ತಮ್ಮಾ! ಈಜಕೂಡದು, ತಂಬಿಗೆಯಲ್ಲಿ ನೀರು ಹಾಕಿಕೊ, ಮೈ ಒರೆಸಿಕೊ ಎಂದರು. ಅಣ್ಣ ತಂಬಿಗೆ ನೀರು ಹಾಕಿಕೊಂಡು ಕಣ್ಣು ಬಿಡುವಷ್ಟರಲ್ಲಿ ತಮ್ಮ ನೀರಿನೊಕ್ಕೆ ಧುಮಿಕಿ ಈಜಲು ಪ್ರಾರಂಭಿಸಿದ್ದ. ಅಣ್ಣ ಕಕ್ಕಾವಿಕ್ಕಿಯಾಗಿ ತನಗೆ ಈಜಲು ಬಾರದು, ತಮ್ಮನನ್ನು ಕುರಿತು 'ಬೇಗ ಬಾ' ಎಂದು ಅಂಗಲಾಚಿದ. ಆದರೆ ವಿಧಿ ನಿಯಮ ಬೇರೆ, 'ಇಕೋ ಬಂದೆ' ಎಂದು ಕಿರಿಚಿ ಸುಮಾರು 10-15 ಅಡಿ ದೂರ ಸಾಗಿದ. ಮೃತ್ಯು ಕಾಯುತ್ತಲಿತ್ತು. ಅವನಿಗರಿವಿಲ್ಲದೇ ಸುಳಿಗೆ ಸಿಕ್ಕಿಕೊಂಡ. ಕೈ ಮೇಲಕ್ಕೆ ಚಾಚಿ 'ಅಣ್ಣಾ ! ಉಳಿಸು' ಎಂದು ಅರಚಿದ. ದುಃಖಪೂರಿತನಾದ ಅಣ್ಣ, "ಈಜಲುಬಾರದು ಯಾರಾದರೂ ಬನ್ನಿ ನನ್ನ ತಮ್ಮನನ್ನು ಉಳಿಸಿ" ಎಂದು ಸುತ್ತಲೂ ತಿರುಗಿ ಅರಚಿದರು. ಯಾರೂ ಇಲ್ಲ –

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡುನೋಡುತ್ತಿದ್ದಂತೆ ಕಪಿಲೆಯ ಆ ಮಹಾ ಪ್ರಪಾತದಲ್ಲಿ ತಮ್ಮ ನಿರ್ಜೀವನಾದ. ಗಾಬರಿಯಿಂದ ಬೆತ್ತಲೆಯಲ್ಲಿಯೇ ಅಣ್ಣ ಓಡಿದ. ತಂದೆ ತಾಯಿಗಳು ಬಂದರು - ಜನ ಸೇರಿದರು. 'ಗೊಳೋ ಗೊಳೋ ಎಂದು ಅಂಗಲಾಚಿದ ಅಣ್ಣ 'ತನ್ನ ತಮ್ಮನನ್ನು ಯಾರಾದರೂ ಉಳಿಸಿ ನೀವು ಕೇಳಿದಷ್ಟು ಹಣ ಕೊಡುವೆ' ಎಂದರು. ಕಟ್ಟುಮಸ್ತಾದ ಈರ್ವರು ಈಜುಗಾರರು ಧೈರ್ಯವಾಗಿ ನೀರೊಳಗೆ ಧುಮುಕಿದರು. ಅಷ್ಟು ಹೊತ್ತಿಗೆ ತಮ್ಮ ಮುಳುಗಿ 15-20 ನಿಮಿಷಗಳಾಗಿವೆ. ಸುಮಾರು ಒಂದು ಗಂಟೆ ತಡಕಾಡಿ ಕೊನೆಗೂ ತಮ್ಮನ ಶವವನ್ನು ಮೇಲ್ತಂದರು. ತಂದೆತಾಯಿಗಳಿಗೂ, ಅಣ್ಣನಿಗೂ ತಡೆಯಲಾರದ ದುಃಖ. ತಂದೆತಾಯಿಗಳು ಹಿರಿಯಮಗನನ್ನು ನೋಡಿ, ಗುರುಗಳನ್ನು ಸ್ಮರಿಸಿ, ತಮ್ಮನ್ನು ತಾವೇ ಮನಸಾರೆ ನಿಂದಿಸಿಕೊಂಡರು. ಅಣ್ಣ ಮಂಕಾದ, ಗುರುಗಳಿಗೆ ಏನು ಹೇಳಲೂ ತೋಚದು. ಎಂತಹ ತಪ್ಪು ಮಾಡಿದೆ. ಗುರುವಾಜ್ಞೆಯಂತೆ, ನಾವು ಮೈಸೂರಿನಿಂದ ಬೆಂಗಳೂರಿಗೆ ಹಿಂದಿರುಗದೆ ನನ್ನ ತಮ್ಮನನ್ನು ಕಪಿಲೆಗೆ ಬಲಿಕೊಟ್ಟೆ. ನನ್ನಂತಹ ದ್ರೋಹಿ ಯಾರು ? ಎಂದು ಎದೆ ಎದೆ ಬಡಿದುಕೊಂಡು ಅತ್ತರು. ಪೋಲೀಸ್ 'ಮಹಜರ್' - ಶವಸಂಸ್ಕಾರ ನಡೆದು ಮೂವರೂ ಬೆಂಗಳೂರಿಗೆ ಹಿಂದಿರುಗಿದರು. ನಾಲ್ಕಾರು ದಿನಗಳ ತರುವಾಯ ಗುರುಗಳ ದರ್ಶನ - ಅಣ್ಣನೊಬ್ಬನೇ. ಸ್ವರ್ಣಪದಕವನ್ನು ಗುರುಗಳಿಗೆ ತೋರಿಸಿ ಅವರು ಸಂತೃಪ್ತರಾಗಿ ಆಶೀರ್ವದಿಸಿದರು. ಆದರೆ ಕತೆಯನ್ನು ಕೇಳಿ ಮಂಕುಬಡಿದಂತಾದರು. ಅಣ್ಣನನ್ನು ಕುರಿತು 'ಎಂತಹ ತಪ್ಪು ಮಾಡಿದೆ ? ನಾನು ಮುನ್ನೆಚ್ಚರಿಕೆ ಕೊಟ್ಟಿದ್ದರೂ, ನೀನು ಮಾತಾಪಿತೃಗಳನ್ನೂ, ತಮ್ಮನನ್ನೂ ತಡೆಯದಾದೆ' ಆದರೇನು ? ನಾನು ಕಾಲಜ್ಞಾನಿಯೇ ಹೊರತು ಮೃತ್ಯುವನ್ನು ತಡೆಗಟ್ಟಲಾರೆ. ಒಂದಲ್ಲ ಒಂದು ದಿನ 'ಶನಿ'ಯ ಕ್ರೂರ ಕೃಷ್ಟಿ ಬಿದ್ದಾಗ ನಾನೂ ನೀನೂ ಸಾಯಲೇಬೇಕು. ಇದನ್ನೇ 'ಹರಿಚಿತ್ತಸತ್ಯ' ಎನ್ನುವುದು. ಇನ್ನೇನು ಮಾಡೀಯೆ. ಕರ್ಮಾದಿಗಳನ್ನು ಪೂರೈಸಿ ತಂದೆ ತಾಯಿಗಳನ್ನು ನೋಡಿಕೊ - ನಿನ್ನ ಭವಿಷ್ಯ ಚೆನ್ನಾಗಿದೆ ಆದರೂ ಎಚ್ಚರ ! ಎಂದು ಅಣ್ಣನನ್ನು ಬೀಳ್ಕೊಟ್ಟರು.

ಅಣ್ಣನಿಗೆ ಈಚೆಗೆ 10-15 ವರ್ಷದ ಸ್ನೇಹಿತ ನಾನು. ನನ್ನ ಹತ್ತಿರ ಆತ್ಮೀಯವಾಗಿ ತಮ್ಮ ಯೌವನದ ದುಃಖವನ್ನು ಶ್ರುತಪಡಿಸಿದರು. ನನಗೂ ಕತೆಕೇಳಿ ದುಃಖ ಉಮ್ಮಳಿಸಿತು. ಹೇ! ನಂಜುಂಡಾ ನಾವೆಲ್ಲಾ ನಿನ್ನನ್ನು ನಂಬುವುದು ಹೇಗೆ? ಆದರೂ ವಿಧಿಯಿಲ್ಲ ನಿನ್ನನ್ನೇ ನಂಬಬೇಕು ಎಂದು ಸುಮ್ಮನಾಗಿ, ಉಕ್ಕಿ ಬಂದ ದುಃಖಾಶ್ರುಗಳನ್ನು ಒರೆಸಿಕೊಂಡೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಿತೀಯ ಕತೆ (ಸುಖಾಂತ)

ಇದೇ ಮಿತ್ರರ ಇನ್ನೊಂದು ಕತೆ. ಇವರೂ 'ಕೈಗಾರಿಕಾ ಮತ್ತು ವ್ಯವಹಾರ ಇಲಾಖೆಯಲ್ಲಿ ಬಡ್ತಿ ಪಡೆಯುತ್ತಾ ಮೇಲಕ್ಕೇರಿದರು. ಸುಮಾರು 24-25 ವರ್ಷ ಸರ್ವೀಸ್ ಕಳೆದಿದೆ. ಮುಂದಿನ ಬಡ್ತಿ ನಿರ್ದೇಶಕರ (Director) ಹುದ್ದೆ. ಇವರ ಮೇಲೆ 8 ಜನ ಬಡ್ತಿಗೆ ಪಟ್ಟಿಯಲ್ಲಿ ಬಂದಿರುವವರು, ಇವರಿಗೆ ಆ ವರ್ಷ ಬಡ್ತಿ ದೊರೆಯದಿದ್ದರೆ, ಇನ್ನು ಮುಪ್ಪಿನಲ್ಲಿ ಬಡ್ತಿ. ಕಂಗಾಲಾಗಿ ಗುರುಗಳಲ್ಲಿ ಹೋಗಿ ಜಾತಕ ತೋರಿಸಿ ವಿಚಾರಿಸಿದರು. ಇರುವುದು 8 ಜನಕ್ಕೆ ಅವಕಾಶ, ಇವರು ಒಂಬತ್ತನೆಯವರು. ಗುರುಗಳು ಜಾತಕ ನೋಡಿ, ನಿನಗೆ ಈ ಬಾರಿ ನಿರ್ದೇಶಕರ ಹುದ್ದೆಗೆ ಬಡ್ತಿ ಗ್ಯಾರಂಟಿ ಎಂದರು. ಇವರು ತಡಯಲಾಗದೆ, 'ಗುರೂ ಜಿ' ಹೇಗೆ ಸಾಧ್ಯಾ? ಇರುವುದೇ ಎಂಟು ಹುದ್ದೆ ಪಟ್ಟಿ ಬಂದಾಗಿದೆ, ನಾನು ಒಂಬತ್ತನೆಯವನು, ಎಂಟು ಜನಕ್ಕೆ ಮಾತ್ರಾ ಬಡ್ತಿ, ನನಗೆ ಹೇಗೆ ಸಾಧ್ಯಾ? ನಾನು ಲೆಕ್ಕದಲ್ಲೇ ಇಲ್ಲ' ಎಂದೆ. ಅವರು ಬೆರಳುಗಳಿಂದ ಲೆಕ್ಕಾಚಾರ ಮಾಡಿ 'ನೋಡಯ್ಯಾ ಇದೆಲ್ಲಾ ಇತ್ಯರ್ಥವಾಗಲು ಎರಡು ತಿಂಗಳಿದೆ. ಹೌದೇ?' ಎಂದರು. ಇವರು 'ಹೌದು' ಎಂದರು. ನಿನ್ನ ಹೆಸರು ಪಟ್ಟಿಯಲ್ಲಿಲ್ಲ. ಇರುವುದು 'ಎಂಟೇ' ಬಡ್ತಿ. ಆಗಲೇ ಅವರ ಹೆಸರು ಬಂದು ಮೈಸೂರು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಗೂ 'ಸುತ್ತೋಲೆ' ಹೋಗಿದೆ. 'ಹೌದೇ?' ಎಂದರು. ಇವರು 'ಹೌದು' ಎಂದರು. ಜೊತೆಗೆ ಇವರು - 'ಗುರುಗಳೇ ಇಷ್ಟೆಲ್ಲಾ ಇರುವಾಗ ನನಗೆ ಸುಳ್ಳು ಆಶ್ವಾಸನೆ ಕೊಡುತ್ತಿದ್ದೀರಿ' ಎಂದರು. ಗುರುಗಳು ಕೋಪದಿಂದ 'ನನ್ನನ್ನು ಪರೀಕ್ಷಿಸುವೆಯಾ? ನನ್ನ ಮಾತು ಸುಳ್ಳಾದರೆ ಜ್ಯೋತಿಷ್ಯ ಬಿಟ್ಟು ಬಿಡುವೆ, ಹೋಗು' ಎಂದು ಖಡಾಖಂಡಿತವಾಗಿ ಗುಡುಗಿದರು. ಇವರೂ ಪೆಚ್ಚಾಗಿ ಹಿಂದಿರುಗಿದರು.

ಒಂದು ಮಾಸವುರುಳಿತು. ಎರಡನೇ ಮಾಸವೂ ಉರುಳುತ್ತಾ ಬಂದಿತು. ನನ್ನ ಮಿತ್ರರು ಹಾಸನದಲ್ಲಿ 'ಉಪನಿರ್ದೇಶಕ'ರಾಗಿದ್ದಾರೆ. ಇನ್ನು ಕೇವಲ ಮೂರು ದಿನ ಉಳಿದಿದೆ. ಎಲ್ಲರೂ ಹಿರಿಯರ ಬಡ್ತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಅಲ್ಲಿಯೇ ಕೆಲವರು ಇವರನ್ನು ಕುರಿತು 'ಏನ್ ಸಾರ್ ! ನಿಮಗೂ ಸರ್ವೀಸ್ ಆಗಿದೆ ನೀವೂ ಅರ್ಹರೇ. ಇನ್ನೊಂದು ಹುದ್ದೆ ಬಡ್ತಿಗೆ ಇದ್ದಿದ್ದರೆ?' ಅಂದರು. ಇವರು 'ಬಿಡಯ್ಯಾ - ಈಗಲ್ಲ ಮುಂದಿನ ಸಾರಿ ಇನ್ನೂ 3 - 4 ವರ್ಷದ ನಂತರ - ಕಾಯೋಣ' ಎಂದರು. ಬಡ್ತಿ, ಅಧಿ ಕಾರ ಸ್ವೀಕಾರದ ಪತ್ರಗಳೆಲ್ಲಾ ಅಂಚೆಯ ಮೂಲಕ ಪಟ್ಟಿಯೊಡನೆ ಇಲಾಖೆಯ ಜಿಲ್ಲಾ ಕೇಂದ್ರಗಳಿಗೆ ಬಂದಾಯಿತು. ಹಾಸನಕ್ಕೂ ಬಂದಿತು. ಇವರು ಪಟ್ಟಿಯನ್ನು ನೋಡುತ್ತಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೆಟ್ಟುಮೋರೆ ಹಾಕಿಕೊಂಡು 'ಗುರುಗಳ ಮಾತು ಸುಳ್ಳು ಇನ್ನಾವ ಬಡ್ತಿ? ನನ್ನ ಹಣೆಯ ಬರೆಹ ಇಷ್ಟೇ' ಎಂದುಕೊಂಡರು. ಬಡ್ತಿಯ ದಿವಸ ಬಂದೇ ಬಿಟ್ಟಿತು. ಅಂದು ಶನಿವಾರ. ಅರ್ಧ ದಿವಸ ಕೆಲಸ. ಇನ್ನೇನು ಗಂಟೆ ಹನ್ನೊಂದಾಗಿದೆ. ಬೆಂಗಳೂರಿನಿಂದ ಶ್ರೀಯುತರಿಗೆ 'ಫೋನ್' ತತ್‍ಕ್ಷಣ ಹಾಸನದ ಆಫೀಸ್ ಜವಾಬ್ದಾರಿ (ನಿರ್ದೇಶಕರು ರಜಾ ಆದ್ದರಿಂದ ಉಪನಿರ್ದೇಶಕರದೇ ಜವಾಬ್ದಾರಿ) ಮ್ಯಾನೇಜರ್‌ಗೆ ವಹಿಸಿ, ಇಂದೇ ಸಾಯಂಕಾಲದ ಒಳಗೆ ಶಿವಮೊಗ್ಗ ತಲುಪುವುದು. ಅಲ್ಲಿಗೆ ನೀವೂ 'ಫೋನ್' ಮಾಡಿ, ಅವರು ಕಾಯುತ್ತಿರುವರು – ನಾವು 'ಫೋನ್' ಮಾಡಿ ಆಗಿದೆ. ಮಿಕ್ಕ ವಿಷಯ ನಂತರ – ನೀವು ಇಂದೇ ಹೋಗಿ ಅಲ್ಲಿನ ನಿರ್ದೇಶಕರ ಹುದ್ದೆ ಛಾರ್ಜ್ ವಹಿಸಿಕೊಳ್ಳುವುದು''. 'ಇವರಿಗೆ ಖೇದಾಶ್ಚರ್ಯ. ತಮ್ಮನ್ನು ತಾವೇ ನಂಬದಾದರು 'ಡೈರಿ' ಯನ್ನು ತೆಗೆದು ನೋಡಿದರೆ 'ಗುರುಗಳ ಮಾತು ಸತ್ಯವಾಗಿದೆ – ಅದೇ ತಾರೀಖಿಗೆ ಮಧ್ಯಾಹ್ನ ನಿನ್ನ ಬಡ್ತಿ' ಎಂದು ಬರೆದಿದ್ದಾರೆ. ಆನಂದವಾಯಿತು – ಮಹದಾನಂದವಾಯಿತು. ಜ್ಯೋತಿಷ್ಯದಲ್ಲಿ ನಂಬಿಕೆ ಬಂದಿತು. ಎಂಟು ಜನಕ್ಕೆ ಮಾತ್ರ ಬಡ್ತಿ ನಾನು ಒಂಬತ್ತನೆಯವ ಇದು ಹೇಗೆ? ಎನ್ನುತ್ತಾ, ಚುರುಕಾಗಿ ಎಲ್ಲಾ ಜವಾಬ್ದಾರಿಯನ್ನೂ ಮ್ಯಾನೇಜರ್‌ಗೆ ವಹಿಸಿ, ಶಿವಮೊಗ್ಗೆಗೆ ಹೊರಟರು. ಅವರು ಬರುವುದು ಸಾಯಂಕಾಲವಾದರೂ ಎಲ್ಲರೂ ಕಾದಿದ್ದಾರೆ. ಅಧಿಕಾರಿಗಳು ಅನೇಕರು ಪರಿಚಿತರೇ. ಹಾರ ತುರಾಯಿ ಸಮರ್ಪಣೆ, ಹಸ್ತಲಾಘವ, ನಿರ್ದೇಶಕರ ಹುದ್ದೆ ಪದವಿ ಸ್ವೀಕಾರ ಸಮಾರಂಭ – ಅಚ್ಚುಕಟ್ಟಾಗಿ ನಡೆಯಿತು. ಅಂದೇ ಸಾಯಂಕಾಲ 'ಟೆಲಿಗ್ರಾಂ' ಸಂದೇಶ. ಎಂಟು ಜನ ಬಡ್ತಿಯವರಲ್ಲಿ ಓರ್ವ ಹಠಾತ್ 'ಹೃದಯ ಬೇನೆ – ಸಾವು' ಆ ಜಾಗಕ್ಕೆ ಮುಂದಿನ ವ್ಯಕ್ತಿ ಈ ಅಣ್ಣನವರು. ನಂಬಲಾರದೆ ನಂಬಿದರು. ಅಂದು ರಾತ್ರೆಯೇ ತಡವಾಗಿ ಬೆಂಗಳೂರಿಗೆ ಪ್ರಯಾಣ. ಮಾರನೆಯ ದಿನವೇ ಪತ್ನೀ ಪುತ್ರರೊಡನೆ ಗುರುಗಳ ದರ್ಶನ. ಫಲಪುಷ್ಪಾರ್ಪಣೆ – ದೀರ್ಘದಂಡ ನಮಸ್ಕಾರ. ಸುತ್ತೋಲೆಯನ್ನು ಅವರಿಗರ್ಪಿಸಿ ಕೈಕಟ್ಟಿ ನಿಂತರು.

ಗುರೂಜಿ ಸುತ್ತೋಲೆಯನ್ನು ಓದಿ 'ಏನಯ್ಯಾ ನನ್ನ ಜ್ಯೋತಿಷ್ಯ ನಿಜವೋ? ನಿನ್ನ ಸಂಶಯ ನಿಜವೋ ? ಎಂದು ಹುಸಿನಗೆ ನಕ್ಕರು.

ಅಣ್ಣನವರು ಆನಂದ ತುಂದಿಲರಾಗಿ 'ನನ್ನನ್ನು ಕ್ಷಮಿಸಿ ಗುರುಗಳೇ' ಎಂದು ಹೇಳುತ್ತಾ ಪತ್ನೀ ಪುತ್ರರೊಡನೆ ಸಾಷ್ಟಾಂಗ ಪ್ರಣಾಮ ಮಾಡಿದರು.

ಗುರುಗಳು ನಗುತ್ತಾ 'ನನ್ನ ಮಾತು ಸುಳ್ಳೇನಯ್ಯಾ? ''ಹರಿಚಿತ್ತ ಸತ್ಯ'' ಎಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುಗಳು ತಮ್ಮನನ್ನು ಜ್ಞಾಪಿಸಿ, ಅಂದು ಅವನು ಹಿಂದಿರುಗಿದ್ದರೆ, ಪರಿಹಾರ ಯೋಚಿಸಿದ್ದೆ. ಆದರೆ ದೈವಶಕ್ತಿಯ ಮುಂದೆ ಮಾನವಶಕ್ತಿ ಅಲ್ಪ ತಿಳಿಯಿತೇ? ಅಂದರು.

ಅಣ್ಣ ನನಗೆ ಹೇಳಿದರು "ಗುರುಗಳೂ ಕಾಲವಾದರು. ನನಗೂ ವಯಸ್ಸಾಗಿದೆ. ನಮ್ಮ ತಾಯ್ತಂದೆಗಳೂ ಕಾಲವಾದರು, ಈಗ ಕಲ್ಲೂರಿನ ಶ್ರೀರಾಮಸೇವೆ 'ನನಗೂ, ನಿಮಗೂ' ಎಂದರು. ಅಣ್ಣ ಮುಂದುವರಿದರು. ನಾನು ನಿವೃತ್ತನಾಗಿ 25 ವರ್ಷವಾಗಿದೆ. ನೋವು-ನಲಿವುಗಳು ನನಗೆ ಚಿರಸ್ಮರಣೀಯ" ಎಂದರು. ಮುಪ್ಪಿನ ಕಣ್ಣುಗಳಲ್ಲಿ ನೀರೂರಿತು.

ಮಗನೂ ಅದೇ ಇಲಾಖೆಯಲ್ಲಿ ಉಪನಿರ್ದೇಶಕ - ತುಂಬಿದ ಕುಟುಂಬ - ಎಲ್ಲರೂ ಶ್ರೀರಾಮದಯದಿಂದ ಸುಖವಾಗಿದ್ದಾರೆ.

ಇದು ಸುಖಾಂತ ಕತೆ.

ಇದುವೇ ಜೀವನದ ಸತ್ಯ "ಆವ ಬಲವಿದ್ದರೇನು ? ದೈವ ಬಲವಿಲ್ಲದ ಮೇಲೆ " ಎಂಬುದು ಕಟುಸತ್ಯವಲ್ಲವೇ.

ಸಂಗ್ರಹಕಾರ : ಲಕ್ಷ್ಮೀಕಾಂತ್ ಕಡಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಕಾಯುಕ್ತರು

(ಬುಡುಬುಡಿಕೆ ಪದ - ಜಾನಪದ ಲಾವಣಿ)

ಹಿನ್ನೆಲೆ ಹಾಡು : (ಬುಡುಬುಡಿಕೆ ವೇಷಧಾರಿ - ಬುಡುಬುಡಿಕೆ ನಾದ)

ಟಕಟಕ – ಟಕಟಕ : ಟಕಟಕ – ಟಕಟಕ ;

ಪ್ರಾರ್ಥನಾ ಪದ್ಯ :

ಪಲ್ಲವಿ : ॥ ಜಯತು ಜಯತು ಜಯ । ವಾಗಲಿ – ಗುರುವೇ ।
। ಜಯಲಕ್ಷ್ಮೀಯು । ಒಲಿಯಲಿ ಗುರುವೇ ॥ ಪ ॥

ಅನುಪಲ್ಲವಿ :

॥ ನೆನೆದ ಕಾರ್ಯವೂ । ನಡೆಯಲಿಗುರುವೇ ।
॥ ಮನದಲಿಹುದನ್ನು । ಹೇಳುವೆ ಗುರುವೇ ॥ ಅ.ಪ. ॥

ಚರಣಗಳು

(ಚಿಕ್ಕ ಸಂಸಾರ + ಒಬ್ಬ ಮಗ + ಒಬ್ಬ ಮಗಳು)
(ತಂದೆಗೆ ಸರಕಾರೀ ವೃತ್ತಿ + ತಾಯಿ ಗೃಹಿಣಿ)

ಹೋಯ್ : ಟಕಟಕ – ಟಕಟಕ (ನಾಲ್ಕು ಬಾರಿ) – ಬುಡುಬುಡಿಕೆನಾದ

(1) ॥ ಆಸ್ತಿ ಪಾಸ್ತಿ ಸೊಂ – ಪಾಗಲಿ ಗುರುವೇ ।
ಮನೆಗೆ ನೆಂಟರೂ ಬರದಿರ್ಲಿ ಗುರುವೇ ।
ಮಗನೂ ಮಗಳೂ ಚೆನ್ನಾಗಿರ್ಲಿ ಗುರುವೇ ।
ಸರ್ಕಾರಿ ಕೆಲಸ ದೊರೆಯಲಿ ಗುರುವೇ ॥

ಭ್ರಷ್ಟಾಚಾರ ಹಣ । ಸೇರಲಿ ಗುರುವೇ ।
ಯಾರ ಕಣ್ಣಿಗೂ ಬೀಳದಿರ್ಲಿ ಗುರುವೇ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಂತ ಲಕ್ಷ್ಮಿಯು - ಒಲಿಯಲಿಗುರುವೇ ।
ಅಷ್ಟಲಕ್ಷ್ಮಿ ನೃತ್ಯ ಮಾಡಲಿ ಗುರುವೇ ॥ 1 ॥

ಹೋಯ್ : ಟಕಟಕ - ಟಕಟಕ (ನಾಲ್ಕು ಬಾರಿ) - ಬುಡುಬುಡಿಕೆನಾದ.

(2) ॥ ಅಷ್ಟಾವಕ್ರನು - ನನ್ನ ಮಗನೂ ।
ಅಧ್ವಾನ ಮುಷುಡಿ ನನ್ನ ಮಗಳೂ ।
ಸುಂದರ ತರುಣಿ - ಸೊಸೆಯಾಗಿ ಬರಲೀ ।
ಬಂಗಾರದಳಿಯ - ದೊರಕಲಿ ಗುರುವೇ ।

ವಂಶಕ್ಕೊಂದು ಮಗು - ಸಾಕೂ ಗುರುವೇ ।
ಎರಡು ಮಕ್ಕಳು - ಬೇಡಾ ಗುರುವೇ ।
ದೊಡ್ಡ ಸೈಟು ಮಗ - ಮಾಡಲಿ ಗುರುವೇ ।
ಅಷ್ಟಂಕಣ ಮನೆ ಕಟ್ಟಲಿ ಗುರುವೇ ॥ 2 ॥

ಹೋಯ್ : ಟಕಟಕ - ಟಕಟಕ (ನಾಲ್ಕು ಬಾರಿ) ಬುಡುಬುಡಿಕೆ ನಾದ

(3) ॥ ಚಿಕ್ಕನೆ ವಾಸಾ - ಸಾಕಪ್ಪ ಗುರುವೇ ।
ದೊಡ್ಡ ಬಂಗಲೆಯು ಬೇಕಪ್ಪ ಗುರುವೇ ।
ಲೆಕ್ಕವಿಲ್ಲದಷ್ಟು ಹಣ - ಸೇರಲಿ ಗುರುವೇ ।
ಬ್ಯಾಂಕ್ ಲಾಕರ್ ಆಭರಣ ಬೆಳೆಯಲಿ ಗುರುವೇ ॥

ನಮ್ಮ ಹೆಸರಲಿ ತುಂಬಾ ಸೈಟುಗಳು ।
ಮಗನ ಹೆಸರಲಿ ತೋಟ ಗದ್ದೆಗಳು ।
ಸೊಸೆಯ ಹೆಸರಲಿ - ಷಾಪಿಂಗ್ ಕಾಂಪ್ಲೆಕ್ಸ್ ।
ಮೊಮ್ಮಕ್ಕಳ ಹೆಸರಲಿ ಪೆಟ್ರೋಲ್ ಬಂಕ್ ಗುರುವೇ ॥ 3 ॥

ಹೋಯ್ - ಟಕಟಕ -ಟಕಟಕ (ನಾಲ್ಕು ಬಾರಿ) ಬುಡುಬುಡಿಕೆನಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲ ಬದಲಿಸಿತು

(4) ॥ ನೆಮ್ಮದಿ ಜೀವನ ನಡೆಸುತ್ತಿದ್ದೆವು ।
ಆಡಳಿತ ಪಕ್ಷವು ನಮ್ಮದಾಗಿತ್ತು ।
ಲೋಕಾಯುಕ್ತರು ಬಂದರು ಗುರುವೇ ।
ಆಸ್ತಿ ಪಾಸ್ತಿ ಜಪ್ತಿ ಮಾಡಿದರು ಗುರುವೇ ॥

ಸಂಪಾದನೆಗು ಆಸ್ತಿಗೂ ಏರು ಪೇರು ಗುರುವೇ ।
ಕೆಲಸಕು ಬಂದಿತು – ಸಂಚಕಾರ ಗುರುವೇ ।
ಸಪ್ಪೆ ಮುಖಮಾಡಿ – ಅಂಗಲಾಚಿದೆವು ।
ಲೋಕಾಯುಕ್ತರಿಗೆ. ಕರುಣೆಯಿಲ್ಲ ಗುರುವೇ ॥ 4 ॥

ಹೋಯ್ – ಟಕಟಕ – ಟಕಟಕ (ನಾಲ್ಕು ಬಾರಿ) – ಬುಡುಬುಡಿಕೆ ನಾದ.

(5) ॥ ಇದ್ದಾಗ ನೆಂಟರು – ಬರುತಿದ್ರು ಗುರುವೇ ।
ಇಲ್ಲದಿದ್ದಾಗ – ಯಾರಿಲ್ಲ ಗುರುವೇ ।
ಸಮಾಜದಲ್ಲಿ – ಹಿರಿಯನೆನಿಸಿದ್ದೆ ।
ಮಾನಮೂರ್ಕಾಸಾಯಿತು – ಯಾರಿಗೆ ಹೇಳ್ಲಿ ಗುರುವೇ ।

ಹೊಗಳಿದ ಜನರೇ – ತೆಗಳುತಲಲಿರುವರು ।
ನಮ್ಮನು ಕಂಡರೆ – ಅಸಹ್ಯ ಪಡುವರು ॥
ಬಾಲ್ಯದ ಬಡತನ – ನೆನಪಿಗೆ ಬಂದಿತು ।
ನಮಗೇ ನಾಚಿಕೆ – ನಮ್ಮಯ ಸ್ಥಿತಿಗೇ ॥ 5 ॥

(6) ॥ ಹಿರಿಯರ ಬುದ್ಧಿವಾದ – ಜ್ಞಾಪಕವಾಯಿತು ।
ಮಾನವಜನುಮವು – ಶಾಶ್ವತವಲ್ಲ ।
ದುರಾಸೆಯೆಂಬುದ – ದೂರವಿಡು ಗುರುವೇ ।
ಕೊಟ್ಟು ತಿನ್ನುವುದ – ಬೆಳಸಿಕೊ ಗುರುವೇ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ದಾನಧರ್ಮಗಳ – ಮರೆಯದಿರು ಗುರುವೇ ।
ಸತ್ತಾಗ ಆಸ್ತಿಯು – ಹಿಂದೆ ಬರುವುದಿಲ್ಲ ।
ಸ್ಥಾನಮಾನಗಳು ಲೆಕ್ಕಕೇ ಇಲ್ಲ ।
ತೃಪ್ತಿಯೆಂಬುದೇ – ಜೀವನದ ಸಂತೃಪ್ತಿ ॥ 6 ॥

ಹೋಯ್ : ಟಕಟಕ – ಟಕಟಕ (ನಾಲ್ಕು ಬಾರಿ) ಬುಡುಬುಡಿಕೆ ನಾದ)

ಪಲ್ಲವಿ – ಅನುಪಲ್ಲವಿ – ಪುನರಾವೃತ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಲಕ್ಷ್ಮೀಕಾಂತ್ ಕಡಬರವರ ಕೃತಿಗಳು

ನಿರೀಕ್ಷೆ

9-11-2001-ಅಮೆರಿಕಾ WTC (ವಿಶ್ವ ವಾಣಿಜ್ಯ ಕೇಂದ್ರ ಕಟ್ಟಡ) ಭಯೋತ್ಪಾದನಾ ಧಾಳಿಯ ದಾರುಣ ಕಥೆ

ನಾಮ ಕುಸುಮ ಮಾಲಾ

ನಿತ್ಯಪ್ರಾರ್ಥನಾ ಶ್ಲೋಕ ಮಾಲ - ರಾಗ ತಾಳ ಸಂಯೋಜನೆ - ಶ್ರೀ ಕಡಬರವರಿಂದ.
ಮುನ್ನುಡಿ - ಸಂಗೀತ ಕಲಾನಿಧಿ ಡಾ|| ಆರ್.ಕೆ. ಶ್ರೀಕಂಠನ್‌ರವರು

ಭಾರತದಿ ಬ್ರಾಹ್ಮಣರು

ಸಮಾಜದಲ್ಲಿನ ಉನ್ನತ ವರ್ಗವು ಸಾಮಾಜಿಕ ಶೋಷಣೆಯಿಂದ ತಮ್ಮತನವನ್ನು ಕಳೆದುಕೊಂಡಿರುವುದು-ಪರಿಹಾರ ? ತ್ರಿಮತಸ್ಥ ಮಠಾಧೀಶರಿಂದ ಹಾಗೂ ಇಪ್ಪತ್ತಕ್ಕೂ ಮೀರಿ ಸಮಾಜದ ಅತ್ಯಂತ ಪ್ರತಿಷ್ಠಿತ ವ್ಯಕ್ತಿಗಳಿಂದ ಸದ್ವಿಮರ್ಶೆ ಪಡೆದ ಶ್ರೇಷ್ಠ ಕೃತಿ.

ಸತ್ಯವಂತರಿಗಿದು ಕಾಲವಲ್ಲ

ಸ್ವಾತಂತ್ರ್ಯಪೂರ್ವ ಸ್ವಾತಂತ್ರ್ಯಾನಂತರದ ಭಾರತದ ಸ್ಥಿತಿಯನ್ನು ನಿರ್ದಾಕ್ಷಿಣ್ಯವಾಗಿ ವಿವರಿಸುವ ಜಾನಪದ ಲಾವಣಿ. ಭಾರತೀಯರು ಓದಲೇಬೇಕಾದ ಅತ್ಯಂತ ಶ್ರೇಷ್ಠಕೃತಿ. ಕನ್ನಡದಲ್ಲಿ ರಚನೆ-ರಾಗ ಸಂಯೋಜನೆ ಶ್ರೀ ಕಡಬರವರು. ಇಂಗ್ಲೀಷ್ ಭಾಷೆಗೆ ಭಾಷಾಂತರ ಹಾಗು ಕ್ಯಾಸೆಟ್ ಸಮರ್ಪಣೆ - ಶ್ರೀ ಕಡಬರವರಿಂದ.

ಭಾರತೀಯರಿಗೆ ದಾರಿದೀಪ - ಮೂರು ತಲೆಮಾರು !

(ಪುಸ್ತಕ ಮತ್ತು ಸಿಡಿ)

ವಿಮರ್ಶೆ ನಿವೃತ್ತ ರಾಜ್ಯಪಾಲ ಶ್ರೀ ರಾಮಜೋಯಿಸ್ ಮತ್ತು ಶ್ರೀ ಜಿ. ನಾರಾಯಣ್

ಆರು ಹಿತವರು ನಿನಗೆ... ಈ ಮೂವರೊಳಗೇ?

ಮೂರು ಜನಾಂಗಗಳ ವಿಮರ್ಶೆ. ಗದ್ಯ-ಪದ್ಯ ಮಿಶ್ರ (ಕ್ಯಾಸೆಟ್ ಮತ್ತು ಸಿ.ಡಿ.

ಹರಿದಾಸ ಕೀರ್ತನ ಗುಚ್ಛ (ಸಿ.ಡಿ.)

ಶಿವನಾಮ ಕೀರ್ತನ ಮತ್ತು ಶಿವಶರಣ ವಚನ ಗುಚ್ಛ (ಸಿ.ಡಿ.)

ಕುಮಾರವ್ಯಾಸನ ಕರ್ನಾಟ ಭಾರತದ ಕಥಾಮಂಜರಿ (ಸಿ.ಡಿ.)

(ಮಂಗಳಾಚರಣೆ ಪದ್ಯಗಳು) ಮತ್ತು

ರನ್ನನ ಗದಾಯುದ್ಧ (ರಣರಂಗ ಗೀತೆಗಳು)

ನಾದಚಿಂತಾಮಣಿ ಸಂಗೀತ ವಿದ್ವಾನ್
ಲಕ್ಷ್ಮೀಕಾಂತ್ ಕಡಬ (ಸಂಸ್ಥಾಪಕ ನಿರ್ದೇಶಕರು)
ಅಮರಭಾರತಿ ಕಲಾವೃಂದ (ಬೆಂಗಳೂರು-ತುಮಕೂರು)
19/2, 'ಪೂರ್ವಪುಣ್ಯ', [illegible] 560 004.
ದೂರವಾಣಿ : 26760396 (ಮನೆ) 94492 62388(ಮೊಬೈಲ್)

Sri Vidyabharathi Book Centre, Sringeri